ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಮೇ 19 ಮಂಗಳವಾರ 2026

47

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ– ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871


ಸಂಪುಟ: 47 | ಸಂಚಿಕೆ: 33 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4

ದುಬಾರೆ ದುರಂತ!

ಆನೆಗಳ ಕಾದಾಟದಲ್ಲಿ ತಮಿಳ್ನಾಡು ಪ್ರವಾಸಿ ಮಹಿಳೆ ಬಲಿ

ಪತಿ, ಪುತ್ರಿ ಕಣ್ಣೆದುರೇ ದುರ್ಮರಣ; ಸಾಕಾನೆ ಶಿಬಿರದ ಬಳಿ ಘೋರ ಘಟನೆ


ಮಾರ್ತಾಂಡನ ಮೇಲೆ ಕಂಜನ್ ಭೀಕರ ದಾಳಿ.

ಕುಶಾಲನಗರ(ದುಬಾರೆ), ಮೇ 18(ಎಂಟಿವೈ)– ದುಬಾರೆ ಸಾಕಾನೆಗಳ ಶಿಬಿರದಲ್ಲಿ ಇಂದು ಘೋರ ದುರಂತವೊಂದು ನಡೆದುಹೋಗಿದೆ. ಅರಣ್ಯ ಇಲಾಖೆ ಸುರಕ್ಷಾ ಲೋಪದಿಂದಾಗಿ ಹೊರ ರಾಜ್ಯದ ಅಮಾಯಕ ಪ್ರವಾಸಿ ಮಹಿಳೆಯೊಬ್ಬರು ಜೀವ ಕಳೆದುಕೊಂಡಿದ್ದಾರೆ. ತನ್ನ ಗಂಡ ಹಾಗೂ ಹಸುಗೂಸಿನ ಕಣ್ಣ ಮುಂದೆಯೇ ಆನೆಗಳ ಕಾದಾಟದಲ್ಲಿ ಬಲಿಯಾಗಿದ್ದಾರೆ.

ದಸರಾ ಆನೆ ಕಂಜನ್ ಹಾಗೂ ಇದೇ ಶಿಬಿರದ ಮಾರ್ತಾಂಡ ನಡುವೆ ಭೀಕರ ಕಾಳಗವೇ ನಡೆದಿದೆ. ಇದರಲ್ಲಿ ತಮಿಳುನಾಡು ಮೂಲದ ಪ್ರವಾಸಿ ಮಹಿಳೆ ಸಾವನ್ನಪ್ಪಿದ್ದಾರೆ. ಮಾರ್ತಾಂಡ ಆನೆಗೂ ಗಂಭೀರ ಗಾಯಗಳಾಗಿವೆ. ಈ ಘಟನೆ ಬಳಿಕ ಕುಶಾಲನಗರದ ದುಬಾರೆ ಸಾಕಾನೆ ಶಿಬಿರ ಒಂದು ರೀತಿಯ ಶೋಕತಪ್ತ ಸ್ಥಳವಾಗಿ ಪರಿಣಮಿಸಿದೆ.

ಕೊಡಗು ಜಿಲ್ಲೆಯ ಕುಶಾಲನಗರದ ಪ್ರಸಿದ್ಧ ಆನೆ ಕ್ಯಾಂಪ್, ಪ್ರವಾಸಿ ತಾಣವೂ ಆಗಿರುವ ದುಬಾರೆ ಕ್ಯಾಂಪ್‌ನಲ್ಲಿನ ಆನೆಗಳ ವೀಕ್ಷಣೆಗೆ ಪ್ರತಿನಿತ್ಯವೂ ನೂರಾರು ಮಂದಿ ಬರುತ್ತಾರೆ. ಹಾಗೆಯೇ, ಪತಿ, ಚೆನ್ನೈ ಪಲ್ಲವರಂ ಮೂಲದ ಸಾಫ್ಟ್‌ವೇರ್ ಇಂಜಿನಿಯರ್ ಜೋಯೆಲ್ ಹಾಗೂ ಮಗುವಿನೊಂದಿಗೆ ಬಂದಿದ್ದ ಎಸ್.ಜೊಯಿಷಿ ಅಲಿಯಾಸ್ ಜಿನ್ನು ಅಲಿಯಾಸ್ ತುಳಸಿ(33) ಆನೆಗಳ ಆಕಸ್ಮಿಕ ಕಾಳಗದ ಕಾದಾಟದಲ್ಲಿ ಸಿಲುಕಿ ಮೃತಪಟ್ಟ ಪ್ರವಾಸಿ ಮಹಿಳೆ. ಪತಿ ಜೋಯೆಲ್ ಅವರಿಗೆ ಸಣ್ಣಪುಟ್ಟ ಗಾಯಗಳಾಗಿದ್ದರೆ, ಒಂದು ವರ್ಷ ಮಗಳಿಗೆ ಯಾವುದೇ ತೊಂದರೆಯಾಗಿಲ್ಲ.

ಏಕಾಏಕಿ ರೊಚ್ಚಿಗೆದ್ದ ಕಂಜನ್: ನಾಡಹಬ್ಬ ದಸರಾ ಮಹೋತ್ಸವದಲ್ಲಿ ಎರಡು ಬಾರಿ ಸಾಲಾನೆಯಾಗಿ ಪಾಲ್ಗೊಂಡು ಭರವಸೆ ಮೂಡಿಸಿದ್ದ ಕಂಜನ್(27)ನನ್ನು

■ 6ನೇ ಪುಟಕ್ಕೆ


ಮೃತ ಜಿನ್ನು

ಪತ್ನಿಯನ್ನು ಉಳಿಸಿಕೊಳ್ಳಲಾಗಲಿಲ್ಲ: ನೇತ್ರದಾನ ಮಾಡಿದ್ದೇನೆ

ನಾವು ಪ್ರವಾಸಕ್ಕೆ ಬಂದು ಆನೆಯನ್ನು ನೋಡುತ್ತಿದ್ದೆವು. ಆಗ ಒಂದು ಆನೆ ಇನ್ನೊಂದು ಆನೆ ಮೇಲೆ ದಾಳಿ ನಡೆಸಲು ಮುಂದಾಯಿತು. ಆ ಆನೆಗಳು ನಾವಿದ್ದ ಸ್ಥಳದತ್ತ ಬಂದವು. ಆಗ ಆಯ ತಪ್ಪಿ ತನ್ನ ಪತ್ನಿ ಜಿನ್ನು ಕೆಳಗೆ ಬಿದ್ದರು. ನಾನು ಅವರನ್ನು ರಕ್ಷಿಸಲು ತುಂಬಾ ಪ್ರಯತ್ನ ಪಟ್ಟೆ ಆದರೆ, ಸಾಧ್ಯವಾಗಲಿಲ್ಲ. ಅವಳ ಅಂಗಾಂಗ ದಾನ ಮಾಡಬೇಕು ಎಂದು ನಿರ್ಧರಿಸಿದೆ. ಆದರೆ, ವೈದ್ಯರು ಅಂಗಾಂಗಗಳನ್ನು ದಾನ ಮಾಡಲು ಸಾಧ್ಯವಾಗದ ಸ್ಥಿತಿಯಲ್ಲಿವೆ ಎಂದು ತಿಳಿಸಿದ್ದು, ಸದ್ಯ ಎರಡು ಕಣ್ಣುಗಳನ್ನು ದಾನ ಮಾಡಿದ್ದೇನೆ.

- ಜೋಯೆಲ್,
ಮೃತ ಜಿನ್ನು ಅವರ ಪತಿ

ಧನಂಜಯನಿಂದ ಎರಡು ಬಾರಿ ದಾಳಿಗೊಳಗಾಗಿತ್ತು!

2024ನೇ ಸಾಲಿನ ನಾಡಹಬ್ಬ ದಸರಾ ಮಹೋತ್ಸವಕ್ಕೆ ಆಗಮಿಸಿದ್ದ ವೇಳೆ 2024ರಲ್ಲಿ ಅರಮನೆ ಆವರಣದಲ್ಲೇ ಧನಂಜಯ ಹಾಗೂ ಕಂಜನ್ ನಡುವೆ ಕಾಳಗ ನಡೆದಿತ್ತು. ಈ ವೇಳೆ ಧನಂಜಯನ ದಾಳಿಗೆ ಬೆಚ್ಚಿದ್ದ ಕಂಜನ್ ಜಯಮಾರ್ತಾಂಡ ದ್ವಾರದ ಮೂಲಕ ಬಿ.ಎನ್.ರಸ್ತೆಗೆ ಬಂದು, ಹಾರ್ಡಿಂಜ್ ಸರ್ಕಲ್‌ನತ್ತ ಜನ, ವಾಹನ ಜಂಗುಳಿ ನಡುವೆ ಓಡಿ ಹೋಗಿ ನಿಂತಿತ್ತು. ಆದರೆ, ಯಾರಿಗೂ ಹಾನಿ ಮಾಡಿರಲಿಲ್ಲ. ಬಳಿಕ ದುಬಾರೆ ಕ್ಯಾಂಪ್‌ನಲ್ಲಿಯೇ 2025ರಲ್ಲಿ ಧನಂಜಯ, ಕಂಜನ್ ಮೇಲೆ ದಾಳಿ ನಡೆಸಿತ್ತು.

ಮಳೆ ಕೊರತೆ, ಯುದ್ಧದ ಹಿನ್ನೆಲೆ

ಆಹಾರ ಉತ್ಪಾದನೆ ಕುಂಠಿತ ಆತಂಕ

● ಕಬ್ಬು, ಭತ್ತ ಬಿಟ್ಟು ಅಲ್ಪಾವಧಿ ಬೆಳೆಗೆ ರೈತರಿಗೆ ಸಲಹೆ ● ಈ ಸಲ ಶೇ.30 ರಿಂದ 35ರಷ್ಟು ಆಹಾರ ಉತ್ಪಾದನೆ ಕಡಿತ ಸಾಧ್ಯತೆ

ಬೆಂಗಳೂರು, ಮೇ 18(ಕೆಎಂಶಿ)– ಮಧ್ಯಪ್ರಾಚ್ಯದ ಬಿಕ್ಕಟ್ಟು ಹಾಗೂ ಮುಂಗಾರು ಮಳೆ ಕೊರತೆಯಿಂದ ರಾಜ್ಯದಲ್ಲಿ ಶೇ.30 ರಷ್ಟು ಆಹಾರ ಉತ್ಪಾದನೆ ಕುಂಠಿತಗೊಳ್ಳಲಿದೆ ಎಂದು ಕೃಷಿ ಸಚಿವ ಎನ್. ಚೆಲುವರಾಯಸ್ವಾಮಿ ಇಂದಿಲ್ಲಿ ಆತಂಕ ವ್ಯಕ್ತಪಡಿಸಿದ್ದಾರೆ.

ಬೆಂಗಳೂರು ಪ್ರೆಸ್‌ಕ್ಲಬ್ ಏರ್ಪಡಿಸಿದ್ದ ಮಾಧ್ಯಮ ಸಂವಾದ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಹವಮಾನ ತಜ್ಞರು ಮತ್ತು ಕೃಷಿ ವಿಜ್ಞಾನಿಗಳು ನೀಡಿರುವ ಮಾಹಿತಿಯಂತೆ ಈ ಬಾರಿ ನಮಗೆ ಪೂರ್ಣ ಪ್ರಮಾಣದಲ್ಲಿ ಮಳೆಯಾಗುವುದಿಲ್ಲ

ತಜ್ಞರ ವರದಿ ಆಧಾರದ ಮೇಲೆ ಜಲಾನಯನ ಪ್ರದೇಶದ ರೈತರು ಕಬ್ಬು ಮತ್ತು ಭತ್ತದ ಬದಲು ಅಲ್ಪಾವಧಿ ರಾಗಿ, ಬೇಳೆಕಾಳುಗಳಂತಹ ಬೆಳೆಗಳನ್ನು ಮಾತ್ರ ಬೆಳೆಯುವಂತೆ ಈಗಾಗಲೇ ಮನವಿ ಮಾಡಿಕೊಂಡಿದ್ದೇವೆ.

ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ಮುಖ್ಯಕಾರ್ಯನಿರ್ವಹಣಾಧಿಕಾರಿಗಳ ಮೂಲಕ ಪಂಚಾಯಿತಿಗಳಿಗೆ ಮಾಹಿತಿ ನೀಡಿ, ರೈತರಿಗೆ ಮಳೆ ಹಾಗೂ ರಸಗೊಬ್ಬರದ ಕೊರತೆ ಬಗ್ಗೆ ಮಾಹಿತಿ ನೀಡಿ, ಅಲ್ಪಾವಧಿ ಬೆಳೆ ಬೆಳೆಯಲು ಸಲಹೆ ಮಾಡಲಾಗುತ್ತಿದೆ ಎಂದರು.

ಪ್ರಸಕ್ತ ವರ್ಷ 160 ಲಕ್ಷ ಮೆಟ್ರಿಕ್ ಟನ್ ಆಹಾರ ಉತ್ಪಾದನೆ ಗುರಿಯಾಗಿತ್ತು. ಆದರೆ ಮಧ್ಯಪ್ರಾಚ್ಯದ ರಾಷ್ಟ್ರಗಳಲ್ಲಿ



ಉಂಟಾಗಿರುವ ಬಿಕ್ಕಟ್ಟು, ಮಳೆ ಕೊರತೆಯಿಂದಾಗಿರುವ ನಮಗೆ ಶೇ.30 ರಿಂದ 35 ಮೆಟ್ರಿಕ್ ಟನ್ ಆಹಾರ ಉತ್ಪಾದನೆ ಕುಂಠಿತಗೊಳ್ಳಲಿದೆ.

ಬೋರ್‌ವೆಲ್ ಇಲ್ಲವೇ ನೀರಾವರಿ ಪ್ರದೇಶದಲ್ಲಿ ಕಬ್ಬು, ಭತ್ತ ಬೆಳೆಯಲು ರೈತರು ಮುಂದಾದರೂ ಅವರಿಗೆ ರಾಸಾಯನಿಕ ಗೊಬ್ಬರಗಳನ್ನು ಪೂರ್ಣ ಪ್ರಮಾಣದಲ್ಲಿ ಸರಬರಾಜು ಮಾಡಲು ಸಾಧ್ಯವಿಲ್ಲ.

ಮಳೆ ಕೊರತೆ ಜೊತೆಗೆ ರಸಗೊಬ್ಬರದ ಕೊರತೆಯಿಂದ ನಮಗೆ ಆಹಾರ ಉತ್ಪಾ



ದನೆ ದೊಡ್ಡ ಪ್ರಮಾಣದಲ್ಲಿ ಕಡಿತವಾಗುತ್ತದೆ. ಒಂದು ವೇಳೆ ರಾಜ್ಯದಲ್ಲಿ ಉತ್ತಮ ಮಳೆಯಾಗಿ ನಮ್ಮ ಜಲಾಶಯಗಳಿಗೆ ನೀರು ಹರಿದು ಬಂದರೆ ಮುಂದಿನ ಹಂಗಾಮಿಗೆ ರೈತರ

■ 6ನೇ ಪುಟಕ್ಕೆ

ಮೈಸೂರಲ್ಲಿ ಸಾವಿರ ಕೋಟಿ ಡ್ರಗ್ಸ್ ವ್ಯವಹಾರ; ಮಾದಕ ವಸ್ತುವಿಗೆ ಮೈಸೂರು ಬ್ರ್ಯಾಂಡಾಯ್ತು!!

ವಿಧಾನಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆತಂಕ

- ಮದ್ಯ ಬಿಟ್ಟು ಗಾಂಜಾಗೆ ಅಡಿಕ್ಟ್ ಆದ ಯುವಪೀಳಿಗೆ
- ಮೈಸೂರಿಗೆ ಡಿಸಿಪಿ ಆಗಲು 50 ಲಕ್ಷ ಲಂಚ ನೀಡಬೇಕು
- ಪೊಲೀಸರು ವರ್ಗಾವಣೆ ಕಿರುಕುಳ ಅನುಭವಿಸುತ್ತಿದ್ದಾರೆ
- ಗಂಡನ ಸಾರಾಯಿ ಹಣದಿಂದ ಹೆಂಡತಿಗೆ 'ಗೃಹಲಕ್ಷ್ಮಿ' ಭಾಗ್ಯ



ಸೋಮವಾರ ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಅವರು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದರು.

ಮೈಸೂರು, ಮೇ18(ಬಿಎಲ್‌ಯು)– ಮೈಸೂರಿನಲ್ಲಿ ಸಾವಿರ ಕೋಟಿ ಮೌಲ್ಯದ ಡ್ರಗ್ಸ್ ವ್ಯವಹಾರ ನಡೆದಿದ್ದು, ಮೈಸೂರು ಡ್ರಗ್ಸ್ ತಯಾರಿಕೆ, ಮಾರಾಟ, ಸಾಗಾಣಿಕೆಗೆ ಬ್ರ್ಯಾಂಡ್ ಆಗಿದೆ ಎಂದು ವಿಧಾನ ಪರಿಷತ್ ಸದಸ್ಯ ಹೆಚ್.ವಿಶ್ವನಾಥ್ ಆತಂಕ ವ್ಯಕ್ತಪಡಿಸಿದ್ದಾರೆ.

ಮೈಸೂರು ಪತ್ರಕರ್ತರ ಭವನದಲ್ಲಿ ಇಂದು ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿದ ಅವರು, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆಯಲ್ಲೇ ಈ ಗತಿಯಾದರೆ ರಾಜ್ಯದ ಉಳಿದ ಜಿಲ್ಲೆಗಳ ಪರಿಸ್ಥಿತಿ ಏನು ಎಂದು ಪ್ರಶ್ನಿಸಿದರು.

ಮೈಸೂರಿನ ಡ್ರಗ್ಸ್ ಜಾಲವನ್ನು ದೆಹಲಿ ಸೇರಿದಂತೆ ಹೊರ ರಾಜ್ಯದ ಪೊಲೀಸರು ಭೇದಿಸಿದ್ದಾರೆಯೇ ಹೊರತು, ಸ್ಥಳೀಯ ಪೊಲೀಸರಲ್ಲ. ವರ್ಗಾವಣೆ ಕಿರುಕುಳದಿಂದ ಪೊಲೀಸರ ಕರ್ತವ್ಯ ಸಾಮರ್ಥ್ಯ ಕುಗ್ಗಿದೆ. ಒಬ್ಬ ಡಿಸಿಪಿ ಮೈಸೂರಿಗೆ ಪೋಸ್ಟಿಂಗ್ ಪಡೆಯಲು ಕನಿಷ್ಠ 50 ಲಕ್ಷ ಲಂಚ ನೀಡಬೇಕಾಗಿದೆ. ಇದರಿಂದ ಪೊಲೀಸರು ಪ್ರಾಮಾಣಿಕತೆ ಹಾಗೂ ದಕ್ಷತೆಯಿಂದ ಹೇಗೆ ಕೆಲಸ ಮಾಡುತ್ತಾರೆ, ಡ್ರಗ್ಸ್ ಮಾಫಿಯಾವನ್ನು ಹೇಗೆ ಮಟ್ಟ ಹಾಕುತ್ತಾರೆ ಎಂದು ವಿಶ್ವನಾಥ್ ಪ್ರಶ್ನಿಸಿದರು.

ಸಿದ್ದರಾಮಯ್ಯ ಒಮ್ಮೆ ಮೈಸೂರಿಗೆ ಬಂದರೆ ಸ್ಪೆಷಲ್ ಫ್ಲೈಟ್‌ಗೆ 6 ಲಕ್ಷ ಖರ್ಚಾಗುತ್ತೆ!

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಒಂದು ಬಾರಿ ವಿಶೇಷ ವಿಮಾನದಲ್ಲಿ ಮೈಸೂರಿಗೆ ಬಂದರೆ ಆರು ಲಕ್ಷ ರೂಪಾಯಿ ವೆಚ್ಚವಾಗಲಿದ್ದು, ಜನರ ತೆರಿಗೆ ಹಣವನ್ನು ಹೀಗೆ ಮೋಜು ಮಜಾ ಮಾಡುತ್ತಿದ್ದಾರೆ ಎಂದು ವಿಶ್ವನಾಥ್ ಟೀಕೆ ಮಾಡಿದರು. ಮೈಸೂರಿಗೆ ಬಂದರೂ ಸ್ಪೆಷಲ್ ಫ್ಲೈಟ್, ದೆಹಲಿಗೆ ಹೋದರೂ ಸ್ಪೆಷಲ್ ಫ್ಲೈಟ್ ಬಳಸುತ್ತಿದ್ದಾರೆ. ಒಂದು ಬಾರಿ ಮೈಸೂರಿಗೆ ಬಂದರೆ ಆರು ಲಕ್ಷ ವೆಚ್ಚವಾಗುತ್ತದೆ. ಈ ಮೂಲಕ ಜನರ ಬೆವರಿನ ಹಣದಲ್ಲಿ ಮಜಾ ಮಾಡುತ್ತಿದ್ದಾರೆ ಎಂದು ಕಿಡಿಕಾರಿದರು. ವಿಶೇಷ ವಿಮಾನಕ್ಕಾಗಿಯೇ 38 ಕೋಟಿ ಖರ್ಚು ಮಾಡಿದ್ದಾರೆ. ಈ ಹಣ ತಮ್ಮ ಶ್ರಮದ, ಬೆವರಿನ ತೆರಿಗೆ ಹಣವೆಂದು ರಾಜ್ಯದ ಜನರು ಅರ್ಥ ಮಾಡಿಕೊಳ್ಳಬೇಕು ಎಂದರು ವಿಶ್ವನಾಥ್. ಹಿಜಾಬ್ ಬೇಕೆಂದು ಮುಸ್ಲಿಂ ಸಮುದಾಯದವರು ಕೇಳಲಿಲ್ಲ. ಆದರೆ, ಈ ಸರ್ಕಾರ ಕೇಸರಿಗೆ ಅವಕಾಶವಿಲ್ಲವೆಂದು ಹಿಜಾಬ್ ಧರಿಸಲು ಅವಕಾಶ ನೀಡಿದೆ. ಈ ಮೂಲಕ ಸ್ವತಃ ಸಿದ್ದರಾಮಯ್ಯ ಅವರೇ ಹಿಂದೂ–ಮುಸ್ಲಿಂರಲ್ಲಿ ಜಗಳ ತಂದಿಟ್ಟಿದ್ದಾರೆ. ವಿದ್ಯಾರ್ಥಿಗಳಲ್ಲಿ ಜಾತಿ, ಧರ್ಮ ಮನೋಭಾವದ ಅಂತರ ಹೆಚ್ಚಿಸುತ್ತಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಸಿದ್ದರಾಮಯ್ಯ ಯುವ ಪೀಳಿಗೆ ಹಾಳು ಮಾಡಿದರು: ಬಿಯರ್ ಸೇರಿದಂತೆ ಇತರೆ ಮದ್ಯದ ಬೆಲೆಯನ್ನು ಭಾರೀ ಪ್ರಮಾಣದಲ್ಲಿ ಏರಿಕೆ ಮಾಡಿದ್ದು, ಇದರಿಂದ ಯುವಕರು ಮದ್ಯ ಸೇವನೆ ಬದಲು 50, 100 ರೂಪಾಯಿ ಕೊಟ್ಟು ಗಾಂಜಾ ಖರೀದಿಸುತ್ತಿದ್ದಾರೆ. ಇದರಿಂದ ಯುವ ಪೀಳಿಗೆ ಮಾದಕ ವಸ್ತುಗಳಿಗೆ ಅಡಿಕ್ಟ್ ಆಗಿದೆ. ಗ್ಯಾರಂಟಿಗಾಗಿ ಆದಾಯ ಕ್ರೋಢೀಕರಣಕ್ಕೆ ಮದ್ಯದ ಬೆಲೆ ಹೆಚ್ಚಳ ಮಾಡಿ ಯುವಕರು ಕಡಿಮೆ ಬೆಲೆಯ ಮಾದಕ ವಸ್ತು ಖರೀದಿಗೆ ದಾರಿ ಮಾಡಿಕೊಟ್ಟಿದ್ದಾರೆ. ಈ ಮೂಲಕ ಸಿದ್ದರಾಮಯ್ಯ ಯುವ ಪೀಳಿಗೆಯನ್ನು ಹಾಳು ಮಾಡಿದ್ದಾರೆ ಎಂದು ಕಿಡಿಕಾರಿದರು.

ಗ್ಯಾರಂಟಿ ಯೋಜನೆಯಲ್ಲಿ ಮಹಿಳೆಯರಿಗೆ ಎರಡು ಸಾವಿರ ರೂಪಾಯಿ ನೀಡುತ್ತಿದ್ದಾರೆ. ಗಂಡ ಸಾರಾಯಿಗೆ ವೆಚ್ಚ ಮಾಡುವ ಹಣವನ್ನು ಹೆಂಡತಿಗೆ ನೀಡುತ್ತಿದ್ದಾರೆಯೇ ಹೊರತು, ಇವರ ಗ್ಯಾರಂಟಿ ಯೋಜನೆಯಲ್ಲಿ ಜನರಿಗೆ ಆರ್ಥಿಕವಾಗಿ ಯಾವುದೇ ರೀತಿಯಲ್ಲೂ ಉಪಯೋಗವಾಗುತ್ತಿಲ್ಲ ಎಂದು ಆಪಾದಿಸಿದರು.

ತಮ್ಮ ಬೆನ್ನು ತಾವೇ ತಟ್ಟಿಕೊಳ್ಳುತ್ತಿದ್ದಾರೆ: ತುಮಕೂರಿನಲ್ಲಿ ನಾಳೆ ಸಾಧನಾ ಸಮಾವೇಶ ಮಾಡುತ್ತಿದ್ದಾರೆ. ಆದರೆ ಯಾವ ಸಾಧನೆ ಮಾಡಿದ್ದೇವೆ ಎಂದು ಸಾಧನಾ ಸಮಾವೇಶ ಮಾಡುತ್ತಿದ್ದಾರೋ ತಿಳಿಯದು. ಇವರ ಸರ್ಕಾರದ ಸಾಧನೆಯನ್ನು ಜನರು ಕೊಂಡಾಡಬೇಕು. ಆದರೆ ತಮ್ಮ ಬೆನ್ನು ತಾವೆ ತಟ್ಟಿಕೊಳ್ಳುತ್ತಿದ್ದಾರೆ ಎಂದು ಲೇವಡಿ ಮಾಡಿದರು.

ತಮಗೆ ಜನ ಬೆಂಬಲವಿದೆ ಎಂದು ರಾಹುಲ್ ಗಾಂಧಿ ಹೆದರಿಸಲು ಸಿದ್ದರಾಮಯ್ಯ ಸಾಧನಾ ಸಮಾವೇಶ ಮಾಡುತ್ತಿದ್ದಾರೆಯೇ ಹೊರತು ಬೇರೆ ಉದ್ದೇಶವಿಲ್ಲ. ಸಾಧನೆ ಬಗ್ಗೆ ಪ್ರಚಾರ ಮಾಡಲು ಜಾಹಿರಾತಿಗೆ ಈವರೆಗೆ 500 ಕೋಟಿ ವೆಚ್ಚ ಮಾಡಿದ್ದಾರೆ. ಪ್ರಾಯಶಃ ಜಾಹಿರಾತಿಗಾಗಿ ಇಷ್ಟು ಹಣ ವ್ಯಯ ಮಾಡಿದ ಸರ್ಕಾರ ಮತ್ತೊಂದಿಲ್ಲ ಎಂದು ವಿಶ್ವನಾಥ್ ಟೀಕಿಸಿದರು.

ಶಾಲಾ ವ್ಯವಸ್ಥೆ ಹಾಳಾಗಿದ್ದು, ಸಾವಿರಾರು ಶಾಲೆಗಳು ಮುಚ್ಚಿವೆ. ಶಾಲೆಗಳಿಗೆ ಮೂಲಭೂತ ಸೌಕರ್ಯ ಕಲ್ಪಿಸಲು ಎಡಿಬಿಯಿಂದ 2 ಸಾವಿರ ಕೋಟಿ ಸಾಲ ಪಡೆದಿದ್ದಾರೆ. ಸಾಲವನ್ನು ತೆರಿಗೆದಾರರು ಮರು ಪಾವತಿ ಮಾಡಬೇಕೇ ಹೊರತು, ಇವರಲ್ಲ. ಮನ ಬಂದಂತೆ ಸಾಲ ಮಾಡುತ್ತಿರುವ ಈ ಸರ್ಕಾರದ ನೀತಿಯನ್ನು ಜನರು ಅರಿಯಬೇಕು ಎಂದು ಕಿವಿಮಾತು ಹೇಳಿದರು.

ಈ ಸರ್ಕಾರದಲ್ಲಿ ಇಷ್ಟೆಲ್ಲಾ ಲೋಪವಿದ್ದರೂ ವಿರೋಧ ಪಕ್ಷದ ನಾಯಕ ಬಿ.ವೈ.ವಿಜಯೇಂದ್ರ ಜಾಣ ಮೌನ ವಹಿಸಿದ್ದಾರೆ. ಯಡಿಯೂರಪ್ಪ ಹಾಗೂ ಸಿದ್ದರಾಮಯ್ಯ ಅವರ ಅಡ್ಜೆಸ್ಟ್‌ಮೆಂಟ್ ರಾಜಕಾರಣಕ್ಕೆ ಇದಕ್ಕಿಂತ ಸ್ಪಷ್ಟ ನಿದರ್ಶನ ಬೇಕೇ ಎಂದು ವಿಶ್ವನಾಥ್ ಪ್ರಶ್ನಿಸಿದರು.

ಮೇ 22ರಿಂದ ಮೈ ರಿಯಾಲ್ಟಿ ರಿಯಲ್ ಎಸ್ಟೇಟ್ ಪ್ರದರ್ಶನ



ಸುದ್ದಿಗೋಷ್ಠಿಯಲ್ಲಿ ಕ್ರೆಡಾಯ್ ಮೈಸೂರು ಅಧ್ಯಕ್ಷ ಹರೀಶ್ ಶಣೈ ಮಾತನಾಡಿದರು.

ಮೈಸೂರು, ಮೇ 18(ಜಿಎ)– ಮೈಸೂರು ಬಿಲ್ಡರ್ಸ್ ಸಂಸ್ಥೆ, ಕ್ರೆಡಾಯ್ ಹಾಗೂ ಬಿಲ್ಡರ್ಸ್ ಚಾರಿಟಬಲ್ ಟ್ರಸ್ಟ್ ಸಹಯೋಗದೊಂದಿಗೆ ಮೇ 22ರಿಂದ 25ರವರೆಗೆ ಸ್ಕೌಟ್ಸ್ ಅಂಡ್ ಗೈಡ್ಸ್ ಮೈದಾನದಲ್ಲಿ ಮೈ ರಿಯಾಲ್ಟಿ ರಿಯಲ್ ಎಸ್ಟೇಟ್ ಪ್ರದರ್ಶನ ಆಯೋಜಿಸಲಾಗಿದೆ ಎಂದು ಆಯೋಜನಾ ಸಮಿತಿ ಅಧ್ಯಕ್ಷ ಅಶ್ವಿನ್ ಆರ್. ಪಾಳೇಗಾರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮೇ 22ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರದರ್ಶನಕ್ಕೆ ಚಾಲನೆ ನೀಡುವರು ಎಂದರು.

ಇದರಲ್ಲಿ 7 ಪ್ಲಾಟಿನಂ, 6 ಗೋಲ್ಡನ್, 6 ಸಿಲ್ವರ್ ಹಾಗೂ 31 ಸಾಮಾನ್ಯ ಮಳಿಗೆ ಇರಲಿವೆ. ರಿಯಲ್ ಎಸ್ಟೇಟ್ ಡೆವಲಪರ್‌ಗಳು, ಪ್ರಮೋಟರ್‌ಗಳು, ಬ್ಯಾಂಕ್‌ಗಳನ್ನು ಒಂದೇ ಸೂರಿನಡಿ ತರುವ ಉದ್ದೇಶ ಇದರದ್ದಾಗಿದೆ. ರಿಯಲ್ ಎಸ್ಟೇಟ್‌ನಲ್ಲಿನ ಇತ್ತೀಚಿನ ವಿದ್ಯಮಾನ, ನಾವೀನ್ಯತೆ, ಅವಕಾಶಗಳ ವಿವರ ಇಲ್ಲಿರಲಿದೆ. ಅಪಾರ್ಟ್‌ಮೆಂಟ್, ಲೇಔಟ್, ವಿಲ್ಲಾ, ರೋಹೌಸ್ ಮೊದಲಾದವುಗಳ ಮಾಹಿತಿ ದೊರೆಯಲಿದೆ ಹೆಚ್ಚಿನ ಮಾಹಿತಿಗಾಗಿ 9884427 7284, 9448061969 ಸಂಪರ್ಕಿಸಿ ಎಂದರು.

ಈ ವೇಳೆ ಕ್ರೆಡಾಯಿ ಮೈಸೂರು ಅಧ್ಯಕ್ಷ ಹರೀಶ್ ಶಣೈ ಮಾತನಾಡಿ, ವಿಶ್ವದಲ್ಲಿ ಈಗ ಯುದ್ಧ ಭೀತಿಯಿದ್ದು, ಇದರಿಂದ ಎಲ್ಲಾ ಕ್ಷೇತ್ರಗಳಿಗೂ ಹೊಡೆತ ಬಿದ್ದಿದೆ. ಆದರೆ, ರಿಯಲ್ ಎಸ್ಟೇಟ್ ಕ್ಷೇತ್ರಕ್ಕೆ ಯಾವುದೇ ತೊಂದರೆಯಾಗಿಲ್ಲ. ಹೂಡಿಕೆ ಮಾಡುವವರಿಗೆ ರಿಯಲ್ ಎಸ್ಟೇಟ್ ಸೂಕ್ತ ಕ್ಷೇತ್ರ ಎಂದು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಪ್ರವೀಣ್ ಪಾಲ್, ಹರೀಶ್ ಶೆಣೈ, ಪ್ರಭಾಕರ್ ರಾವ್, ಕೆ.ಎಸ್.ಪ್ರಕಾಶ್ ಉಪಸ್ಥಿತರಿದ್ದರು.

ಭದ್ರಾವತಿ ಧರಣಿಗೆ ದಸಂಸ ಅಂಬೇಡ್ಕರ್ ವಾದದ ಮೈಸೂರು ಜಿಲ್ಲಾ ಸಮಿತಿ ಬೆಂಬಲ

ಮೈಸೂರು, ಮೇ 18(ಜಿಎ)–ಶಿವಮೊಗ್ಗ ಜಿಲ್ಲೆಯ ಭದ್ರಾವತಿ ತಾಲೂಕಿನ ಅರೆಬೆಳಚಿ ಗ್ರಾಮದಲ್ಲಿ ಪರಿಶಿಷ್ಟ ಸಮುದಾಯದ ಕಾಲೋನಿ ನಿವಾಸಿಯ ದಲಿತ ಸಮುದಾಯದವರು ತಿರುಗಾಡುವ ರಸ್ತೆಯನ್ನು ಸವರ್ಣೀಯರು ಒತ್ತುವರಿ ಮಾಡಿಕೊಂಡು ಕಿರುಕುಳ ನೀಡುತ್ತಿರುವುದನ್ನು ಖಂಡಿಸಿ ಅಲ್ಲಿನ ದಲಿತ ಸಂಘರ್ಷ ಸಮಿತಿ–ಅಂಬೇಡ್ಕರ್ ವಾದ ನಡೆಸುತ್ತಿರುವ ಧರಣಿಗೆ ಕರ್ನಾಟಕ ದಲಿತ ಸಂಘರ್ಷ ಸಮಿತಿ–ಅಂಬೇಡ್ಕರ್ ವಾದದ ಜಿಲ್ಲಾ ಸಮಿತಿ ಬೆಂಬಲ ನೀಡಲಿದೆ ಎಂದು ಜಿಲ್ಲಾ ಸಂಚಾಲಕ ಮಲ್ಲಹಳ್ಳಿ ನಾರಾಯಣ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ವಿಚಾರವಾಗಿ ಸಂಬಂಧಪಟ್ಟ ಅಧಿಕಾರಿಗಳಿಗೆ ಅನೇಕ ಬಾರಿ ಮನವಿ ಮಾಡಿದರೂ ಒತ್ತುವರಿ ತೆರವಿಗೆ ಕ್ರಮ ಕೈಗೊಂಡಿಲ್ಲ. ಹೀಗಾಗಿ ಅಲ್ಲಿ ಹೋರಾಟ ನಡೆಸಲಾಗುತ್ತಿದೆ. ಜೊತೆಗೆ ಕೂಡಲೇ ಗ್ರಾಪಂ ಪಿಡಿಓಅಮಾನತು ಗೊಳಿಸಬೇಕೆಂದು ಆಗ್ರಹಿಸಲಾಗುತ್ತಿದೆ ಎಂದರು.

ವಿಭಾಗೀಯ ಸಂಚಾಲಕ ಬನ್ನಹಳ್ಳಿ ಸೋಮಣ್ಣ ಮಾತನಾಡಿ, ಬೀದರ್ ಜಿಲ್ಲೆಯ ಔರಾದ್ ತಾಲ್ಲೂಕಿನ ಬೆಳಕುಣಿ ಗ್ರಾಮದ ದಲಿತ ಸಮುದಾಯಕ್ಕೆ ಸೇರಿದ ಪ್ರತಿಭಾನ್ವಿತ ವಿದ್ಯಾರ್ಥಿನಿಯಾಗಿದ್ದ ಹಾಗೂ ರಾಜ್ಯ ಮಟ್ಟದ ಕಬಡ್ಡಿ ಆಟಗಾರ್ತಿಯಾಗಿದ್ದ ಶೋಭಾ ಎಂಬ ಅಪ್ರಾಪ್ತೆಯನ್ನು ಯಾರೋ ಕಿಡಿಗೇಡಿಗಳು ಲೈಂಗಿಕ ದೌರ್ಜನ್ಯ ಎಸಗಿ, ಕೊಲೆ ಮಾಡಿದ್ದಾರೆ. ಪ್ರಕರಣ ಸಂಬಂಧ ಓರ್ವನನ್ನು ಬಂಧಿಸಿದ್ದು, ಈತ ಕಾನೂನಿನಿಂದ ತಪ್ಪಿಸಿಕೊಳ್ಳದಂತೆ ಎಚ್ಚರ ವಹಿಸಬೇಕು. ಜೊತೆಗೆ ಮರಣದಂಡನೆ ಶಿಕ್ಷೆ ವಿಧಿಸಬೇಕೆಂದು ಒತ್ತಾಯಿಸಿದರು.

ಈ ವೇಳೆ ಸುದ್ದಿಗೋಷ್ಠಿಯಲ್ಲಿ ದೊಡ್ಡಸಿದ್ದು ಹಾದನೂರು, ವಾಟಾಳ್ ನಾಗರಾಜು, ಧಮ್ಮ ಅಶೋಕ ಉಪಸ್ಥಿತರಿದ್ದರು.

ಕನ್ನಡಿಗ ವ್ಯಾಪಾರಿಗಳ ಉತ್ತೇಜನಕ್ಕಾಗಿ ಕನ್ನಡಿಗರ ವ್ಯಾಪಾರ ವೇದಿಕೆ ಅಸ್ತಿತ್ವಕ್ಕೆ

ನಾಳೆ ಮೈಸೂರಲ್ಲಿ ಅಂಬಾರಿ ತಂಡ ಉದ್ಘಾಟನೆ

ಮೈಸೂರು, ಮೇ 18(ಜಿಎ)–ಕನ್ನಡಿಗರ ವ್ಯಾಪಾರ ವೇದಿಕೆ ರಾಜ್ಯಾದ್ಯಂತ ವ್ಯಾಪಾರ ವಹಿವಾಟಿನಲ್ಲಿ ತೊಡಗಿರುವ ಕನ್ನಡಿಗರಿಗೆ ಉತ್ತೇಜನ ನೀಡುವ ನಿಟ್ಟಿನಲ್ಲಿ ಸ್ಥಾಪಿತವಾಗಿದ್ದು, ಮೈಸೂರಿನ ಎರಡನೇ ಘಟಕವಾದ ಅಂಬಾರಿ ತಂಡದ ಉದ್ಘಾಟನೆ ಮೇ 20ರಂದು ಬೆಳಗ್ಗೆ 7.30ಕ್ಕೆ ಹೆಬ್ಬಾಳ ಕೈಗಾರಿಕಾ ಪ್ರದೇಶದ ನಾರ್ತ್ ಅವೆನ್ಯೂದಲ್ಲಿ ನಡೆಯಲಿದೆ ಎಂದು ಸಂಸ್ಥಾಪಕ ಶರತ್ ಖಾದ್ರಿ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕನ್ನಡ ಮಾತನಾಡುವ ವ್ಯಾಪಾರಿಗಳನ್ನು ಒಟ್ಟುಗೂಡಿಸಿ, ಅವರ ವ್ಯವಹಾರ ಬೆಳವಣಿಗೆಗೆ ನೆರವು ನೀಡುವ ವೇದಿಕೆ ಅಗತ್ಯವಾಗಿದೆ ಎಂಬ ಆಲೋಚನೆಯಿಂದ ಇದನ್ನು ಆರಂಭಿಸಲಾಗಿದೆ ಎಂದರು.

ರಾಜ್ಯಾದ್ಯಂತ ಸುಮಾರು 650 ಸದಸ್ಯರಿದ್ದಾರೆ. ಕಳೆದ ಒಂದೂವರೆ ವರ್ಷದಲ್ಲಿ ಸುಮಾರು 65 ಕೋಟಿ ರೂ.ಗಳ ವಹಿವಾಟು ಈ ವೇದಿಕೆ ಮೂಲಕ ನಡೆಸಿದ್ದಾರೆ. ಹೆಚ್ಚಿನ ಮಾಹಿತಿಯನ್ನು ಕನ್ನಡಿಗರ ವ್ಯಾಪಾರ ವೇದಿಕೆ.ಕಾಂನಲ್ಲಿ ಪಡೆಯಬಹುದು ಎಂದರು. ಈ ವೇಳೆ ಗೋಷ್ಠಿಯಲ್ಲಿ ಭಾನುಪ್ರಸಾದ್, ಅರ್ಚನ್, ಸಂಜನಾ ಕದಂ ಉಪಸ್ಥಿತರಿದ್ದರು.

ನೀಟ್ ಪ್ರಶ್ನೆ ಪತ್ರಿಕೆ ಸೋರಿಕೆ: ಮಹಾರಾಷ್ಟ್ರದಲ್ಲಿ ತರಬೇತಿ ಕೇಂದ್ರದ ಮಾಲೀಕನ ಬಂಧನ

ಲಾತೂರ್: ಮಹಾರಾಷ್ಟ್ರದ ಲಾತೂರ್ ನಗರದಲ್ಲಿ ರೇಣುಕೈ ರಸಾಯನಶಾಸ್ತ್ರ ತರಗತಿಗಳನ್ನು (ಆರ್‌ಸಿಸಿ) ನಡೆಸುತ್ತಿರುವ ಶಿವರಾಜ್ ರಘುನಾಥ್ ಮೋಟೆ ಗಾಂವ್ಕರ್ ಅವರನ್ನು ನೀಟ್ ಯುಜಿ ಪತ್ರಿಕೆ ಸೋರಿಕೆ ಪ್ರಕರಣದಲ್ಲಿ ಸಿಬಿಐ ಬಂಧಿಸಿದೆ ಎಂದು ಅಧಿಕಾರಿಗಳು ಸೋಮವಾರ ತಿಳಿಸಿದ್ದಾರೆ.

ಏಜೆನ್ಸಿ ಭಾನುವಾರ ನಡೆಸಿದ ಶೋಧದ ಸಮಯದಲ್ಲಿ ಮೋಟೆಂಗಾಂವ್ಕರ್ ಅವರ ಫೋನ್ ಮೊಬೈಲ್‌ನಲ್ಲಿ ವೈದ್ಯಕೀಯ ಪ್ರವೇಶ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಸೋರಿಕೆಯಾಗಿದ್ದು ಪತ್ತೆಯಾಗಿದೆ. ನಂತರ ಅವರನ್ನು ಬಂಧಿಸಲಾಗಿದೆ.

ನೀಟ್ ಯುಜಿ ಪತ್ರಿಕೆ ಸೋರಿಕೆ ಮತ್ತು ಪ್ರಸರಣದಲ್ಲಿ ಭಾಗಿಯಾಗಿರುವ ಸಂಘಟಿತ ಗ್ಯಾಂಗ್‌ನ ಸಕ್ರಿಯ ಸದಸ್ಯ ಮೋಟೆಗಾಂವ್ಕರ್ ಎಂದು ಸಿಬಿಐ ಆರೋಪಿಸಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಮೋಟೆಗಾಂವ್ಕರ್ ಇತರ ಆರೋಪಿಗಳೊಂದಿಗೆ ಪಿತೂರಿ ನಡೆಸಿ 2026 ರ ನೀಟ್ ಯುಜಿ ಪರೀಕ್ಷೆಯ ಪ್ರಶ್ನೆ ಪತ್ರಿಕೆ ಮತ್ತು ಉತ್ತರಗಳನ್ನು ಏಪ್ರಿಲ್ 23, 2026 ರ ಪರೀಕ್ಷೆಗೆ ಮುಂಚಿತವಾಗಿ ಪಡೆದರು ಎಂದು ಅವರು ಹೇಳಿದರು. ಅವರು ಪತ್ರಿಕೆಯನ್ನು ಹಲವಾರು ವ್ಯಕ್ತಿಗಳಿಗೆ ಪ್ರಸಾರ ಮಾಡಿದ್ದಾರೆ ಎಂದು ಆರೋಪಿಸಲಾಗಿದೆ.

ಉಚಿತ ಸಕ್ಕರೆ ಕಾಯಿಲೆ ತಪಾಸಣೆ ಶಿಬಿರ

ಮೈಸೂರು, ಮೇ 18– ಮೈಸೂರಿನ ರಾಮಕೃಷ್ಣನಗರದ ಸುಯೋಗ್ ಆಸ್ಪತ್ರೆಯಲ್ಲಿ ಮೇ 18ರಿಂದ 23ರವರೆಗೆ ಉಚಿತ ಸಕ್ಕರೆ ಕಾಯಿಲೆ ತಪಾಸಣಾ ಶಿಬಿರವನ್ನು ಆಯೋಜಿಸಲಾಗಿದೆ. ಶಿಬಿರದಲ್ಲಿ ಅತಿಯಾದ ಮೂತ್ರ ವಿಸರ್ಜನೆ, ಅತಿಯಾದ ಬಾಯಾರಿಕೆ, ಸುಸ್ತು, ತಲೆಸುತ್ತು, ಹಸಿವಾಗುವಿಕೆ, ದೃಷ್ಟಿ ಕಡಿಮೆಯಾಗುವಿಕೆ ಮುಂತಾದ ಸಮಸ್ಯೆಗಳಿರುವವರು ಕೂಡಲೇ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳತಕ್ಕದ್ದು. ಹೆಚ್ಚಿನ ಮಾಹಿತಿಗಾಗಿ 0821–2533600, 99863 99862 ಸಂಪರ್ಕಿಸಬಹುದು.

ನಿಧನ



ಖಲೀಲ್ ಅಹಮದ್ ಷಾ ಖಾದ್ರಿ

ಮೈಸೂರು, ಮೇ 18 – ಮೈಸೂರಿನ ಈದ್ಗಾ ಆನೆಗುಂಡಿ ರಸ್ತೆ ನಿವಾಸಿ ಸೂಫಿ ಸಂತ ಖಲೀಲ್ ಅಹಮದ್ ಷಾ ಖಾದ್ರಿ (72) ಭಾನುವಾರ ನಿಧನರಾದರು. ಮೃತರು ಪತ್ನಿ, 4 ಜನ ಸಹೋದರಿಯರು, ಓರ್ವ ಸಹೋದರ ಸೇರಿದಂತೆ ಅಪಾರ ಬಂಧು ಬಳಗ ಅಗಲಿದ್ದಾರೆ. ಮಿಷನ್ ಆಸ್ಪತ್ರೆ ರಸ್ತೆಯ ಈದ್ಗಾ ಮಸೀದಿಯಲ್ಲಿ ಪ್ರಾರ್ಥನೆ ಬಳಿಕ ಮೈಸೂರು–ಬೆಂಗಳೂರು ಹೈವೇ, ಟಿಪ್ಪು ಸರ್ಕಲ್ ಹತ್ತಿರ ಇರುವ ಮುಸ್ಲಿಮರ ಸ್ಮಶಾನದಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜನರೊಂದಿಗೆ ಜೆಡಿಎಸ್ ಸಮಾವೇಶದ ಬೈಕ್ ರ್ಯಾಲಿ...



ಮೈಸೂರಲ್ಲಿ ನಡೆದ ಜನರೊಂದಿಗೆ ಜೆಡಿಎಸ್ ಸಮಾವೇಶದ ಹಿನ್ನೆಲೆಯಲ್ಲಿ ಶ್ರೀರಾಂಪುರ ಪಂಚಾಯತಿ ಮಾಜಿ ಸದಸ್ಯರಾದ ಹನುಮಂತು, ಸಂತೋಷ್, ಆನಂದ, ಶಿವು, ಜಾಸು, ಕುಮಾರ ಇತರರು ಬೈಕ್ ರ್ಯಾಲಿಯಲ್ಲಿ ತೆರಳಿ, ಸಮಾವೇಶದಲ್ಲಿ ಪಾಲ್ಗೊಂಡರು.

ಶಾಲೆ ಬಿಟ್ಟ ಮಕ್ಕಳ ಶಾಲೆಗೆ ಸೇರಿಸಿ ಚಳವಳಿ

ಮೈಸೂರು, ಮೇ18(ಜಿಎ)–ಕಾರಣಾಂತರಗಳಿಂದ ಶಿಕ್ಷಣವನ್ನು ಅರ್ಧಕ್ಕೆ ನಿಲ್ಲಿಸಿದ ಮಕ್ಕಳನ್ನು ಗುರುತಿಸಿ, ಮತ್ತೆ ಅವರನ್ನು ಶಾಲೆಗೆ ದಾಖಲಿಸಬೇಕು ಎಂದು ಲೇಖಕ ಪ್ರೊ.ಗಂಗಾರಾಂ ಚಂಡಾಳ ಇದಕ್ಕಾಗಿ 'ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಸೇರಿಸಿ' ಚಳವಳಿ ನಡೆಯಬೇಕು ಎಂದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಶಿಕ್ಷಣ ಹಕ್ಕು ಕಾಯ್ದೆಯ ಅಡಿಯಲ್ಲಿ ಪ್ರತಿಯೊಬ್ಬ ಮಗುವಿಗೂ ಶಿಕ್ಷಣ ದೊರೆಯಬೇಕು. ಈ ಮಕ್ಕಳು ಪುನಃ ಶಾಲೆ ಸೇರುವ ಹಾಗೆ ಮಾಡಬೇಕು. ಇದಕ್ಕಾಗಿ ವಿವಿಧ ಸಂಘ ಸಂಸ್ಥೆಗಳು 'ಶಾಲೆ ಬಿಟ್ಟ ಮಕ್ಕಳನ್ನು ಶಾಲೆಗೆ ಸೇರಿಸಿ' ಚಳವಳಿ ಪ್ರಾರಂಭಿಸಬೇಕು ಎಂದು ಮನವಿ ಮಾಡಿದರು. ಶಾಲೆಯಿಂದ ಹೊರಗುಳಿದಿರುವ ಮಕ್ಕಳ ಸಮಸ್ಯೆ ಅರ್ಥಮಾಡಿಕೊಂಡು ಮತ್ತೆ ಶಾಲೆಗೆ ಹೋಗುವಂತೆ ಮಾಡುವ ಕಾರ್ಯಕ್ರಮ ರೂಪಿಸಬೇಕು. ಈಗಾಗಲೇ ತಮ್ಮ ಅಧ್ಯಕ್ಷತೆಯ ಬೆಳಕು ಸಮಾಜ ಎಂಬ ಸಂಸ್ಥೆ ಮಂಡ್ಯ ಭಾಗದಲ್ಲಿ ಶ್ರೀರಂಗಪಟ್ಟಣ ತಾಲೂಕಿನ ಒಡೆಯಾಂಡಹಳ್ಳಿಯಲ್ಲಿ ಶಾಲೆ ಬಿಟ್ಟ ಮಕ್ಕಳನ್ನು ಪುನಃ ಶಾಲೆಗೆ ಸೇರಿಸುವ ಕೆಲಸ ಮಾಡುತ್ತಿದೆ. ಈ ನಿಟ್ಟಿನಲ್ಲಿ ವ್ಯಾಪ್ತಿ ವಿಸ್ತರಿಸಿ, ಇತರೆಡೆಯೂ ಶಾಲೆ ಬಿಡಿಸಿದ ಪೋಷಕರ ಮನವೊಲಿಸುವ ಕೆಲಸ ನಡೆದಿದೆ ಎಂದು ತಿಳಿಸಿದರು.

ಅಭಿನಂದನೆ...



ಕರ್ನಾಟಕ ರಾಜ್ಯ ಗಾಣಿಗ ಅಭಿವೃದ್ಧಿ ನಿಗಮ ಮಂಡಳಿ ಅಧ್ಯಕ್ಷರೂ ಆದ ಮಾಜಿ ಮೇಯರ್ ಅನಂತು ಅವರನ್ನು ಗೃಹ ಸಚಿವ ಡಾ.ಜಿ.ಪರಮೇಶ್ವರ್ ಅಭಿನಂದಿಸಿದರು. ಈ ವೇಳೆ ನಗರಪಾಲಿಕೆ ಮಾಜಿ ಸದಸ್ಯ ನಂದಕುಮಾರ್, ಸೆನೆಟ್ ಅಧ್ಯಕ್ಷ ವೆಂಕಟೇಶ್, ಮೈಸೂರು ತಿಲಕ್‌ನಗರದ ಗಾಣಿಗ ಜನಾಂಗದ ಮುಖಂಡರು ಉಪಸ್ಥಿತರಿದ್ದರು.

ಮೇ 26ರಂದು ಪ್ರಗತಿ ಪರಿಶೀಲನಾ ಸಭೆ

ಮೈಸೂರು: ಕರ್ನಾಟಕ ಬೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ ಮೈಸೂರು ಜಿಲ್ಲೆಗೆ ಭೇಟಿ ನೀಡಲಿದ್ದು, ನಿಗಮದ ವಿವಿಧ ಯೋಜನೆಗಳ ಪ್ರಗತಿ ಕುರಿತು ಜಿಲ್ಲಾ ಮಟ್ಟದ ಅಧಿಕಾರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆಯನ್ನು ಮೇ 26ರಂದು ಬೆಳಗ್ಗೆ 11 ಗಂಟೆಗೆ ಜಿಲ್ಲಾಧಿಕಾರಿ ಅಧ್ಯಕ್ಷತೆಯಲ್ಲಿ ಜಿಪಂನ ಅಬ್ದುಲ್ ನಜೀರ್‌ಸಾಬ್ ಸಭಾಂಗಣದಲ್ಲಿ ಏರ್ಪಡಿಸಿದೆ.

ಎಲ್‌ಕೆಜಿ, ಯುಕೆಜಿ ಶಿಕ್ಷಕರ ತರಬೇತಿಗಾಗಿ ಅರ್ಜಿ ಆಹ್ವಾನ

ಮೈಸೂರು: ರಾಷ್ಟ್ರೀಯ ಡಿಜಿಟಲ್ ಸಾಕ್ಷರತಾ ಮಿಷನ್ (ಎನ್‌ಡಿಎಲ್‌ಎಂ)ನ ಸಹಭಾಗಿತ್ವದಲ್ಲಿ ನಗರದ ಎಸ್‌ಎಸ್‌ಐಟಿ ಸಲ್ಯೂಷನ್ಸ್ ಟೀಚರ್ ಟ್ರೈನಿಂಗ್ ಅಕಾಡೆಮಿಯು 2026–27ನೇ ಸಾಲಿನ ಎಲ್‌ಕೆಜಿ, ಯುಕೆಜಿ ಶಿಕ್ಷಕ ತರಬೇತಿಗಾಗಿ ಅರ್ಜಿ ಆಹ್ವಾನಿಸಿದೆ. ಎಸ್‌ಎಸ್‌ಎಲ್‌ಸಿ ನಂತರದ ವಿದ್ಯಾಭ್ಯಾಸ ಹೊಂದಿರುವ 18ರಿಂದ 55ರ ವಯೋಮಾನದ ಆಸಕ್ತ ಎಲ್ಲಾ ವರ್ಗದವರೂ ಈ ತರಬೇತಿಯ ಫಲಾನುಭವಿಗಳಾಗಿರುತ್ತಾರೆ. ತರಬೇತಿಯಲ್ಲಿ ನುರಿತ ಅಧ್ಯಾಪಕರುಗಳಿಂದ ಮಕ್ಕಳ ಮಾನಸಿಕ ಬೆಳವಣಿಗೆ, ಪೋಷಕಾಂಶ, ಕಲಿಕಾ ಸಾಮರ್ಥ್ಯ, ಗ್ರಹಿಕೆ, ಚಟುವಟಿಕೆ, ಕತಾ ನಿರೂಪಣೆ, ಕಂಪ್ಯೂಟರ್ ಕಲಿಕೆ ಮುಂತಾದವುಗಳ ಕುರಿತು ಸೈದ್ಧಾಂತಿಕ ಹಾಗೂ ಪ್ರಾಯೋಗಿಕ ತರಗತಿಗಳನ್ನು ನಡೆಸಲಾಗುತ್ತದೆ. ತರಬೇತಿಯು ಆನ್‌ಲೈನ್‌ನಲ್ಲಿಯೂ ಲಭ್ಯವಿರಲಿದೆ. ಆಸಕ್ತರು ಶೈಕ್ಷಣಿಕ ದಾಖಲಾತಿಗಳೊಂದಿಗೆ ಅರ್ಜಿಗಾಗಿ 8310306882, 9964790442 ಸಂಪರ್ಕಿಸಿ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

19.5.2026 ಮಂಗಳವಾರ, ಮಳೆ ನಕ್ಷತ್ರ: ಕೃತ್ತಿಕ 11.05.2026ರಿಂದ 24.05.2026ರವರೆಗೆ ಪರಾಭವ ನಾಮ ಸಂವತ್ಸರ, ಉತ್ತರಾಯಣ, ವಸಂತ ಋತು, ವೈಶಾಖ ಮಾಸ, ಶುಕ್ಲ ಪಕ್ಷ, ತಿಥಿ: ತದಿಗೆ, ನಕ್ಷತ್ರ: ಮೃಗಶಿರ, ರಾಹುಕಾಲ: ಮಧ್ಯಾಹ್ನ 3ರಿಂದ 4.30ರವರೆಗೆ

- **ರಾಮ್‌ಸನ್ಸ್ ಕ್ರೀಡಾ ಕೌಶಲ್ಯ:** ಪಾರಂಪರಿಕ ಹಾಸು ಆಟಗಳ 11ನೇ ದ್ವೈವಾರ್ಷಿಕ ಪ್ರದರ್ಶನ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್, ಬೆಳಗ್ಗೆ 10 ರಿಂದ.
- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ** : ಬೆಳಗ್ಗೆ 6.30 ರಿಂದ ದೇಹ–ಮನಸ್ಸುಗಳ ಆರೋಗ್ಯಕ್ಕಾಗಿ ಯೋಗಾಭ್ಯಾಸ ತರಗತಿ, ಬೆಳಗ್ಗೆ 9ರಿಂದ ಮಧುಮೇಹದ ಗಾಯಗಳು, ವೆರಿಕೋಸ್ ವೇನ್ಸ್, ಆರೋಗ್ಯಾಯುಷ್ಯ ಆರೋಗ್ಯವರ್ಧಕ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಲಲಿತಾದ್ರಿಪುರ ರಸ್ತೆ, ಆಲನಹಳ್ಳಿ.
- **ಶ್ರೀ ಕೃಷ್ಣ ಮಿತ್ರ ಮಂಡಳಿ, ಶ್ರೀ ಕೃಷ್ಣ ಟ್ರಸ್ಟ್:** ಶ್ರೀ ಕೃಷ್ಣ ಮಿತ್ರಮಂಡಳಿಯ ಸುವರ್ಣ ಸಂಭ್ರಮ, ಬೆಳಗ್ಗೆ 6ಕ್ಕೆ ಅಭಿಷೇಕ, ಪಾದಪೂಜೆ, ಮಹಾಮಂಗಳಾರತಿ, ಬೆಳಗ್ಗೆ 11ಕ್ಕೆ ಉಭಯ ಶ್ರೀಗಳ ಸಂಸ್ಥಾನ ಪೂಜೆ, ಮಧ್ಯಾಹ್ನ 12ಕ್ಕೆ ರಥೋತ್ಸವ, ಶ್ರೀಪಾದಂಗಳವರ ಆಶೀರ್ವಚನ, ದಿವ್ಯ ಉಪಸ್ಥಿತಿ : ಪರಮಪೂಜ್ಯ ಶ್ರೀ ಶ್ರೀ 1008 ಶ್ರೀ ಸತ್ಯಾತ್ಮತೀರ್ಥ ಶ್ರೀಪಾದಂಗಳವರು, ಶ್ರೀ ಉತ್ತರಾದಿ ಮಠ, ಸ್ಥಳ: ಶ್ರೀ ಕೃಷ್ಣಧಾಮ, ಸರಸ್ವತಿಪುರಂ, ಸಂಜೆ 5ಕ್ಕೆ.
- **ಶ್ರೀ ಉತ್ತರಾದಿ ಮಠ, ರೋಗಮೋಚನ ಶ್ರೀ ಧನ್ವಂತರಿ ಸನ್ನಿಧಾನ :** ಸಾಂಸ್ಕೃತಿಕ ಕಾರ್ಯಕ್ರಮಗಳು, ವಿದುಷಿ ಶ್ರೀಮತಿ ವಿದ್ಯಾ ತಡಕೋಡ ಅವರಿಂದ ಹರಿಕಥೆ, ಸ್ಥಳ: ಶ್ರೀ ಕಾಶಿ ವಿಶ್ವೇಶ್ವರ ಸನ್ನಿಧಿ ಆವರಣ, ಅಗ್ರಹಾರ, ಸಂಜೆ 5.30ಕ್ಕೆ.
- **ಮೈಸೂರು ಫೋಟೋ ಜರ್ನಲಿಸ್ಟ್ ಅಸೋಸಿಯೇಷನ್ :** ಹಿರಿಯ ಪತ್ರಕರ್ತರಾದ ಕೆ.ಬಿ. ಗಣಪತಿ ಹಾಗೂ ರಾಜಶೇಖರ ಕೋಟಿ ಸ್ಮರಣಾರ್ಥ ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ವಿತರಣಾ ಸಮಾರಂಭ, ಪುರಸ್ಕಾರ ವಿತರಣೆ : ಸ್ಟಾರ್ ಆಫ್ ಮೈಸೂರ್ ವ್ಯವಸ್ಥಾಪಕ ಸಂಪಾದಕ ವಿಕ್ರಮ್ ಮುತ್ತಣ್ಣ, ಆಂದೋಲನ ದಿನಪತ್ರಿಕೆ ವ್ಯವಸ್ಥಾಪಕ ಸಂಪಾದಕ ರವಿಕೋಟಿ, ಮುಖ್ಯ ಅತಿಥಿಗಳು : ಜಿಲ್ಲಾ ಪತ್ರಕರ್ತರ ಸಂಘದ ಅಧ್ಯಕ್ಷ ಕೆ. ದೀಪಕ್, ವಿಶೇಷ ಆಹ್ವಾನಿತರು : ಹಿರಿಯ ವಕೀಲ ಹೆಚ್.ಎನ್. ವೆಂಕಟೇಶ್, ಅಧ್ಯಕ್ಷತೆ : ಅಸೋಸಿಯೇಷನ್ ಅಧ್ಯಕ್ಷ ಪ್ರಗತಿ ಗೋಪಾಲಕೃಷ್ಣ, ಸ್ಥಳ: ಮೈಸೂರು ಜಿಲ್ಲಾ ಪತ್ರಕರ್ತರ ಸಂಘದ ಆವರಣ, ತ್ಯಾಗರಾಜ ರಸ್ತೆ, ಮಧ್ಯಾಹ್ನ 12ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯ, ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ, ದಂಡಿನ ರಾಜಪ್ಪ ಪರಿವಾರ ಪ್ರತಿಷ್ಠಾನ, ಅಸ್ತಿತ್ವ ಸಾಂಸ್ಕೃತಿಕ ವೇದಿಕೆ :** ಪ್ರೊ. ಎನ್.ಕೆ. ಲೋಲಾಕ್ಷಿ ಅವರ ದ್ರಾವ್ಯಗುಡ್ಡ ಕಾದಂಬರಿ ಸಮರ್ಪಣೆ ಸಮಾರಂಭ, ಅಧ್ಯಕ್ಷತೆ : ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಕಾದಂಬರಿ ಸಮರ್ಪಣೆ : ಸಾಹಿತಿ ಬರಗೂರು ರಾಮಚಂದ್ರಪ್ಪ, ಮುಖ್ಯ ಅತಿಥಿಗಳು: ಮೈಸೂರು ವಿವಿ ಕುಲಸಚಿವೆ ಶ್ರೀಮತಿ ಎಂ.ಕೆ.ಸವಿತಾ, ಕುವೆಂಪು ಅಧ್ಯಯನ ಮತ್ತು ಸಂಶೋಧನಾ ವಿಭಾಗದ ಅಧ್ಯಕ್ಷೆ ಪ್ರೊ.ಕವಿತಾ ರೈ, ಕೃತಿ ಕುರಿತು: ಬೆಂಗಳೂರು ವಿವಿ ಇಂಗ್ಲಿಷ್ ವಿಭಾಗದ ಅಧ್ಯಕ್ಷೆ ಪ್ರೊ.ಎಂ.ಶೋಭಾ, ಸ್ಥಳ: ಬಿ.ಎಂ.ಶ್ರೀ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಗೀತಾರಾಧನ, 6.30 ಚಿಂತನ, 6.35 ಮತ್ತು ಸಂಜೆ 6.10 ಸಾಧಕರ ಸೋಪಾನ – ಲೇಖನ ಮತ್ತು ಪ್ರಸ್ತುತಿ: ಟಿ. ಎಸ್. ಗೋಪಾಲ್, ಪ್ರಾಯೋಜಕರು: ಸಹಬಾಳ್ವೆ, ಬೆಂಗಳೂರು, 6.40 ಪದಸಂಸ್ಕೃತಿ–ಕನ್ನಡ ಪದಗಳ ಬಳಕೆ ಕಲಿಕೆಯ ವಿಶಿಷ್ಟ ಬಾನುಲಿ ಸರಣಿ, 6.50 ರೈತರಿಗೆ ಸಲಹೆ, 7.15 ಮತ್ತು ಸಂಜೆ 5.40 – ಪ್ರಾಯೋಜಿತ ಕಾರ್ಯಕ್ರಮ ಕೆ.ಎಸ್.ಓ.ಯು ಮುಕ್ತವಾಣಿ, ಪ್ರಾಯೋಜಕರು : ಪ್ರಸಾರಾಂಗ, ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯ, ಮೈಸೂರು. ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಪರಿಸರ ವಿಜ್ಞಾನ ಅಧ್ಯಯನ ವಿಭಾಗದಲ್ಲಿರುವ ಅಧ್ಯಯನ ಅವಕಾಶಗಳನ್ನು ಕುರಿತು ವಿಭಾಗದ ಮುಖ್ಯಸ್ಥರಾದ ಡಾ. ಜೆ. ಎಸ್. ಚಂದ್ರಶೇಖರ್ ಅವರೊಂದಿಗೆ ಸಂದರ್ಶನ, ಸಂದರ್ಶಕರು –ಲಕ್ಷ್ಮೀನಾರಾಯಣ .ಎಸ್., ನಿರ್ಮಾಣ : ಎನ್.ಕೇಶವಮೂರ್ತಿ, 8.30 ನಾ ಕಸ್ತೂರಿ ಅವರ ಪಾತಳದಲ್ಲಿ ಪಾಪಚ್ಚಿ–ಮಕ್ಕಳ ಸಾಹಿತ್ಯ ಕೃತಿಯ ಬಾನುಲಿ ಓದು, ಪ್ರಸ್ತುತಿ–ಉಮೇಶ್ ಎಸ್. ಎಸ್., 8.35 ಕರೆಗೊಂದು ಗೀತೆ–ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 10.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಗಾಯತ್ರಿ ಗಿರೀಶ್– ಹಾಡುಗಾರಿಕೆ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ 'ಹೊಂಗಿರಣ' ವಿಕಸಿತ ಹಾದಿಗೊಂದು ಸೋಪಾನ, ಪ್ರಸ್ತುತಿ: ಬಿ. ಜಿ. ಕವಿತಾ ಹಾಗೂ ಎಸ್. ಲಕ್ಷ್ಮೀನಾರಾಯಣ

ಮಧ್ಯಾಹ್ನ: 12.05 ವನಿತಾ ವಿಹಾರ, ಸಾಧನ ಶಿಖರ–ಮಿಸ್ ಪ್ಲಸ್ ಸೈಜ್ ಇಂಡಿಯಾ–2026ರ ವಿಜೇತರಾದ ಮೈಸೂರಿನ ಅಂಜಲಿ ಬಿ. ಗುಪ್ತಾ ಅವರೊಂದಿಗೆ ಮಾತುಕತೆ. ಪ್ರಸ್ತುತಿ–ಕೀರ್ತನಾ .ವಿ, 12.35 ದೇವರನಾಮ, 12.45 ಕನ್ನಡದಲ್ಲಿ ಭಾಷಣ–ಸುಜನಾ ಅವರ ಮಹಾಕಾವ್ಯ ಯುಗಸಂಧ್ಯಾದಲ್ಲಿ ಪಾತ್ರಗಳ ಆತ್ಮಾನುಸಂಧಾನ ಈ ಕುರಿತು ಮಾತನಾಡುತ್ತಾರೆ–ವಿಶ್ರಾಂತ ಪ್ರಾಧ್ಯಾಪಕರಾದ ಪ್ರೊ. ಮೈಸೂರು ಕೃಷ್ಣಮೂರ್ತಿ, 1.00 ಪ್ರಗತಿ ಪಥ–ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳು–ಶರಧಿ ಪಾಟೀಲ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎನ್. ರಮಣಿ–ಕೊಳಲು ವಾದನ, 3.30 ರಾಷ್ಟ್ರೀಯ ಶೈಕ್ಷಣಿಕ ಕಾರ್ಯಕ್ರಮ–ಉಮಂಗ್, 4.00 ಕಥಾಕಾಲಕ್ಷೇಪ–ಶ್ರೀತುಳಸೀ ಮಹಿಮೆ, ಪ್ರಸ್ತುತಿ–ಸಂತ ಶ್ರೀ ಭದ್ರಗಿರಿ ಅಚ್ಯುತದಾಸರು, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ–ಕಿಸಾನ್ ವಾಣಿ–ಭಾರತ ಸರ್ಕಾರದ ಕೃಷಿ ಹಾಗೂ ರೈತ ಕಲ್ಯಾಣ ಸಚಿವಾಲಯ ಪ್ರಾಯೋಜಿತ ಕಾರ್ಯಕ್ರಮ. ನ್ಯಾನೋ ಗೊಬ್ಬರಗಳ ಬಳಕೆ ಈ ಕುರಿತು ಮೈಸೂರಿನ IFFCO ರಸಗೊಬ್ಬರಗಳ ಸಂಸ್ಥೆಯ ಕ್ಷೇತ್ರಾಧಿಕಾರಿ ಕೆ.ಎಸ್. ಮನೋಜ್ ಅವರೊಂದಿಗೆ ಸಂದರ್ಶನ. ಸಂದರ್ಶಕರು: ಎನ್. ಕೇಶವಮೂರ್ತಿ, 7.45 ಮೈಸೂರು ಜಂಕ್ಷನ್–ಸಾಪ್ತಾಹಿಕ ಸಂಚಿಕೆ, ಪ್ರಸ್ತುತಿ–ದಿಗ್ವಿಜಯ್ .ಬಿ, 8.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ, ಪಿ.ಟಿ. ಶಿವಶಂಕರ್ ಶರ್ಮ–ಸಂತೂರ್ ವಾದನ, 8.30 ರಂಗಗೀತೆಗಳು–ಸುಮಿತ್ರಾ .ಎನ್, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ. ಡಿ. ರಾಮನಾಥನ್–ಹಾಡುಗಾರಿಕೆ, 10.00 ಚೈತ್ರವನ– ಲಕ್ಷ್ಮೀಶನ ಜೈಮಿನಿ ಭಾರತದ ಸಮಗ್ರ ವಾಚನ ಹಾಗೂ ವ್ಯಾಖ್ಯಾನ, ಪ್ರಸ್ತುತಿ–ಡಾ.ಎ.ಎಸ್. ಶಂಕರನಾರಾಯಣ, 10.30 ಸವಿನೆನಪು

ಅನೈತಿಕ ಸಂಬಂಧ ಶಂಕೆ; ತಾಯಿ ಹತ್ಯೆಗೈದ ಮಗ ಸೇರಿ ನಾಲ್ವರ ಬಂಧನ

● ರಹಸ್ಯವಾಗಿ ಮೃತದೇಹ ಸುಟ್ಟು ಪ್ರಕರಣ ಮುಚ್ಚಿ ಹಾಕಲು ಯತ್ನ
● ಅನಾಮಧೇಯ ವ್ಯಕ್ತಿ ಕರೆಯಿಂದ ಕ್ಷಿಪ್ರಗತಿಯಲ್ಲಿ ಪ್ರಕರಣ ಬಯಲಿಗೆ

ಮೈಸೂರು,ಮೇ 18(ಬಿಎಲ್‌ಯು/ಪಿಎಂ)– ಅನೈತಿಕ ಸಂಬಂಧದ ಶಂಕೆಯಿಂದ ತಾಯಿಯನ್ನೇ ಹತ್ಯೆ ಮಾಡಿದ ಮಗ ಹಾಗೂ ಆತನೊಂದಿಗೆ ಸೇರಿ ರಹಸ್ಯವಾಗಿ ಮೃತದೇಹ ಸುಟ್ಟು ಹಾಕಿ ಸಾಕ್ಷ್ಯ ನಾಶಕ್ಕೆ ಪ್ರಯತ್ನಿಸಿದ್ದ ಮೃತಳ ಪತಿ ಸೇರಿದಂತೆ ನಾಲ್ವರನ್ನು ಜಿಲ್ಲಾ ಪೊಲೀಸರು ಬಂಧಿಸಿದ್ದಾರೆ.

ಮೈಸೂರು ತಾಲೂಕು ಜಯಪುರ ಹೋಬಳಿಯ ಕೆ.ಮಾದಹಳ್ಳಿಯಲ್ಲಿ ಕೃತ್ಯ ನಡೆದಿದ್ದು, ಇಲ್ಲಿನ ನಿವಾಸಿ ಸುಧಾ (48) ತನ್ನ ಮಗನಿಂದಲೇ ಹತ್ಯೆಯಾದವರು. ಈಕೆಯ ಪುತ್ರ ಶಿವರುದ್ರಪ್ಪ (29), ಪತಿ ನಂಜುಂಡಯ್ಯ (55), ಸಂಬಂಧಿಕರಾದ ಅಭಿ (22), ಆಕಾಶ್ (20) ಸೇರಿದಂತೆ ನಾಲ್ವರನ್ನು ಪೊಲೀಸರು ಬಂಧಿಸಿದ್ದಾರೆ.

ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ ಅವರು ಮೈಸೂರಿನ ತಮ್ಮ ಕಚೇರಿಯಲ್ಲಿ ಸೋಮವಾರ ಮಾಧ್ಯಮದವರಿಗೆ ಈ ವಿಷಯ ತಿಳಿಸಿದರು. ಭಾನುವಾರ ಮಧ್ಯಾಹ್ನ ನನ್ನ ಮೊಬೈಲ್‌ಗೆ ಅನಾಮಧೇಯ ವ್ಯಕ್ತಿಯೊಬ್ಬರು ಕರೆ ಮಾಡಿದರು. ಅವರು ನಮ್ಮ ಊರಿನಲ್ಲಿ ಮಗನೇ ತನ್ನ ತಾಯಿಯನ್ನು ಕೊಲೆ ಮಾಡಿದ್ದು, ನಂತರದಲ್ಲಿ ದೇಹವನ್ನು ರಹಸ್ಯವಾಗಿ ಸುಟ್ಟು ಹಾಕಿದ್ದಾರೆ ಎಂದು ಮಾಹಿತಿ ಕೊಟ್ಟರು. ಆ ಮಾಹಿತಿ ಆಧರಿಸಿ ಜಯಪುರ ಪಿಎಸ್‌ಐ ಅವರಿಗೆ ಕೂಡಲೇ ಸ್ಥಳಕ್ಕೆ ಭೇಟಿ ನೀಡಲು ಸೂಚನೆ ನೀಡಿದೆ. ಕೆ.ಮಾದಹಳ್ಳಿ ಗ್ರಾಮಕ್ಕೆ ಭೇಟಿ ನೀಡಿ ಸ್ಥಳೀಯರನ್ನು ಕೇಳಿದಾಗ ಆರಂಭದಲ್ಲಿ ಸರಿಯಾದ ಮಾಹಿತಿ ದೊರೆತಿರಲಿಲ್ಲ ಎಂದು ಅವರು ವಿವರಿಸಿದರು.

ನಂತರ ಪಿಎಸ್‌ಐಯವರು ಗ್ರಾಮದ ಮೃತ ಮಹಿಳೆಯ ಮನೆ ಬಳಿ ಹೋಗಿ ಪರಿಶೀಲಿಸಿದಾಗ ಅಲ್ಲಲ್ಲಿ ರಕ್ತದ ಕಲೆಗಳು ಕಂಡು ಬಂದಿದೆ. ಇದನ್ನು ಆಧರಿಸಿ ಹೆಚ್ಚಿನ ಮಾಹಿತಿ ಕಲೆ ಹಾಕಿದಾಗ, ಈ ಘಟನೆ ಬಯಲಿಗೆ ಬಂದಿತು. ಶಿವರುದ್ರಪ್ಪನನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದಾಗ ಆತ ಕೊಲೆ ಮಾಡಿರುವುದಾಗಿ ಒಪ್ಪಿಕೊಂಡ ಎಂದರು.

ಅನೈತಿಕ ಸಂಬಂಧದ ಶಂಕೆ: ಮೂರು ತಿಂಗಳ ಹಿಂದೆ ಬೈಕ್‌ನಲ್ಲಿ ಪರ ಪುರುಷನ ಜೊತೆ ಸುಧಾ ಅವರು ಹೋಗುತ್ತಿದ್ದನ್ನು ಯಾರೋ ವೀಡಿಯೊ ಮಾಡಿ ಕಳುಹಿಸಿದ್ದಾಗಿನಿಂದ ತನ್ನ ತಾಯಿ ಬಗ್ಗೆ ಶಿವರುದ್ರಪ್ಪ ಅನುಮಾನಗೊಂಡಿದ್ದ. ಅನೈತಿಕ ಸಂಬಂಧ ಹೊಂದಿರುವ ಶಂಕೆಯಲ್ಲಿ ಆಗಾಗ್ಗೆ ಜಗಳ ಆಡುತ್ತಿದ್ದ. ಅಂತೆಯೇ ಗ್ರಾಮದ ತಮ್ಮ ಮನೆ ಬಳಿಯಲ್ಲಿ ತಾಯಿ ಮತ್ತು ಮಗನ ನಡುವೆ ಭಾನುವಾರ ಬೆಳಗ್ಗೆ 9 ಗಂಟೆ ಸುಮಾರಿಗೆ ಜಗಳ ನಡೆದಿದೆ. ಈ ವೇಳೆ ಸುಧಾ ಅವರ ತಲೆ ಮೇಲೆ ಶಿವರುದ್ರಪ್ಪ



ಕೊಲೆಯಾದ ಸುಧಾ ಮಗ ಶಿವರುದ್ರಪ್ಪ

ದೊಣ್ಣೆಯಿಂದ ಹಲ್ಲೆ ನಡೆಸಿದ್ದು, ಗಾಯಗೊಂಡ ಪರಿಣಾಮ ಸುಧಾ ಅವರು ಚೀರಾಡುತ್ತಿದ್ದಾಗ ಸಮೀಪದಲ್ಲೇ ಇದ್ದ ತಮ್ಮ ಮನೆಯಿಂದ ಸುದ ,ಾ ಅವರ ತಾಯಿ ಕೆಂಪಮ್ಮ ಸ್ಥಳಕ್ಕೆ ಓಡಿ ಬಂದಿದ್ದಾರೆ. ಆಗ ಶಿವರುದ್ರಪ್ಪ ಸ್ಥಳದಿಂದ ಪರಾರಿಯಾಗಿದ್ದಾನೆ.

ಸುಟ್ಟು ಹಾಕಲು ಪ್ಲಾನ್: ಶಿವರುದ್ರಪ್ಪನ ಚಿಕ್ಕಪ್ಪನ ಮಕ್ಕಳಾದ ಅಭಿ ಮತ್ತು ಆಕಾಶ ಗಾಯಗೊಂಡಿದ್ದ ಸುಧಾ ಅವರನ್ನು ತಮ್ಮ ಸ್ನೇಹಿತರ ಕಾರಿನಲ್ಲಿ ಆಸ್ಪತ್ರೆಗೆ ಕರೆದುಕೊಂಡು ಹೋಗುವಾಗ ಮಾರ್ಗಮಧ್ಯೆ ಆಕೆ ಸಾವನ್ನಪ್ಪಿದ್ದಾರೆ. ಬಳಿಕ ಈ ವಿಷಯವನ್ನು ಅವರು ಶಿವರುದ್ರಪ್ಪನಿಗೆ ತಿಳಿಸಿದ್ದು, ಆತ ತನ್ನ ತಂದೆ ನಂಜುಂಡಯ್ಯನಿಗೆ ತಿಳಿಸಿದ್ದಾನೆ. ಕೊನೆಗೆ ಇವರೆಲ್ಲರೂ ಸೇರಿ ಮೃತದೇಹವನ್ನು ರಹಸ್ಯವಾಗಿ ಸುಟ್ಟು ಹಾಕುವ ಪ್ಲಾನ್ ಮಾಡಿ, ಕಣಿಯಯ್ಯನಹುಂಡಿಗೆ ಹೋಗುವ ಮಾರ್ಗದಲ್ಲಿರುವ ತಮ್ಮ ತೋಟದಲ್ಲಿ ಸುಟ್ಟು ಹಾಕಿದ್ದಾರೆ.

ತಲೆಬುರುಡೆ, ಎಲುಬು ವಶಕ್ಕೆ: ಟ್ರ್ಯಾಕ್ಟರ್‌ನಲ್ಲಿ ಸೌದೆ ತರಿಸಿಕೊಂಡು ಸುಮಾರು ಬೆಳಗ್ಗೆ 11 ಗಂಟೆಗೆ ಬೆಂಕಿ ಹಾಕಿದ್ದರು. ನಮ್ಮ ಪೊಲೀಸರು ಸಂಜೆ ಸ್ಥಳಕ್ಕೆ ಹೋಗಿ ನೋಡಿದಾಗ, ಮೃತದೇಹ ಬೆಂಕಿಯಲ್ಲಿ ಉರಿಯುತ್ತಿತ್ತು. ಬಳಿಕ ಬೆಂಕಿ ನಂದಿಸಿ ಮೃತದೇಹ ದಿಂದ ತಲೆಬುರುಡೆ, ಎಲುಬುಗಳನ್ನು ಶೇಖರಣೆ ಮಾಡಿದರು. ಜೊತೆಗೆ ತಾಳಿ ಹಾಗೂ ಕಿವಿಯಲ್ಲಿದ್ದ ಓಲೆ ಕೂಡ ದೇಹದಲ್ಲೇ ಇದ್ದವು. ಅವುಗಳನ್ನು ವಶಕ್ಕೆ ಪಡೆಯಲಾಗಿದೆ.

ಶಿವರುದ್ರಪ್ಪ ಒಬ್ಬನೇ ದೊಣ್ಣೆಯಿಂದ ಹಲ್ಲೆ ಮಾಡಿದ್ದು, ಉಳಿದವರು ಸಾಕ್ಷ್ಯ ನಾಶಗೊಳಿಸಲು ಸಹಕಾರ ನೀಡಿದ್ದಾರೆ. ಶಿವರುದ್ರಪ್ಪ ಇತ್ತೀಚೆಗೆ ಮೈಸೂರಿನ ಜೆಪಿ ನಗರದಲ್ಲಿ ಮನೆ ಮಾಡಿಕೊಂಡು ಕುಟುಂಬ ಸಮೇತ ವಾಸವಾಗಿದ್ದ. ಈತ ಪರ ಪುರುಷನ ಜೊತೆ ಸುಧಾ ಅವರು ಅನೈತಿಕ ಸಂಬಂಧ ಹೊಂದಿರುವ ಅನುಮಾನ ಹೊಂದಿದ್ದ. ಹಲ್ಲೆ ನಡೆದ ಸಂದರ್ಭದಲ್ಲಿ ನಂಜುಂಡಯ್ಯ ತೋಟದಲ್ಲಿ ಕೆಲಸ ಮಾಡುತ್ತಿದ್ದ. ನಂಜುಂಡಯ್ಯ, ಅಭಿ ಮತ್ತು ಆಕಾಶ್ ವಿರುದ್ಧ ಸಾಕ್ಷ್ಯ ನಾಶ ಸಂಬಂಧ ಪ್ರಕರಣ ದಾಖಲಾಗಿದೆ. ಸುಧಾ ಅವರ ತಾಯಿ ಕೆಂಪಮ್ಮ ನೀಡಿದ ದೂರಿನನ್ವಯ ಜಯಪುರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ ಎಂದು ಅವರು ವಿವರಿಸಿದರು.

ಕೇರಳಂ ನೂತನ ಮುಖ್ಯಮಂತ್ರಿಯಾಗಿ ವಿ.ಡಿ. ಸತೀಶನ್ ಪ್ರಮಾಣವಚನ

ತಿರುವನಂತಪುರಂ: ಕೇರಳಂ ನೂತನ ಮುಖ್ಯಮಂತ್ರಿಯಾಗಿ ವಿಡಿ ಸತೀಶನ್ ಅವರು ಸೋಮವಾರ ಪ್ರಮಾಣವಚನ ಸ್ವೀಕರಿಸಿದ್ದು, ಇವರ ಜೊತೆಗೆ 20 ಮಂದಿ ಸಚಿವರಾಗಿ ಪ್ರಮಾಣ ವಚನ ಸ್ವೀಕರಿಸಿದ್ದಾರೆ.

ತಿರುವನಂತಪುರಂನ ಸೆಂಟ್ರಲ್ ಸ್ಟೇಡಿಯಂನಲ್ಲಿ ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ವಿಡಿ ಸತೀಶನ್ ಹಾಗೂ 20 ಮಂದಿ ಸಚಿವರಿಗೆ ರಾಜ್ಯಪಾಲ ಆರ್.ವಿ. ರಾಜೇಂದ್ರ ವಿಶ್ವನಾಥ್ ಅರ್ಲೇಕರ್ ಪ್ರಮಾಣ ವಚನ ಬೋಧಿಸಿದರು.

ಸಮಾರಂಭದಲ್ಲಿ ಕಾಂಗ್ರೆಸ್ ನಾಯಕರಾದ ರಾಹುಲ್ ಗಾಂಧಿ, ಮಲ್ಲಿಕಾರ್ಜುನ ಖರ್ಗೆ, ಪ್ರಿಯಾಂಕಾ ಗಾಂಧಿ, ಡಿಕೆ.ಶಿವಕುಮಾರ್, ಮುಖ್ಯಮಂತ್ರಿ ಸಿದ್ದರಾಮಯ್ಯ, ರೇವಂತ್ ರೆಡ್ಡಿ, ಕೆಸಿ.ವೇಣುಗೋಪಾಲ್, ರಾಜೀವ್ ಚಂದ್ರಶೇಖರ್, ಮಾಜಿ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಸೇರಿದಂತೆ ಹಲವು ನಾಯಕರು ಭಾಗವಹಿಸಿದ್ದರು.

ಸತೀಶನ್ ಜೊತೆಗೆ 20 ಶಾಸಕರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ. ಕಾಂಗ್ರೆಸ್‌ನಿಂದ 11 ಮಂದಿ, ಮುಸ್ಲಿಂ ಲೀಗ್‌ನ ಐವರು ಹಾಗೂ ಮಾನ್ಸ್ ಜೋಸೆಫ್ (ಕೇರಳ ಕಾಂಗ್ರೆಸ್–ಜೋಸೆಫ್), ಶಿಬು ಬೇಬಿ ಜಾನ್ (ಕ್ರಾಂತಿಕಾರಿ ಸಮಾಜವಾದಿ ಪಕ್ಷ), ಅನೂಪ್ ಜಾಕೋಬ್ (ಕೇರಳ ಕಾಂಗ್ರೆಸ್–ಜಾಕೋಬ್), ಮತ್ತು ಸಿಪಿ ಜಾನ್ (ಕಮ್ಯುನಿಸ್ಟ್ ಮಾರ್ಕ್ಸ್‌ವಾದಿ ಪಕ್ಷ) ಅವರು ಪ್ರಮಾಣವಚನ ಸ್ವೀಕರಿಸಿದ್ದಾರೆ.

ಮುಖ್ಯಮಂತ್ರಿ ಹುದ್ದೆಯೊಂದಿಗೆ 11 ಮಂದಿ ಕಾಂಗ್ರೆಸ್ ಶಾಸಕರು ಕೇರಳ



ನೂತನ ಸಂಪುಟದಲ್ಲಿ ಸ್ಥಾನ ಪಡೆದುಕೊಂಡಿದ್ದಾರೆ. ಇದರೊಂದಿಗೆ ಭಾರತೀಯ ಯೂನಿಯನ್ ಮುಸ್ಲಿಂ ಲೀಗ್ (ಐಯುಎಂಎಲ್) ನ ಐವರು, ಕೇರಳ ಕಾಂಗ್ರೆಸ್ (ಜೋಸೆಫ್), ಕ್ರಾಂತಿಕಾರಿ ಸಮಾಜವಾದಿ ಪಕ್ಷ (ಆರ್‌ಎಸ್‌ಪಿ), ಕೇರಳ ಕಾಂಗ್ರೆಸ್ (ಜಾಕೋಬ್) ಮತ್ತು ಕಮ್ಯುನಿಸ್ಟ್ ಮಾರ್ಕ್ಸ್‌ವಾದಿ ಪಕ್ಷ (ಸಿಎಂಪಿ) ಗಳು ತಲಾ ಒಂದು ಸ್ಥಾನ ಪಡೆದಿವೆ.

ಇಂದು ನಡೆದ ಪ್ರಮಾಣವಚನ ಸ್ವೀಕಾರ ಸಮಾರಂಭದಲ್ಲಿ ವಿ.ಡಿ.ಸತೀಶನ್ ಜೊತೆಗೆ ರಮೇಶ್ ಚೆನ್ನಿತ್ತಲ, ಸನ್ನಿ ಜೋಸೆಫ್, ಕೆ ಮುರಳೀಧರನ್, ಎ ಪಿ ಅನಿಲ್ ಕುಮಾರ್, ಪಿ.ಸಿ ವಿಷ್ಣುನಾಥ್, ಬಿಂಧು ಕೃಷ್ಣ, ಎಂ ಲಿಜ್ಜು, ಟಿ ಸಿದ್ದಿಕ್, ರೋಜಿ ಎಂ. ಜಾನ್, ಕೆ.ಎ ತುಳಸಿ ಮತ್ತು ಒ.ಜೆ ಜನೀಶ್ ಕಾಂಗ್ರೆಸ್ ಸಚಿವರಾಗಿದ್ದಾರೆ. ಜೊತೆಗೆ ಪಿ.ಕೆ ಕುನ್ಹಾಲಿಕುಟ್ಟಿ, ಕೆ.ಎಂ ಶಾಜಿ, ಎನ್ ಶಂಸುದ್ದೀನ್, ಪಿ.ಕೆ ಬಶೀರ್ ಮತ್ತು ವಿ.ಇ ಅಬ್ದುಲ್ ಗಫೂರ್. ಮಾನ್ಸ್ ಜೋಸೆಫ್ (ಕೆಸಿ–ಜೋಸೆಫ್), ಅನೂಪ್ ಜೇಕಬ್ (ಕೆಸಿ–ಜೇಕಬ್), ಶಿಬು ಬೇಬಿ ಜಾನ್ (ಆರ್‌ಎಸ್‌ಪಿ) ಮತ್ತು ಸಿಪಿ ಜಾನ್ (ಸಿಎಂಪಿ) ಅವರು ಸಚಿವರಾಗಿ ಪ್ರಮಾಣವಚನ ಸ್ವೀಕರಿಸಿದ್ದಾರೆ.

ಅಧಿಕಾರ ಹಸ್ತಾಂತರ, ಸಂಪುಟ ಪುನಾರಚನೆ ಕೂಗಿನ ನಡುವೆ

ಇಂದು ಸಿದ್ದರಾಮಯ್ಯ ಸರ್ಕಾರದ 3ನೇ ವರ್ಷದ ಸಾಧನಾ ಸಮಾವೇಶ



ಬೆಂಗಳೂರು, ಮೇ 18 (ಕೆಎಂಶಿ)– ಅಧಿಕಾರ ಹಸ್ತಾಂತರ ಕುರಿತು ಹಗ್ಗ ಜಗ್ಗಾಟ, ಮಂತ್ರಿಮಂಡಲ ಪುನಾರಚನೆಯ ಕಿತ್ತಾಟದಂತಹ ಗೊಂದಲದ ನಡುವೆಯೇ ಆಡಳಿತಾರೂಢ ಕಾಂಗ್ರೆಸ್ ಮೂರು ವರ್ಷದ ಸಂಭ್ರಮಾಚರಣೆಗೆ ಸಜ್ಜುಗೊಂಡಿದೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಕಾಂಗ್ರೆಸ್ ಸರ್ಕಾರ ನಾಳೆ ಮೂರು ವರ್ಷಗಳ ಆಡಳಿತ ಅವಧಿ ಪೂರ್ಣಗೊಳಿಸುತ್ತಿದ್ದು ತುಮಕೂರಿನಲ್ಲಿ ಸಾಧನಾ ಸಮಾವೇಶ ಆಯೋಜಿಸಲಾಗಿದೆ. ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಸೇರಿದಂತೆ ಹೈಕಮಾಂಡ್‌ನ ಹಲವು ಪ್ರಮುಖ ನಾಯಕರು ಈ ಸಮಾವೇಶದಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಹೇಳಲಾಗಿತ್ತಾದರೂ ಸಂಪುಟ ಪುನಾರಚನೆ ಮತ್ತು ನಾಯಕತ್ವ ಕುರಿತಾಗಿ ಉಂಟಾಗಿರುವ ಗೊಂದಲದ ಹಿನ್ನೆಲೆಯಲ್ಲಿ ಯಾರೂ ಕೂಡ ಪಾಲ್ಗೊಳ್ಳುತ್ತಿಲ್ಲ ಎಂದು ಹೇಳಲಾಗಿದೆ.

ಬಹುತೇಕ ಎಲ್ಲಾ ಮಂತ್ರಿಗಳು ಮತ್ತು ಶಾಸಕರು ಪಾಲ್ಗೊಳ್ಳುತ್ತಿರುವ ಸಮಾವೇಶದಲ್ಲಿ ನಾವೆಲ್ಲರೂ ಒಟ್ಟಾಗಿದ್ದೇವೆ ಎಂಬ ಸಂದೇಶ ರವಾನಿಸಲು ಮುಖ್ಯಮಂತ್ರಿ ಸಿದ್ದರಾಮಯ್ಯ ತೀರ್ಮಾನಿಸಿದ್ದಾರೆ ಸಾಧನ ಸಮಾವೇಶದಲ್ಲಿ ಸುಮಾರು ಒಂದು ಲಕ್ಷ ಫಲಾನುಭವಿಗಳಿಗೆ ಹಕ್ಕುಪತ್ರ ವಿತರಣೆ ಮಾಡುವ ಉದ್ದೇಶ ಹೊಂದಲಾಗಿದೆ.

ನಾಯಕತ್ವ ಕುರಿತಂತೆ ಬಿಕ್ಕಟ್ಟು ಮುಂದುವರೆದಿರುವ ನಡುವೆಯೇ ನಡೆಯುತ್ತಿರುವ ಈ ಸಮಾವೇಶವನ್ನು ಯಶಸ್ವಿಗೊಳಿಸಲು ಗೃಹ ಮಂತ್ರಿ ಪರಮೇಶ್ವರ್ ಟೊಂಕ ಕಟ್ಟಿ ನಿಂತಿದ್ದಾರೆ.

ಈ ಕುರಿತಂತೆ ಪ್ರತಿಕ್ರಿಯೆ ನೀಡಿರುವ ಡಾ.ಪರಮೇಶ್ವರ್, ತುಮಕೂರಿನಲ್ಲಿ ನಾಳೆ ನಡೆಯುತ್ತಿರುವ ಸಾಧನಾ ಸಮಾವೇಶ ಸರ್ಕಾರದ ಅಭಿವೃದ್ಧಿ ಕಾರ್ಯಗಳನ್ನು ಬಿಂಬಿಸುವ ವೇದಿಕೆಯೇ ಹೊರತು, ಯಾವುದೇ ನಾಯಕರ ಶಕ್ತಿ ಪ್ರದರ್ಶನವಲ್ಲ ಎಂದು ಸ್ಪಷ್ಟಪಡಿಸಿದ್ದಾರೆ.

ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬಂದು ಮೂರು ವರ್ಷಗಳಾಗಿವೆ. ಚುನಾವಣಾ ಪ್ರಣಾಳಿಕೆಯಲ್ಲಿ ನೀಡಿದ್ದ ಭರವಸೆಗಳಲ್ಲಿ ಅಲ್ಪಾವಧಿ ಮತ್ತು ದೀರ್ಘಾವಧಿ ಎಂಬ ಎರಡು ರೀತಿ ವಿಂಗಡಿಸಲಾಗಿತ್ತು ಅಲ್ಪಾವಧಿ ಭರವಸೆಗಳನ್ನು ಬಹುತೇಕ ಈಡೇರಿಸಿದ್ದೇವೆ. ನೀರಾವರಿ ಮೂಲ ಸೌಕರ್ಯ ಅಭಿವೃದ್ಧಿಯಂತಹ ದೀರ್ಘಾವಧಿಯಂತಹ ಯೋಜನೆಗಳು ಅನುಷ್ಠಾನವಾಗಬೇಕಿದೆ. ಅವುಗಳನ್ನು ಹಂತಹಂತವಾಗಿ ಸರ್ಕಾರ ಜಾರಿಗೊಳಿಸಲಾಗುವುದು ಎಂದು ಹೇಳಿದರು.

ಈ ಸಮಾವೇಶ ಇಲ್ಲಿ ವ್ಯಕ್ತಿಗತವಾಗಿ ನನ್ನದಾಗಲಿ ಅಥವಾ ಬೇರೆ ಯಾವುದೇ ನಾಯಕರ ಶಕ್ತಿ ಪ್ರದರ್ಶನವಾಗುವುದಿಲ್ಲ. ಸರ್ಕಾರ ಅಧಿಕಾರಕ್ಕೆ ಬಂದು ಮೂರು ವರ್ಷಗಳಾಗಿವೆ. ಯಾವೆಲ್ಲಾ ಭರವಸೆಗಳನ್ನು ಈಡೇರಿಸಿದ್ದೇವೆ, ಏನೆಲ್ಲಾ ಮಾಡಿದ್ದೇವೆ ಎಂದು ತಿಳಿಸಬೇಕಿದೆ. ಜನರಿಗೂ ಅದನ್ನು ತಿಳಿದುಕೊಳ್ಳುವ ಹಕ್ಕಿದೆ ಅದನ್ನು ತಿಳಿಸುವ ಕೆಲಸ ಮಾಡುತ್ತಿದ್ದೇವೆ ಎಂದು ಸ್ಪಷ್ಟಪಡಿಸಿದರು.

ಅಧಿಕಾರ ಹಂಚಿಕೆ, ಸಚಿವ ಸಂಪುಟ ಪುನರ್‌ರಚನೆ ಸೇರಿದಂತೆ ಇಲ್ಲಿ ಯಾವುದೇ ವಿಚಾರಗಳು ಪ್ರಸ್ತಾಪವಾಗುವುದಿಲ್ಲ. ಇದು ಪಕ್ಷದ ಕಾರ್ಯಕ್ರಮವಲ್ಲ, ಸರ್ಕಾರಿ ಕಾರ್ಯಕ್ರಮ. ಹೀಗಾಗಿ ಹೈಕಮಾಂಡ್ ನಾಯಕರಿಗೆ ಆಹ್ವಾನ ನೀಡಿಲ್ಲ ರಾಜ್ಯ ಸರ್ಕಾರದ ಎಲ್ಲಾ ಮಂತ್ರಿಗಳು ಪಕ್ಷದ ಶಾಸಕರು ಪಾಲ್ಗೊಳ್ಳುತ್ತಿದ್ದಾರೆ ಎಂದು ಹೇಳಿದರು.

ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ನಂತರ ಹಲವು ತಾಂಡಾ, ಹಟ್ಟಿಗಳನ್ನು ಕಂದಾಯ ಗ್ರಾಮಗಳಾಗಿ ಘೋಷಣೆ ಮಾಡಿದ್ದೇವೆ ಪೌತಿ ಖಾತೆ ಸೇರಿದಂತೆ ಸುಮಾರು 1.52 ಲಕ್ಷ ಫಲಾನುಭವಿಗಳಿಗೆ ಹಕ್ಕು ಪತ್ರ ವಿತರಣೆ ಮಾಡುತ್ತಿದ್ದೇವೆ ಹಾಗೂ ನುಡಿದಂತೆ ನಡೆದಿದ್ದೇವೆ ಎಂದು ಜನರಿಗೆ ತಿಳಿಸುವುದು ನಮ ಕರ್ತವ್ಯ. ಆ ನಿಟ್ಟಿನಲ್ಲಿ ಸಮಾವೇಶ ನಡೆಸಲಾಗುತ್ತಿದೆ ಎಂದು ಹೇಳಿದರು.

ಪತ್ನಿ, ಪುತ್ರನ ಖುದ್ದು ಭೇಟಿಗೆ ದರ್ಶನ್ ಜೈಲು ಎಸ್ಪಿಗೆ ಪತ್ರ

ಬೆಂಗಳೂರು, ಮೇ 18 (ಕೆಎಂಶಿ)– ಕೊಲೆ ಪ್ರಕರಣದಲ್ಲಿ ಎರಡನೇ ಆರೋಪಿಯಾಗಿ ಪರಪ್ಪನ ಅಗ್ರಹಾರ ಕೇಂದ್ರ ಕಾರಾಗೃಹದಲ್ಲಿರುವ ನಟ ಚಾಲೆಂಜಿಂಗ್ ಸ್ಟಾರ್ ದರ್ಶನ್ ಜೈಲಿನ ಸೂಪರಿಂಟೆಂಡೆಂಟ್‌ಗೆ (ಎಸ್ಪಿ) ವಿಶೇಷ ಪತ್ರ ಬರೆದಿದ್ದಾರೆ.



ಇತ್ತೀಚೆಗಷ್ಟೇ ಸುಪ್ರೀಂಕೋರ್ಟ್‌ನಲ್ಲಿ ದರ್ಶನ್ ಅವರ ಜಾಮೀನು ಅರ್ಜಿ ವಜಾಗೊಂಡ ಬೆನ್ನಲ್ಲೇ ಈ ಮಹತ್ವದ ಬೆಳವಣಿಗೆ ನಡೆದಿದೆ.

ತಮ್ಮ ಪತ್ನಿ ವಿಜಯಲಕ್ಷ್ಮಿ ಹಾಗೂ ಪುತ್ರ ವಿನೀಶ್ ಅವರನ್ನು ಜೈಲಿನ ಒಳಗಡೆ ಭೇಟಿ ಮಾಡಲು (ಒಳ ಸಂದರ್ಶನ) ವಿಶೇಷ ಅವಕಾಶ ಕಲ್ಪಿಸಿಕೊಡಬೇಕು ಎಂದು ತಮ್ಮ ಪತ್ರದಲ್ಲಿ ವಿನಂತಿಸಿ ಕೊಂಡಿದ್ದಾರೆ. ಕಾನೂನು ಹೋರಾಟದಲ್ಲಿ ತಮಗೆ ಹಿನ್ನಡೆಯಾದ ಹಿನ್ನೆಲೆಯಲ್ಲಿ ಕುಟುಂಬದವರನ್ನು ಖುದ್ದಾಗಿ ಭೇಟಿಯಾಗಿ ಮುಂದಿನ ಕಾನೂನು ಕ್ರಮಗಳ ಬಗ್ಗೆ ಚರ್ಚಿಸಲು ಬಯಸಿದ್ದಾರೆ.

ಈ ಹಿನ್ನೆಲೆಯಲ್ಲಿ ಅವರು ಕಾರಾಗೃಹದ ಮುಖ್ಯ ಅಧೀಕ್ಷಕರಾದ ಅಂಶು ಕುಮಾರ್ ಅವರಿಗೆ ವಿಶೇಷ ಮನವಿ ಪತ್ರ ಸಲ್ಲಿಸಿದ್ದಾರೆ. ಜೈಲಿನ ನಿಯಮಾವಳಿಗಳ ಪ್ರಕಾರ ಸಾಮಾನ್ಯ ಸಂದರ್ಶನದ ಅವಧಿಯಲ್ಲಿ ತಮ್ಮ ಪತ್ನಿ ಹಾಗೂ ಪುತ್ರನನ್ನು ಭೇಟಿಯಾಗುವ ಬದಲು, ಜೈಲಿನ ಒಳಗಿರುವ ಪ್ರತ್ಯೇಕ ಕೊಠಡಿಯಲ್ಲಿ ಒಂಟಿಯಾಗಿ ಭೇಟಿ ಮಾಡಲು ದರ್ಶನ್ ಅನುಮತಿ ಕೋರಿದ್ದಾರೆ.

ಹೆಚ್.ಡಿ. ದೇವೇಗೌಡರಿಗೆ 94ನೇ ಜನ್ಮದಿನದ ಸಂಭ್ರಮ

ವ್ಹೀಲ್‌ಚೇರ್‌ನಲ್ಲೇ ಕುಳಿತು ಸಾರ್ವಜನಿಕರ ಹಿತಕ್ಕಾಗಿ ಹೋರಾಟದ ಸಂಕಲ್ಪ!

ಬೆಂಗಳೂರು: ಮಾಜಿ ಪ್ರಧಾನಿ, ಜೆಡಿಎಸ್ ಸಂಸ್ಥಾಪಕ ಹೆಚ್. ಡಿ. ದೇವೇಗೌಡರಿಗೆ 94 ನೇ ವರ್ಷದ ಹುಟ್ಟುಹಬ್ಬದ ಸಂಭ್ರಮ. ಬೆಂಗಳೂರಿನ ಜೆ.ಪಿ. ನಗರದಲ್ಲಿರುವ ವೆಂಕಟೇಶ್ವರ ಸ್ವಾಮಿ ದೇವಸ್ಥಾನದಲ್ಲಿ ಪತ್ನಿ ಚೆನ್ನಮ್ಮ ಅವರೊಂದಿಗೆ ವಿಶೇಷ ಪೂಜೆ ಸಲ್ಲಿಸುವುದರೊಂದಿಗೆ ಹುಟ್ಟುಹಬ್ಬವನ್ನು ಆಚರಿಸಿಕೊಂಡಿದ್ದಾರೆ. ಈ ವೇಳೆ ಕುಟುಂಬದ ಸದಸ್ಯರು, ಜೆಡಿಎಸ್ ಪಕ್ಷದ ಮುಖಂಡರು ಮತ್ತು ಹಿತೈಷಿಗಳು ಉಪಸ್ಥಿತರಿದ್ದರು

ಹೆಚ್. ಡಿ. ದೇವೇಗೌಡರಿಗೆ ಪ್ರಧಾನಿ ನರೇಂದ್ರ ಮೋದಿ, ಮುಖ್ಯಮಂತ್ರಿ ಸಿದ್ದರಾಮಯ್ಯ ಸೇರಿದಂತೆ ಹಲವು ಗಣ್ಯರು ಹುಟ್ಟುಹಬ್ಬದ ಶುಭಾಶಯ ಕೋರಿದ್ದಾರೆ. ದೇವೇಗೌಡರ ದೀರ್ಘಾವಧಿಯ ರಾಷ್ಟ್ರ ಸೇವೆ, ನೀತಿ ನಿರ್ಣಯಗಳ ಬಗೆಗಿನ ಆಳವಾದ ತಿಳಿವಳಿಕೆ ಹಾಗೂ ಜನಪರ ಕಾಳಜಿಯನ್ನು ಶ್ಲಾಘಿಸಿ ಪ್ರಧಾನಿ ನರೇಂದ್ರ ಮೋದಿ ಶುಭ ಕೋರಿದ್ದಾರೆ.

ಹಿರಿಯ ರಾಜಕಾರಣಿಯಾಗಿರುವ ದೇವೇಗೌಡರಿಗೆ ಆಯುರಾರೋಗ್ಯ ಮತ್ತು ಮತ್ತಷ್ಟು ಕಾಲ ನಾಡಿನ ಜನರ ಸೇವೆ ಮಾಡುವ ಶಕ್ತಿಯನ್ನು ಭಗವಂತ ನೀಡಲಿ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಶುಭ ಕೋರಿದ್ದಾರೆ.

ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಹೆಚ್.ಡಿ. ದೇವೇಗೌಡ, ವಯೋಸಹಜ ಆರೋಗ್ಯ ಸಮಸ್ಯೆಗಳಿದ್ದರೂ, ವ್ಹೀಲ್‌ಚೇರ್‌ನಲ್ಲೇ ಕುಳಿತು ಸಾರ್ವಜನಿಕರ ಹಿತಕ್ಕಾಗಿ ಹೋರಾಡುವುದನ್ನು ಮುಂದುವರಿಸುವುದಾಗಿ ಅವರು ತಮ್ಮ ಜನ್ಮದಿನದಂದು ದೃಢ ಸಂಕಲ್ಪ ವ್ಯಕ್ತಪಡಿಸಿದ್ದಾರೆ. ಸಾಧ್ಯವಾ



ದಷ್ಟು ದಿನ ತಮ್ಮ ವ್ಹೀಲ್‌ಚೇರ್‌ನಲ್ಲೇ ಕುಳಿತು ಜನರ ಹಿತಾಸಕ್ತಿಗಾಗಿ ಹೋರಾಡಲು ಬಯಸುತ್ತೇನೆ ಎಂದು ಹೇಳಿದರು.

ಸಾಧ್ಯವಾದಷ್ಟು ದಿನಗಳವರೆಗೆ ಜನರ ಹಿತಾಸಕ್ತಿಗಾಗಿ ಹೋರಾಡುವ ದೃಢ ಸಂಕಲ್ಪ ನನಗಿದೆ. 93 ವರ್ಷ ಪೂರೈಸಿದ್ದೇನೆ ಎಂದು ಹೇಳಿಕೊಂಡು ಮನೆಯಲ್ಲಿ ಕುಳಿತುಕೊಳ್ಳುವುದಿಲ್ಲ. ನನ್ನ 68 ವರ್ಷಗಳ ರಾಜಕೀಯ ಜೀವನದುದ್ದಕ್ಕೂ ಹೋರಾಡುತ್ತಿದ್ದೇನೆ. ಜನರು ಅದನ್ನು ಎಷ್ಟು ಗುರುತಿಸುತ್ತಾರೆಂದು ನನಗೆ ಚಿಂತೆಯಿಲ್ಲ, ಆದರೆ ಜನರ ಹಿತಾಸಕ್ತಿಗಾಗಿ ಹೋರಾಡುವುದು ನನ್ನ ಮುಂದಿರುವ ವಿಷಯ, ನಾನು ನನ್ನ ಕೆಲಸವನ್ನು ಮಾಡುತ್ತೇನೆ ಎಂದರು.

ಸ್ವೀಡನ್‌ನಿಂದ ಪ್ರಧಾನಿ ಮೋದಿ ಅವರಿಂದ ಹುಟ್ಟುಹಬ್ಬದ ಸಂದೇಶ ಬಂದಿದ್ದು, ಗೃಹ ಸಚಿವ ಅಮಿತ್ ಶಾ ಮತ್ತು ಹಿರಿಯ ಬಿಜೆಪಿ ನಾಯಕ ಬಿ.ಎಸ್. ಯಡಿಯೂರಪ್ಪ ದೂರವಾಣಿ ಮೂಲಕ ಶುಭಾಶಯ ಕೋರಿದ್ದಾರೆ. ಅದೇ ರೀತಿ ಬಿಜೆಪಿ ರಾಷ್ಟ್ರೀಯ ಅಧ್ಯಕ್ಷ ನಿತಿನ್ ನಬಿನ್ ಸೇರಿದಂತೆ ಹಲವಾರು ರಾಜಕೀಯ ನಾಯಕರು ಹುಟ್ಟುಹಬ್ಬದ ಶುಭ ಕೋರಿದ್ದಾರೆ ಎಂದು ದೇವೇಗೌಡರು ತಿಳಿಸಿದರು.

2028 ರ ಕರ್ನಾಟಕ ವಿಧಾನಸಭಾ ಚುನಾವಣೆಯ ಬಗ್ಗೆ ಕೇಳಿದಾಗ, ಪ್ರಾದೇಶಿಕ ಪಕ್ಷವಾಗಿ ಜೆಡಿ(ಎಸ್) ಎನ್‌ಡಿಎಯಲ್ಲಿ ಸಣ್ಣ ಮೈತ್ರಿ ಪಕ್ಷವಾಗಿ ಮುಂದೆಯೂ ಮುಂದುವರೆಯಲಿದೆ ಎಂದರು.

ಸಾರಿಗೆ ನೌಕರರ ಸಂಧಾನ ವಿಫಲ

ಬೆಂಗಳೂರು, ಮೇ 18: ಮೇ 20ರಂದು ಸಾರಿಗೆ ನೌಕರರ ಮುಷ್ಕರ ವಿಚಾರ ಸಂಬಂಧ ಬೆಂಗಳೂರಿನ ಬನ್ನೇರುಘಟ್ಟದ ಕಾರ್ಮಿಕ ಭವನದಲ್ಲಿ ನಡೆದ ಸಂಧಾನ ಸಭೆ ವಿಫಲವಾಗಿದೆ. ಎಷ್ಟೇ ಮನವೊಲಿಕೆಗೆ ಯತ್ನಿಸಿದರೂ ಸಾರಿಗೆ ನೌಕರರು ಪಟ್ಟು ಬಿಟ್ಟಿಲ್ಲ. ನಿಗಮಗಳ ಅಧಿಕಾರಿಗಳ ಮನವಿಗೆ ಜಂಟಿ ಕ್ರಿಯಾ ಸಮಿತಿ ಕೊನೆಗೂ ಒಪ್ಪಿಗೆ ಸೂಚಿಸಿಲ್ಲ. ಮತ್ತೆ ಮೇ 25ಕ್ಕೆ ಸಭೆಗೆ ಬರಲು ಅಧಿಕಾರಿಗಳು ಆಹ್ವಾನ ನೀಡಿದರೂ ನಿಗಮದ ಅಧಿಕಾರಿಗಳ ಮನವಿಗೆ ಒಪ್ಪದ ಸಾರಿಗೆ ಮುಖಂಡರು, ಸಿಎಂ ಜೊತೆಗೆ ಸಭೆಗೆ ಪಟ್ಟು ಹಿಡಿದಿದ್ದಾರೆ. ಸಾರಿಗೆ ಸಚಿವರ ನೇತೃತ್ವದಲ್ಲಿ ನಾಳೆಯೇ ಸಭೆಗೆ ಆಗ್ರಹಿಸಿದ್ದಾರೆ.



ಸಭೆ ಮಾಡಿಲ್ಲ ಅಂದರೆ ಮುಷ್ಕರ ಫಿಕ್ಸ್: ಕಾರ್ಮಿಕ ಇಲಾಖೆ ಆಯುಕ್ತರ ನೇತೃತ್ವದಲ್ಲಿ ಗಂಟೆಗಟ್ಟಲೆ ಮಾತುಕತೆ ನಡೆಸಿದರೂ ಸಭೆ ಯಶಸ್ವಿಯಾಗಿಲ್ಲ. ಯಾವುದೇ ಮನವೊಲಿಕೆಗೂ ಬಗ್ಗದ ನೌಕರರು, ನಾಳೆ ಮಧ್ಯಾಹ್ನದ ಒಳಗಾಗಿ ಸಭೆ ಕರೆದು ಬೇಡಿಕೆ ಈಡೇರಿಕೆ ಸಂಬಂಧ ಮಾತನಾಡುವಂತೆ ಆಗ್ರಹಿಸಿದ್ದಾರೆ. ಈ ವೇಳೆ ಸರ್ಕಾರ ಸದ್ಯದ ಪರಿಸ್ಥಿತಿ ಬಗ್ಗೆ ಸಭೆಯಲ್ಲಿ ಅಧಿಕಾರಿಗಳು ವಿವರಿಸಿದರೂ, ಸಿಎಂ ಜೊತೆ ಸಭೆಗೆ ಸಾರಿಗೆ ನೌಕರರ ಸಂಘಟನೆ ಆಗ್ರಹಿಸಿದೆ. ಅಲ್ಲದೆ ಸಭೆ ಮಾಡಿಲ್ಲ ಅಂದರೆ ಮುಷ್ಕರ ಫಿಕ್ಸ್ ಎಂದು ವಾರ್ನಿಂಗ್ ಕೂಡ ನೀಡಿದೆ.

2012ರಲ್ಲಿ ತಡರಾತ್ರಿ 2 ಗಂಟೆವರೆಗೂ ಮೀಟಿಂಗ್ ನಡೆದಿದೆ. ಸಾರಿಗೆ ಸಚಿವರ ಅಧ್ಯಕ್ಷತೆಯ ಸಭೆಗೆ ನಾವು ಸಿದ್ಧರಾಗಿದ್ದೇವೆ. ಮುಖ್ಯಮಂತ್ರಿ ಸಭೆ ನಡೆಸಿದ್ರೂ ನಾವು ಸಭೆಗೆ ಬರುತ್ತೇವೆ. ಸರ್ಕಾರದ ಸೂಚನೆಗಾಗಿ ಜಂಟಿ ಕ್ರಿಯಾ ಸಮಿತಿ ಕಾಯುತ್ತಿದೆ. ಕೋರ್ಟ್ ಹೇಳಿದರೂ ನಾವು ಅದರ ಬಗ್ಗೆ ಚರ್ಚೆ ಮಾಡ್ತೇವೆ. ಈ ಬಾರಿ ಸರ್ಕಾರ ಏನೇ ಬೆದರಿಕೆ ಹಾಕಿದರೂ ನಾವು ಬಗ್ಗಲ್ಲ. ಎಲ್ಲ ಸಾರಿಗೆ ಮುಖಂಡರು ಒಗ್ಗಟ್ಟಿನಿಂದ ಭಾಗವಹಿಸಬೇಕಿದ್ದು, ಸರ್ಕಾರಕ್ಕೆ ನಾವು ಯಾವುದೇ ಡೆಡ್‌ಲೈನ್ ಕೊಡುವುದಿಲ್ಲ ಎಂದು ಮುಖಂಡರು ತಿಳಿಸಿದ್ದಾರೆ.

ನಾಳೆ ಸುದ್ದಿಗೋಷ್ಠಿ: ಈ ನಡುವೆ ನಾಳೆ (ಮೇ 19) ಬೆಳಿಗ್ಗೆ 11.30ಕ್ಕೆ ಸಂಪಂಗಿರಾಮನಗರದ ಕಚೇರಿಯಲ್ಲಿ ಜಂಟಿ ಕ್ರಿಯಾ ಸಮಿತಿಯ ಸಿಐಟಿಯು ರಾಜ್ಯ ಸಮಿತಿ ಬಣದಿಂದ ಸುದ್ದಿಗೋಷ್ಠಿ ಕೂಡ ಕರೆಯಲಾಗಿದೆ.

ಮುಷ್ಕರದಲ್ಲಿ ಭಾಗಿಯಾದರೆ ಶಿಸ್ತುಕ್ರಮ: ಚಾಲಕರು, ನಿರ್ವಾಹಕರಿಗೆ ಸರ್ಕಾರದ ಎಚ್ಚರಿಕೆ

ಬೆಂಗಳೂರು, ಮೇ 18(ಕೆಎಂಶಿ)– ವೇತನ ಹಿಂಬಾಕಿ ಬಿಡುಗಡೆ ಸೇರಿದಂತೆ ತಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಒತ್ತಾಯಿಸಿ ರಾಜ್ಯ ರಸ್ತೆ ಸಾರಿಗೆ ನೌಕರರ ಒಕ್ಕೂಟ ಕರೆದಿರುವ ಮುಷ್ಕರದಲ್ಲಿ ಭಾಗಿಯಾದರೆ ಅಂತಹ ಚಾಲಕರು ಮತ್ತು ನಿರ್ವಾಹಕರ ಮೇಲೆ ಶಿಸ್ತುಕ್ರಮ ಕೈಗೊಳ್ಳುವುದಾಗಿ ಸರ್ಕಾರ ಎಚ್ಚರಿಕೆ ನೀಡಿದೆ.

ಮೇ 20 ರಂದು ಕೆಲಸಕ್ಕೆ ಹಾಜರಾಗದಿದ್ದರೆ, ಮೊದಲ ಹಂತದಲ್ಲಿ 'ನೋ ವರ್ಕ್ ನೋ ಪೇ' ಕ್ರಮಕೈಗೊಳ್ಳುವುದಾಗಿ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಮ್ ಪಾಷಾ ಇಂದಿಲ್ಲಿ ತಿಳಿಸಿದ್ದಾರೆ.

ಪತ್ರಿಕಾ ಹೇಳಿಕೆ ನೀಡಿರುವ ಅವರು ಎಲ್ಲಾ ಸಾರಿಗೆ ನೌಕರರು ಕಡ್ಡಾಯವಾಗಿ ಕರ್ತವ್ಯಕ್ಕೆ ಹಾಜರಾಗಬೇಕು. ಪ್ರತಿಭಟನೆಯಲ್ಲಿ ಭಾಗಿಯಾದರೆ ಸೇವಾ ನಿಯಮಗಳನ್ವಯ ಕಠಿಣ ಕ್ರಮ ಕೈಗೊಳ್ಳಲಾಗುವುದು.

ಸಾರಿಗೆ ಸಂಸ್ಥೆಯನ್ನು ಸಾರ್ವಜನಿಕ ಉಪಯುಕ್ತ ಸಂಸ್ಥೆಯೆಂದು ಪರಿಗಣಿಸಲಾಗಿದೆ. ಬರುವ ಬುಧವಾರದಂದು ಬಸ್‌ಗಳ ಕಾರ್ಯಾಚರಣೆಯಲ್ಲಿ ಯಾವುದೇ ವ್ಯತ್ಯಯವಾಗಬಾರದು. ಅನಿವಾರ್ಯ ಸಂದರ್ಭ ಹೊರತುಪಡಿಸಿ, ನೌಕರರಿಗೆ ರಜೆ ಇಲ್ಲಾ ಎಂದು ಸ್ಪಷ್ಟಪಡಿಸಿರುವ ಅವರು, ಮುಷ್ಕರ ದಿನದಂದು ಕರ್ತವ್ಯಕ್ಕೆ ಗೈರು ಆಗುವ ನೌಕರರ ಪಟ್ಟಿ ಸಿದ್ಧಪಡಿಸಿ, ವೇತನವನ್ನು ಕಡಿತಗೊಳಿಸಲಾಗುವುದು, ಅಷ್ಟೇ ಅಲ್ಲ ಅಂತಹ ನೌಕರರ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಎಚ್ಚರಿಸಿದ್ದಾರೆ.

ನಕ್ಕರೆ ಅದೇ ಸ್ವರ್ಗ

ಗುಂಡ : ನಾನೀಗ ಒಂದು ಚೆಕ್ ಹಾಕಿದರೆ ಕ್ಲಿಯರ್ ಆಗೋಕೆ ಎಷ್ಟು ದಿನ ಆಗುತ್ತೆ?
ಬ್ಯಾಂಕ್ ಕ್ಲರ್ಕ್ : ಮೂರು ದಿನ
ಗುಂಡ : ಎರಡು ಬ್ಯಾಂಕ್‌ಗಳು ಎದುರು-ಬದುರೇ ಇದೆ. ಆದರೂ ಮೂರು ದಿನ ಏಕೆ?
ಬ್ಯಾಂಕ್ ಕ್ಲರ್ಕ್ : ಸರ್ ನಿಯಮ ಪಾಲಿಸಬೇಕಲ್ಲ. ಒಂದು ವೇಳೆ ನೀವು ಸ್ಮಶಾನದ ಹೊರಗೆ ಸತ್ತರೆ, ನಿಮ್ಮನ್ನು ಮೊದಲು ಮನೆಗೆ ತಗೊಂಡು ಹೋಗ್ತಾರೋ? ಇಲ್ಲ ಅಲ್ಲೇ ಹೂತು ಬಿಡ್ತಾರೋ!

ಮೈಸೂರು ಮಿತ್ರ
ಮಂಗಳವಾರ, ಮೇ 19, 2026
ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)
ಸಂಪಾದಕ: ಎಂ.ಗೋವಿಂದೇಗೌಡ M.A.

ಅಮೃತ ವಾಹಿನಿ..........

ಅನ್ನದ ಮಹತ್ವ ಹಸಿದವರಿಗೆ ಮಾತ್ರ ಗೊತ್ತಿರುತ್ತೆ. ಅನ್ನತೋ ಪ್ರಾಣಃ ಪ್ರಾಣತೋ ಪರಬ್ರಹ್ಮ, ಅನ್ನದಾತೋ... ಸುಖೀಭವ

ವೇದ ಸುಳ್ಳಾದರೂ ಗಾದೆ ಸುಳ್ಳಾಗದು } ಹಲ್ಲಿರುವ ತನಕ ಊಟ, ಕಣ್ಣಿರುವ ತನಕ ನೋಟ.

ನಿಮ್ಮ ಪತ್ರಗಳು

ಮೈಸೂರು ಜಿಲ್ಲೆಯಲ್ಲಿ ಶೇ.100ರಷ್ಟು ಆಗದ ಜನಗಣತಿ

ಮಾನ್ಯರೆ,

ಮೈಸೂರು ಜಿಲ್ಲೆಯಲ್ಲಿ ಶೇ.100 ರಷ್ಟು ಜನಗಣತಿ ಆಗಿದೆ ಎಂಬುದಾಗಿ ಅಪರ ಜಿಲ್ಲಾಧಿಕಾರಿಗಳು ಪತ್ರಿಕಾ ಪ್ರಕಟಣೆ ನೀಡಿದ್ದಾರೆ. ವಿಜಯನಗರ 4ನೇ ಹಂತ, 2ನೇ ಘಟ್ಟ, ಮೈಸೂರು ಮನೆ ನಂ: 11488 ಈ ಲೈನಿನಲ್ಲಿ ಯಾವ ಮನೆಯು ಜನಗಣತಿಯಾಗಿಲ್ಲ. ಈ ರೀತಿ ಎಷ್ಟು ಮನೆಗಳು ಬಾಕಿ ಉಳಿದಿದೆಯೋ ಗೊತ್ತಿಲ್ಲ. ಪತ್ರಿಕಾ ಪ್ರಕಟಣೆಯಲ್ಲಿ ಒಂದೊಂದು ಮನೆಗೆ 3 ಬಾರಿ ಗಣತಿದಾರರು ಹೋಗಿದ್ದಾರೆ ಎಂಬುದಾಗಿ ಹೇಳಿದ್ದಾರೆ. ಒಂದು ಬಾರಿಯು ನಮ್ಮ ಮನೆಗಾಗಲೀ, ನಮ್ಮ ಲೈನ್ ಮನೆಗಳಿಗಾಗಲಿ ಯಾರು ಬಂದಿಲ್ಲ. 10 ವರ್ಷಕ್ಕೊಮ್ಮೆ ನಡೆಸುವ ತುಂಬಾ ಮಹತ್ವದ ಜನಗಣತಿ ಯಾವ ಮನೆಯು ಕೈಬಿಟ್ಟು ಹೋಗಬಾರದು. ಜನಗಣತಿ ಮಾಡುವವರು ಇದರ ಮಹತ್ವವನ್ನು ಅರಿತು ಕೆಲಸ ಮಾಡಬೇಕು. ಈ ಬಗ್ಗೆ ಪರಿಶೀಲಿಸಿ ತುರ್ತಾಗಿ ಅಗತ್ಯ ಕ್ರಮ ಕೈಗೊಳ್ಳಬೇಕಾಗಿ ಈ ಮೂಲಕ ಮನವಿ.

–ಬಿ.ಜಿ.ರಂಗೇಗೌಡ, ವಿಜಯನಗರ 4ನೇ ಹಂತ, ಮೈಸೂರು

ಶಾಸಕ ಶ್ರೀವತ್ಸ ನಡೆ ಇತರ ಶಾಸಕರಿಗೂ ಮಾದರಿಯಲ್ಲವೇ?

ಮಾನ್ಯರೆ,

ಪ್ರಧಾನಿ ನರೇಂದ್ರ ಮೋದಿ ಅವರು, ದೇಶದ ಜನತೆಗೆ ಇತ್ತೀಚೆಗೆ ಪೆಟ್ರೋಲ್ ಮತ್ತು ಡೀಸೆಲ್ ಅನ್ನು ಮಿತವಾಗಿ ಬಳಸಿ, ಒಂದು ವರ್ಷ ಚಿನ್ನ ಖರೀದಿಯನ್ನು ಮಾಡುವುದು ಬೇಡ ಎಂದು ಕರೆಕೊಟ್ಟ ಮಾರನೇ ದಿನದಿಂದಲೇ, ಮೋದಿ ಅವರ ಕರೆಗೆ ಸ್ಪಂದಿಸಿ ಮೈಸೂರಿನ ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ಅವರು ತಮ್ಮ ಅಧಿಕೃತ ಇನೋವಾ ಕಾರು ನಿಲ್ಲಿಸಿ, ಎಲೆಕ್ಟ್ರಿಕ್ ಸ್ಕೂಟರ್‌ನಲ್ಲಿ ಸಾರ್ವಜನಿಕ ಸಮಾರಂಭಗಳಲ್ಲಿ ಭಾಗವಹಿಸುತ್ತಿರುವುದು ಸಾರ್ವಜನಿಕರ ಮೆಚ್ಚುಗೆಗೆ ಪಾತ್ರವಾಗಿದೆ. ಮೊದಲೇ ಸರಳ ಜೀವಿಯಾದ ಇವರು ಯಾವುದೇ ಮುಜುಗರಕ್ಕೂ ಒಳಗಾಗದೆ ಸಾರ್ವಜನಿಕವಾಗಿ ಸ್ಕೂಟರ್‌ನಲ್ಲಿ ಓಡಾಡುತ್ತಿರುವುದು ಜನರ ಪ್ರಶಂಸೆಗೆ ಪಾತ್ರವಾಗಿದೆ. ಇದು ಒಂದು ರೀತಿಯಲ್ಲಿ ಅಳಿಲು ಸೇವೆ ಇರಬಹುದು, ಆದರೆ ಎಲ್ಲರೂ ಮೆಚ್ಚುವ ಸಂಗತಿ, ಇದು ಇತರ ಶಾಸಕರಿಗೂ ಮಾದರಿಯಲ್ಲವೇ?

–ಬೂಕನಕೆರೆ ವಿಜೇಂದ್ರ, ಕುವೆಂಪುನಗರ, ಮೈಸೂರು

ಶೈಕ್ಷಣಿಕ ಕ್ಷೇತ್ರದ ದುರಂತಗಳು!

ಮಾನ್ಯರೆ,

ಕಳೆದ ಮೇ 3 ರಂದು ನಡೆದಿದ್ದ ನೀಟ್ ಪರೀಕ್ಷೆ ರದ್ದಾದ ಬೆನ್ನಲೇ ದೇಶದ ವಿವಿಧ ರಾಜ್ಯಗಳಲ್ಲಿ ಪರೀಕ್ಷೆ ಬರೆದಿದ್ದ ನಾಲ್ವರು ವಿದ್ಯಾರ್ಥಿಗಳು ಆತ್ಮಹತ್ಯೆಗೆ ಶರಣಾಗಿರುವುದು ಹೃದಯವಿದ್ರಾವಕವಾಗಿದೆ. ಈ ರೀತಿಯ ಆತ್ಮಹತ್ಯೆಗಳ ಸಂಖ್ಯೆ ಮುಂದಿನ ದಿನಗಳಲ್ಲಿ ಹೆಚ್ಚಾದರೂ ಆಗಬಹುದು. ಈ ನೀಟ್ ಪರೀಕ್ಷೆಗೆ ದೇಶಾದ್ಯಂತ 22 ಲಕ್ಷಕ್ಕೂ ಅಧಿಕ ವಿದ್ಯಾರ್ಥಿಗಳು ಬರೆದಿದ್ದು ಫಲಿತಾಂಶವನ್ನು ಕಾತರದಿಂದ ನಿರೀಕ್ಷಿಸುತ್ತಿದ್ದರು. ಈಗ ಇವರೆಲ್ಲ ಮತ್ತೆ ಪರೀಕ್ಷೆ ಬರೆಯಬೇಕಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿಯ ಪಾಲಿಗೂ ಇದು ಒಂದು ಅಗ್ನಿ ಪರೀಕ್ಷೆಯೇ ಸರಿ. ಒಂದು ಬಾರಿ ಪರೀಕ್ಷೆಗೆ ತಯಾರಿ ನಡೆಸಿ, ಪರೀಕ್ಷೆಗೆ ಬರೆಯುವುದೇ ದೊಡ್ಡ ಸಾಹಸವೇ ಸರಿ. ಹಾಗಿರುವಾಗ, ಈಗ ಮತ್ತೆ ಬರೆಯಬೇಕೆಂದರೆ ಅದರಷ್ಟು ತಲೆನೋವಿನ ಕೆಲಸ ಬೇರೊಂದು ಇರಲಾರದು.

ವಿದ್ಯಾರ್ಥಿಗಳ ಮನಸ್ಸು ಅತ್ಯಂತ ಸೂಕ್ಷ್ಮ ಹಾಗೂ ಸಂವೇದನಾಶೀಲವಾಗಿರುತ್ತದೆ. ಅವರು ಬದುಕಿನ ಯಾವುದೇ ರೀತಿಯ ವೈಫಲ್ಯಕ್ಕೂ ಕೂಡಲೇ ರಿಯಾಕ್ಟ್ ಮಾಡಿ ಬಿಡುತ್ತಾರೆ. ತಮ್ಮ ಮಕ್ಕಳ ಉನ್ನತ ಭವಿಷ್ಯವಾಗಿ ತಮ್ಮ ಇಡೀ ಬದುಕನ್ನೇ ಚಪ್ಪಲಿಯಂತೆ ಸವೆಸುತ್ತಿರುವ ಅದೆಷ್ಟೋ ತಂದೆ ತಾಯಿಗಳ ಪಾಲಿಗೆ ತಮ್ಮ ಮಕ್ಕಳ ಈ ರೀತಿಯ ಸಾವು ತಡೆಯಲು ಅಸಾಧ್ಯವಾಗಿರುತ್ತದೆ. ಅನೇಕ ಬಾರಿ ಪ್ರಶ್ನೆ ಪತ್ರಿಕೆಗಳೆ ಸೋರಿಕೆಯಾಗಿ ವಿದ್ಯಾರ್ಥಿಗಳು ಮಾನಸಿಕ ಕ್ಷೋಭೆಗೆ ಸಿಲುಕುತ್ತಿರುವಂತಹ ಉದಾಹರಣೆ ಕೂಡ ಸಾಕಷ್ಟಿವೆ. ಇನ್ನು ಉದ್ಯೋಗಕ್ಕಾಗಿ ಸ್ಪರ್ಧಾತ್ಮಕ ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಪಾಡು ಕೂಡ ಇಂತಹುದೇ ಆಗಿದೆ. ದಿನದಿಂದ ದಿನಕ್ಕೆ ನಮ್ಮ ಶೈಕ್ಷಣಿಕ ವ್ಯವಸ್ಥೆ ಅಧಃಪತನದತ್ತ ಸಾಗುತ್ತಿರುವುದು ಶೋಚನೀಯ ಸಂಗತಿ. ಸಂಬಂಧಪಟ್ಟವರ ಕಣ್ಣು ಈಗಲಾದರೂ ತೆರೆಯಬೇಕಾಗಿದೆ.

–ಕೆ.ವಿ.ವಾಸು, ವಕೀಲರು, ವಿವೇಕಾನಂದ ನಗರ, ಮೈಸೂರು.

ಸಾರ್ವಜನಿಕ ಬಸ್ಸುಗಳಲ್ಲಿ ಪ್ರಯಾಣಿಕರ ಮನಃಶಾಂತಿ ಕಾಪಾಡಿ

ಮಾನ್ಯರೆ,

ನಮ್ಮ ಸರ್ಕಾರಿ ಬಸ್ಸುಗಳಲ್ಲಿ (ಕೆಎಸ್‌ಆರ್‌ಟಿಸಿ) ಟಿಕೆಟ್ ಇಲ್ಲದೆ ಪ್ರಯಾಣ ದಂಡಕ್ಕೆ ಆಹ್ವಾನ ಎಂಬ ಬರಹಗಳು ಕಂಡುಬರುವುದು ಸರಿಯಷ್ಟೆ, ಆದರೂ ಆಗಾಗ ಟಿಕೆಟ್ ಇಲ್ಲದೆ ಪ್ರಯಾಣಿಸಿ ದಂಡ ಹಾಕಿಸಿಕೊಂಡು ಪ್ರಯಾಣಿಸುವವರು ಕಂಡು ಬರುತ್ತಾರೆ. ಇರಲಿ, ಈ ಹಿಂದೆ ಇದೇ ಬಸ್ಸುಗಳಲ್ಲಿ ಬೀಡಿ ಸಿಗರೇಟು ಸೇದುವ ಪರಿಪಾಠ ಇತ್ತು! ನಂತರ ದಂಡ ಹಾಕಲು ಶುರು ಮಾಡಿದ ಮೇಲೆ ಆ ಪರಿಪಾಠ ನಿಂತಿದೆ. ಈಗ ಹೊಸದೊಂದು ಸಮಸ್ಯೆ ಶುರುವಾಗಿದೆ. ಅದೆಂದರೆ ಮೊಬೈಲ್ ಎಂಬ ದೆವ್ವದ ಕಾಟ! ಹೌದು, ಸಾರ್ವಜನಿಕ ಬಸ್ಸುಗಳಲ್ಲಿ ಮೊಬೈಲ್‌ನ ಸ್ಪೀಕರ್ ಉಪಯೋಗಿಸಬಾರದೆಂದು ನಿಯಮ ಜಾರಿಗೆ ತಂದು ಹೆಚ್ಚು ಕಡಿಮೆ ಎರಡು ವರ್ಷಗಳೇ ಕಳೆದಿವೆ. ಆದರೂ ಮೊಬೈಲ್‌ಗಳ ಸದ್ದು ಪ್ರಯಾಣಿಕರಿಗೆ ಕಿರಿಕಿರಿ ಮಾಡುವ ಪ್ರಕರಣಗಳು ದಿನವೂ ನಡೆಯುತ್ತಲೇ ಇವೆ. ಆದುದರಿಂದ ಸರ್ಕಾರವು ಈ ಸಮಸ್ಯೆಯಿಂದ ಪ್ರಯಾಣಿಕರು ಮುಕ್ತಿ ಪಡೆಯಲು ತಮ್ಮಿಷ್ಟದಂತೆ ಮೊಬೈಲ್ ಬಳಸಿ ತೊಂದರೆ ಕೊಡುವ ಮೊಬೈಲ್ ಶೂರರಿಗೂ ದಂಡ ಹಾಕುವ ನಿಯಮ ಜಾರಿಗೆ ತಂದು ಸರ್ಕಾರಿ ಬಸ್ಸುಗಳಲ್ಲಿ, ಮೊಬೈಲ್ ಸದ್ದು, ದಂಡದ ಗುದ್ದು ಎಂದು ಬರೆಸಿ ಪ್ರಯಾಣಿಕರ ಮನಃಶಾಂತಿ ಕಾಪಾಡಲಿ.

–ರಾಜಶೇಖರಮೂರ್ತಿ, ಬೆಳಗನಹಳ್ಳಿ, ಹೆಚ್.ಡಿ.ಕೋಟೆ



ಡಾ. ಗುಬ್ಬಿಗೂಡು ರಮೇಶ್
ಮೊ. 97429 34512

ದೀಪ ಸಾಲು

ಕಲಿಕೆ–ಗಳಿಕೆ ನೆಲೆಯ ಹುಡುಕಾಟದ ಹೆಜ್ಜೆಗಳು...

ಇದು ಸ್ಪರ್ಧಾತ್ಮಕ ಪರೀಕ್ಷೆಗಳ ವೃತ್ತಿಪರ ಕೋರ್ಸುಗಳ ಆಯ್ಕೆಯ ಸಮಯ. ಈ ನಿಟ್ಟಿನಲ್ಲಿ ಇಂದು ಪೋಷಕರು ಮತ್ತು ವಿದ್ಯಾರ್ಥಿಗಳು ಇಬ್ಬರೂ ಬ್ಯುಸಿ. ಎಸ್‌ಎಸ್‌ಎಲ್‌ಸಿ ಮತ್ತು ಪಿಯುಸಿ ಉತ್ತೀರ್ಣರಾದವರಿಗೆ ಮುಂದೆ ಯಾವ ಕಾಲೇಜಿಗೆ ಸೇರಲಿ, ಯಾವ ಕಾಲೇಜಿಗೆ ಸೇರಿದರೆ ಉತ್ತಮ ಶಿಕ್ಷಣ ಮತ್ತು ಕೋರ್ಸ್‌ಗಳು ಸಿಗಬಹುದು ಎಂಬ ತಾರ್ಕಿಕ ಪ್ರಶ್ನೆಗಳು ವಿದ್ಯಾರ್ಥಿಗಳು ಮತ್ತು ಪೋಷಕರ ತಲೆ ತುಂಬ ಕೆಲಸ ಮಾಡುತ್ತಿವೆ. ಕಾರಣ ಇಷ್ಟೇ. ಪಿಯುಸಿ ಪಾಸಾದವರು ಯಾವ ಕೋರ್ಸಿಗೆ ಸೇರಿಕೊಂಡರೆ ನಮಗೆ ಹೆಚ್ಚಿನ ಉದ್ಯೋಗಾವಕಾಶಗಳಿವೆ ಎಂಬ ಲೆಕ್ಕಾಚಾರದೊಂದಿಗೆ ಅವರು ಹೆಜ್ಜೆ ಹಾಕುತ್ತಿರುವ ದಿನಮಾನಗಳು ಇವು. ಇದು ಬಹುಸಂಖ್ಯಾತ ಕುಟುಂಬಗಳ ಅಥವಾ ಅವರವರ ಬಂಧು–ಬಳಗದ ಅಣ್ಣ–ತಮ್ಮಂದಿರ ಮನೆಯವರ ಮತ್ತು ಮಕ್ಕಳ ಸಮಸ್ಯೆ ಇಲ್ಲಿ ಎರಡು ಬಗೆಯ ಗುಂಪುಗಳಿವೆ. ಅತೀ ಹೆಚ್ಚು ಅಂಕ ಗಳಿಸಿ topper ಆದವರು ಒಂದು ಕಡೆಯಾದರೆ, ಸರಾಸರಿ ಅಂಕಗಳನ್ನು ಪಡೆದ ವಿದ್ಯಾರ್ಥಿ ಯುವಜನರ ಗುಂಪು ಮತ್ತೊಂದು ಕಡೆ. ಇವರಿಬ್ಬರಿಗೂ ಕೋರ್ಸ್‌ಗಳ ಆಯ್ಕೆಗಳು ಕಗ್ಗಂಟಿನ ರೂಪದಲ್ಲೇ ಅವರನ್ನು ಹಾಗೂ ಅವರ ಹೆತ್ತವರನ್ನು ಕಾಡುತ್ತವೆ.

ಕಾರಣ ಇಷ್ಟೇ. ಶಿಕ್ಷಣ ಮತ್ತು ಅದರ ಪರಿಕಲ್ಪನೆ ಇಂದು ಸಾರಾಸಗಟಾಗಿ ಬದಲಾಗಿದೆ. ನಮ್ಮ ಸಾಂಪ್ರದಾಯಿಕ ಶಿಕ್ಷಣದ ಮಹತ್ವ ಇಂದು ತನ್ನ ಅಸ್ತಿತ್ವ ಉಳಿಸಿಕೊಳ್ಳಲು ಕಸರತ್ತು ನಡೆಸುತ್ತಿದೆ. ಇದು ತಂತ್ರಜ್ಞಾನದ ಯುಗ. ಒಬ್ಬ ನೌಕರ ಕಚೇರಿಗೆ ಬಂದರೆ ತನ್ನ ಹಾಜರಾತಿಯನ್ನು ತನ್ನ ಮೊಬೈಲಿನಲ್ಲೇ ದಾಖಲಿಸುತ್ತಾನೆ. ನಗದು ವ್ಯವಹಾರ ಆನ್‌ಲೈನ್‌ಗೆ ಬಂದು ಕೂತಿದೆ. ತಾಂತ್ರಿಕ ಶಿಕ್ಷಣ ತನ್ನ ಬೇಡಿಕೆ ಹೆಚ್ಚಿಸಿಕೊಂಡಿದೆ. ಕಲಾ ವಿಭಾಗದ ವಿದ್ಯಾರ್ಥಿಗಳ ಸಂಖ್ಯೆ ದಿನೇ ದಿನೆ ಕುಸಿಯುತ್ತಿದೆ. ಸಾಂಪ್ರದಾಯಿಕ ಪದವಿ ಕೋರ್ಸ್‌ಗಳ ಪ್ರಥಮ ದರ್ಜೆ ಕಾಲೇಜುಗಳ ಸಂಖ್ಯೆ ಇಳಿಮುಖವಾಗುತ್ತಿದೆ. ಆದರೆ ಇಂಜಿನಿಯರಿಂಗ್, ವೈದ್ಯಕೀಯ, ಕಂಪ್ಯೂಟರ್ ಸೈನ್ಸ್, ಡೇಟಾ ಸೈನ್ಸ್, ಸೈಬರ್ ಸೆಕ್ಯೂರಿಟಿ ಹೀಗೆ ತಾಂತ್ರಿಕ ಕೋರ್ಸ್‌ಗಳನ್ನು ಬೋಧಿಸುವ ಕಾಲೇಜುಗಳು ತಮ್ಮ ಸಂಖ್ಯೆ ಹೆಚ್ಚಿಸಿಕೊಂಡಿವೆ; ಇದು ಸಹಜ.

ಕಾರಣ, ವಿದ್ಯಾರ್ಥಿ ಯುವಜನರ ನಡಿಗೆ ತಾಂತ್ರಿಕ ಕೋರ್ಸ್‌ಗಳ ಕಡೆಗೆ ಎಂಬಂತಾಗಿರುವಾಗ ಈ ಸಮೂಹ ವೃತ್ತಿಪರ ಕೋರ್ಸ್‌ಗಳ ಕಡೆಗೆ ಚಲಿಸುತ್ತದೆ. ಅದಕ್ಕಾಗಿ ಇಂದು ವಿದ್ಯಾರ್ಥಿ ಪೋಷಕರ ಜೊತೆಗೆ ಕೌನ್ಸಿಲಿಂಗ್‌ಗಳು, ಚಾಟ್ ಬಾಕ್ಸ್‌ಗಳು, ಆಯ್ಕೆಗಾಗಿ ಟಿವಿ ಚಾನೆಲ್‌ಗಳ ಎಪಿಸೋಡುಗಳು ವಿದ್ಯಾ ಕ್ಷೇತ್ರದ ಕೋರ್ಸ್‌ಗಳ ಆಯ್ಕೆಯಲ್ಲಿ ಅವಕಾಶಗಳು ಮತ್ತು ಆಯ್ಕೆಗಳನ್ನು ಕುರಿತಂತೆ ಹೊತ್ತು ತಂದ ಪ್ರದರ್ಶನ ಮೇಳಗಳು ನಾಡಿನಾದ್ಯಂತ ಸದ್ದು ಮಾಡುತ್ತಿವೆ. ಈ ಎಲ್ಲಾ ಮೇಳಗಳಲ್ಲೂ ಜನವೋ ಜನ, ಪೋಷಕರ ಮತ್ತು ವಿದ್ಯಾರ್ಥಿಗಳ ಕೋರ್ಸ್‌ಗಳ ಆಯ್ಕೆಯ ಕಸರತ್ತು ಇಂದಿನಂತೆ ಇಲ್ಲಿ ಮುಂದುವರೆದಿದೆ.


ಪೋಷಕರ ಆತಂಕವೇನೆಂದರೆ, ನಾಡಿನ ದಿನಗಳಲ್ಲಿ ತಮ್ಮ ಮಕ್ಕಳಿಗೆ ಉದ್ಯೋಗಾವಕಾಶಗಳು ಮತ್ತು ನೆಲೆ ಬೆಲೆಗಳ ಸೂಕ್ಷ್ಮ ಲೆಕ್ಕಾಚಾರಗಳು ತಮ್ಮ ತಮ್ಮ ಮಕ್ಕಳ ಮುಂದಿನ ಭವಿಷ್ಯದ ದಾರಿಗಳನ್ನು ಹುಡುಕುತ್ತಾ ಉದ್ಯೋಗ ಸೃಷ್ಟಿಸುವ ಅವಕಾಶ ಸಂಬಂಧಿಸಿದ ಶಿಕ್ಷಣದ ಕೋರ್ಸುಗಳು ಮತ್ತು ಶಿಕ್ಷಣ ಸಂಸ್ಥೆಗಳ ಸೀಟು ಹಂಚಿಕೆಯ ಬೆನ್ನು ಹತ್ತಿರುವುದು ಕಣ್ಣಿಗೆ ಕಾಣಿಸುತ್ತಿದೆ. ಇಂತಹ ಸಂದರ್ಭಗಳಲ್ಲಿ ಅವರವರ ಮನೆ ಬಂಧು–ಮಿತ್ರರ ಸಲಹೆ ಪಡೆದು ವಿದ್ಯಾರ್ಥಿಗಳು ಮುಂದೆ ಸಾಗುತ್ತಾರೆ. ಇದು ಸರ್ವೇ ಸಾಮಾನ್ಯ.

ಇದು ಪ್ರತಿ ವರ್ಷದ ಪ್ರಕ್ರಿಯೆ. ವರ್ತಮಾನದ ದಿನಗಳಲ್ಲಿ ಗ್ರಾಮಾಂತರ ವಿದ್ಯಾರ್ಥಿ ಪೋಷಕರು ನಗರ ಪ್ರದೇಶದ ವಿದ್ಯಾರ್ಥಿ ಪೋಷಕರು ತಮ್ಮ ತಮ್ಮ ಮಕ್ಕಳ ವಿದ್ಯಾಭ್ಯಾಸದ ಕೋರ್ಸ್‌ಗಳನ್ನು ಆಯ್ಕೆ ಮಾಡಬೇಕಾದ ಟಾಸ್ಕ್ ಅನ್ನು ಎದುರಿಸುತ್ತಾರೆ. ಇಂತಹ ಸಂದರ್ಭಗಳಲ್ಲಿ ಎಲ್ಲಾ ವೇದಿಕೆಗಳು ಕೌನ್ಸಿಲಿಂಗ್‌ಗಳು, ಕೆರಿಯರ್ ಗೈಡೆನ್ಸ್ ಪ್ರಾಕ್ಟೀಸ್‌ಗಳು ಹೇಳುವ ಕೋರ್ಸ್‌ಗಳ ಆಯ್ಕೆಯ ಮಾದರಿಯನ್ನು ಗಮನಿಸುತ್ತಾರೆ. ಹೀಗೆ ಗಮನಿಸುವ ಸಂದರ್ಭದಲ್ಲಿ ಮಕ್ಕಳ ಉದ್ಯೋಗಮುಖಿ ಕೋರ್ಸ್‌ಗಳಿಗಷ್ಟೇ ಗಮನ ಕೊಡದೆ ಅವರ ಕಲಿಯುವ ಆಸಕ್ತಿ ಮತ್ತು ಮಕ್ಕಳ ಮನಸ್ಸನ್ನು ಮುದುಗೊಳಿಸಿ ಓದಿಸಿಕೊಳ್ಳುವ ಅವರ ಇಷ್ಟದ ಕೋರ್ಸ್‌ಗಳನ್ನು ಆಯ್ಕೆ ಮಾಡಿ ಕೊಡಿಸಿದರೆ ಮುಂದೆ ಮಕ್ಕಳಿಗೆ ವೃತ್ತಿ ಮತ್ತು ಪ್ರವೃತ್ತಿ ಎರಡನ್ನು ಜೊತೆ ಮಾಡಿದಂತಾಗುತ್ತದೆ.

ಆದುದರಿಂದ comedk, kcet, neet, jee, cuet, CA foundations ಮುಂತಾದ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಮಕ್ಕಳು ಕಣ್ಣು ತುಂಬಾ ಕನಸುಗಳನ್ನು ತುಂಬಿಕೊಂಡು ಓದಿ ಬರೆಯುತ್ತಾರೆ ನಿಜ. ಆದರೆ ಅವರ ಪಕ್ಕದಲ್ಲಿ ಮನಸ್ಸಿನ ತುಂಬಾ ಇತರೆ ಸಾಂಪ್ರದಾಯಿಕ ಕೋರ್ಸುಗಳ ಕಡೆಗೂ ಒಲವು ಬೆಳೆಸಿಕೊಂಡು ಅಂತಹ ಕೋರ್ಸ್‌ಗಳನ್ನ ಆಯ್ಕೆ ಮಾಡಿಕೊಂಡು ಓದುತ್ತೇನೆ ಎನ್ನುವ ಮಕ್ಕಳಿಗೆ ಮನೆಯಲ್ಲೇ ಪ್ರೋತ್ಸಾಹ ಇರುವುದಿಲ್ಲ.

ಕಾರಣ, ಉದ್ಯೋಗಾವಕಾಶಗಳು ತಾಂತ್ರಿಕ ಶಿಕ್ಷಣ ವೃತ್ತಿಪರ ಕೋರ್ಸ್‌ಗಳಿಗಿರುವ ಬೇಡಿಕೆ ಇಂದು ಕಲಾ ಮಾಧ್ಯಮದ ಕೋರ್ಸ್‌ಗಳಿಗೆ ಇಲ್ಲ. ಇಂದು ಕಲಾ ಮಾಧ್ಯಮ ಮತ್ತು ತಾಂತ್ರಿಕ ಶಿಕ್ಷಣ ಈ ಎರಡು ಕೂಡ ಉದ್ಯೋಗ ಸೃಷ್ಟಿಯ ಕೋರ್ಸ್‌ಗಳು. ಯಾವ ತಾಂತ್ರಿಕ ಶಿಕ್ಷಣವು ಬೇಡಿಕೆಗೆ ತಕ್ಕಂತೆ ಸರ್ಕಾರಿ ಹುದ್ದೆಗಳನ್ನು ಸೃಷ್ಟಿಸಿಕೊಡುತ್ತಿಲ್ಲ. ತಾಂತ್ರಿಕ ಶಿಕ್ಷಣದ ಕೋರ್ಸ್‌ಗಳನ್ನು ಮುಗಿಸಿಕೊಂಡು ಉದ್ಯೋಗ ಆಕಾಂಕ್ಷಿಗಳಾದವರಿಗೆ ದೊಡ್ಡ ಓಪನಿಂಗ್ ಇರುವುದು ಈಗ ಖಾಸಗಿ ವಲಯದಲ್ಲೇ.

ಅಂದಮೇಲೆ ಪ್ರದರ್ಶಕ ಕಲೆಗಳು, ಇತಿಹಾಸ, ಅರ್ಥಶಾಸ್ತ್ರ, ಶಿಕ್ಷಣ ಮತ್ತು ಮಾನವಿಕ ಅಧ್ಯಯನಗಳು ಈ ತಾಂತ್ರಿಕ ಶಿಕ್ಷಣದ ಮುಂದೆ ಮಂಕಾಗಬೇಕೇಕೆ? ಬಿಎ, ಸಮಾಜಶಾಸ್ತ್ರ, ಮನೋ ವಿಜ್ಞಾನ, ಇತಿಹಾಸ, ಬಿಎಸ್‌ಡಬ್ಲ್ಯೂ, ಜರ್ನಲಿಸಂ, ಅನಿಮೇಶನ್ ಕಾನೂನು ಶಾಸ್ತ್ರ, ವಾಣಿಜ್ಯ ಶಾಸ್ತ್ರ, ಬಿಬಿಎ ಮುಂತಾದ ಕೋರ್ಸ್‌ಗಳು ಕೂಡ ಇಂದು ಸಾಫ್ಟ್‌ವೇರ್ ಕೋರ್ಸ್‌ಗಳಷ್ಟೇ ಅವಕಾಶ ಕಲ್ಪಿಸುತ್ತಿವೆ. ಆದರೆ ಕೌಶಲ್ಯಾಧಾರಿತ ಕಲಿಕೆ ನಿಮ್ಮದಾಗಬೇಕು ಅಷ್ಟೇ. ಇಬ್ಬರೂ ಖಾಸಗಿ ವಲಯದಲ್ಲೇ ಜಾಗ ಹುಡುಕುತ್ತೀರಿ. ಅದಕ್ಕಾಗಿ ಉದ್ಯೋಗ ಮುಖಿ ಕೋರ್ಸ್‌ಗಳನ್ನು ಹುಡುಕುವಾಗ ನಿಮ್ಮ ಆಸಕ್ತಿ ಯಾವ ಕಡೆಗಿದೆ ಎಂಬುದನ್ನು ಮೊದಲು ಖಚಿತಪಡಿಸಿಕೊಳ್ಳಿ. ಪೋಷಕರೊಂದಿಗೆ ಚರ್ಚಿಸಿ, ರಿಸ್ಕ್ ತೆಗೆದುಕೊಳ್ಳದ ಮಕ್ಕಳಿಗೆ ತಾಂತ್ರಿಕ ಶಿಕ್ಷಣದ ಕೋರ್ಸ್‌ಗಳಲ್ಲಿ ತಮಗೆ ಬೇಕಾದ್ದು ಸಿಗದೇ ಇದ್ದಾಗ ಮತ್ತೊಂದು ಮಾರ್ಗಕ್ಕೆ ತೆರಳಿದರೆ ಅಲ್ಲಿ ನಿಮ್ಮ ಕಣ್ಣಿಗೆ ಡಿಜಿಟಲ್ ಮಾರ್ಕೆಟಿಂಗ್ ಡೇಟಾನಾಲಿಟಿಕ್ಸ್ ರ‍್ಯಾಲಿ ಹಾಗೂ ಜಿಎಸ್‌ಟಿ ಇಂಟರ್ ನ್ಯಾಷನಲ್ ಫೈನಾನ್ಸಿಯಲ್ ಸ್ಟ್ಯಾಂಡರ್ಡ್ ಐಟಿಐ ಕೋರ್ಸ್‌ಗಳು, ಹೋಟೆಲ್ ಮ್ಯಾನೇಜ್ಮೆಂಟ್,ಫಾರ್ಮಸಿ ಕೋರ್ಸ್‌ಗಳು, ಕೃಷಿ ವಿಜ್ಞಾನದ ಕೋರ್ಸ್‌ಗಳು, ಬಿಎಸ್ ತೋಟಗಾರಿಕೆ ಅಗ್ರಿಕಲ್ಚರ್ ಸೈನ್ಸ್, ಪ್ಯಾರಾ ಮೆಡಿಕಲ್ ಕೋರ್ಸ್‌ಗಳು, ನರ್ಸಿಂಗ್ ಮತ್ತು ಫ್ಯಾಷನ್ ಡಿಸೈನಿಂಗ್ ಮುಂತಾದ ಬೇರೆ ಬೇರೆ ಕೋರ್ಸ್‌ಗಳ ಕಡೆಗೆ ಗಮನಕೊಟ್ಟರೆ ವೈದ್ಯಕೀಯ ಮತ್ತು ಸಾಫ್ಟ್‌ವೇರ್ ಕೋರ್ಸ್‌ಗಳು ಸಿಗದೇ ಹೋದವರಿಗೂ ಆಸಕ್ತಿ ಹುಟ್ಟಿಸುವ ಕೌಶಲ್ಯಾಧಾರಿತ ಓಪನಿಂಗ್ ನಿಮಗಾಗಿ ತೆರೆದುಕೊಳ್ಳುತ್ತದೆ.



> ಉದ್ಯೋಗಾವಕಾಶಗಳು ತಾಂತ್ರಿಕ ಶಿಕ್ಷಣ ವೃತ್ತಿಪರ ಕೋರ್ಸ್‌ಗಳಿಗಿರುವ ಬೇಡಿಕೆ, ಇಂದು ಕಲಾ ಮಾಧ್ಯಮದ ಕೋರ್ಸ್‌ಗಳಿಗಿಲ್ಲ. ಇಂದು ಕಲಾ ಮಾಧ್ಯಮ, ತಾಂತ್ರಿಕ ಶಿಕ್ಷಣ ಈ ಎರಡು ಕೂಡ ಉದ್ಯೋಗ ಸೃಷ್ಟಿಯ ಕೋರ್ಸ್‌ಗಳು. ಯಾವ ತಾಂತ್ರಿಕ ಶಿಕ್ಷಣವು ಬೇಡಿಕೆಗೆ ತಕ್ಕಂತೆ ಸರ್ಕಾರಿ ಹುದ್ದೆಗಳನ್ನು ಸೃಷ್ಟಿಸಿಕೊಡುತ್ತಿಲ್ಲ. ತಾಂತ್ರಿಕ ಶಿಕ್ಷಣದ ಕೋರ್ಸ್‌ಗಳನ್ನು ಮುಗಿಸಿಕೊಂಡು ಉದ್ಯೋಗ ಆಕಾಂಕ್ಷಿಗಳಾದವರಿಗೆ ದೊಡ್ಡ ಓಪನಿಂಗ್ ಇರುವುದು ಈಗ ಖಾಸಗಿ ವಲಯದಲ್ಲೇ.

ಕಲಿಯುವ ಕೋರ್ಸ್‌ಗಳಲ್ಲಿ ಬಿಎ, ಬಿಎಸ್ಸಿ, ಬಿಕಾಂ, ಎಂಎ, ಎಂಎಸ್‌ಸಿ, ಎಂಕಾಂಗಳು ಸಾಂಪ್ರದಾಯಿಕ ಕೋರ್ಸ್‌ಗಳಾಗಿ ಕಾಣುತ್ತಿವೆ. ಅದೇ ತಾಂತ್ರಿಕ ಶಿಕ್ಷಣ ಇಂದು ಎಲ್ಲಾ ಕ್ಷೇತ್ರಗಳಲ್ಲಿ ಅವಕಾಶ ಕಲ್ಪಿಸುವ ಉದ್ಯೋಗಮುಖಿ ಕೋರ್ಸ್‌ಗಳಂತೆ ಕಾಣುತ್ತಿವೆ. ತಮಾಷೆ ಎಂದರೆ ಎರಡಕ್ಕೂ ಕಲಿಯುವ, ಕಲಿಸುವ ಜನ ಇದ್ದಾರೆ. ಕೆಲವರು ತಮಗೆ ಹೊಂದಿಕೆಯಾಗದಿದ್ದರೂ ಕಷ್ಟಕರವಾದ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಳ್ಳುತ್ತಾರೆ.

ಕಾರಣ ತನ್ನ ಸಹಪಾಠಿ ಅದೇ ಕೋರ್ಸ್ ಆಯ್ಕೆ ಮಾಡಿಕೊಂಡಿದ್ದಾನೆ ಅಂತ. ಅಥವಾ ಪೋಷಕರ ಆಸೆ ಆಕಾಂಕ್ಷೆಗಳನ್ನು ಈಡೇರಿಸೋಣ ಅಂತ. ಸ್ನೇಹಿತರು ಮತ್ತು ಸಮೂಹದ ಒತ್ತಡದಿಂದ ಕಲಿಯುವ ಕೋರ್ಸ್‌ಗಳನ್ನು ಆಯ್ಕೆ ಮಾಡಬೇಡಿ. ಭವಿಷ್ಯದ ಉದ್ಯೋಗ ಖಾತ್ರಿ, ಆರ್ಥಿಕ ಭದ್ರತೆಯ ಬಗ್ಗೆ ವಿಷಯ ತಜ್ಞರ ಜೊತೆ ಸಮಾಲೋಚಿಸಿ ಕೋರ್ಸ್‌ಗಳನ್ನು ಆಯ್ಕೆ ಮಾಡಿ. ಇದಕ್ಕಾಗಿ ಸಂಘ–ಸಂಸ್ಥೆಗಳು ಸಾದರಪಡಿಸಿ ನಡೆಸುವ ಮುಕ್ತ ಸಂವಾದಗಳಲ್ಲಿ ಪಾಲ್ಗೊಳ್ಳಿ. ನಿಮ್ಮ ಶಿಕ್ಷಕರೊಂದಿಗೆ ಸಂಪರ್ಕ ಸಾಧಿಸಿ, ಚರ್ಚಿಸಿ. ಹಾಗೆ ಚರ್ಚಿಸುವಾಗ ತಮ್ಮ ತಮ್ಮ ಸಂಸ್ಥೆಗಳನ್ನು ಮಾರ್ಕೆಟ್ ಲಿಂಕ್ ಮಾಡಿಕೊಳ್ಳುವ ಸಲುವಾಗಿ ತಮ್ಮ ಸಂಸ್ಥೆಯ ಕುರಿತು ಅವುಗಳನ್ನು ಬಿಕರಿ ಮಾಡುವ ಸಲುವಾಗಿ ನಡೆಸುವ ಮೆಂಟರ್‌ಗಳ ಮತ್ತು ಕೌಸಿಎಕ್ಸ್‌ಗಳ ಬಗ್ಗೆ ಎಚ್ಚರ ವಹಿಸಿ. ಆತುರಕ್ಕೆ ತುರ್ತು ನಿರ್ಧಾರ ಕೈಗೊಳ್ಳಬೇಡಿ. ತಾಂತ್ರಿಕ ಶಿಕ್ಷಣ ಶಿಕ್ಷಣದಂತೆಯೇ ಇಂದು ಕೌಶಲ್ಯಾಧಾರಿತ ಶಿಕ್ಷಣ ಚಾಲ್ತಿಯಲ್ಲಿದ್ದು, ಬಹಳಷ್ಟು ಪೋಷಕರು ಆ ನಿಟ್ಟಿನಲ್ಲಿ ಕೋರ್ಸ್‌ಗಳನ್ನು ಹುಡುಕುತ್ತಾರೆ.

ಪ್ರವಾಸೋದ್ಯಮ ಮತ್ತು ಹಾಸ್ಪಿಟಾಲಿಟಿ ಕೋರ್ಸ್‌ಗಳಲ್ಲಿ ಕಲಿತವರು ಕೂಡ ಇಂದು ರಾಯಲ್ ಕೆರೆಬಿಯನ್ ಕ್ರೂಸ್‌ನಂತಹ ಪ್ರೊಫೈಲ್ ಸಂಸ್ಥೆಗಳಲ್ಲಿ ಕೆಲಸ ಹುಡುಕಿಕೊಂಡು ಅತಿ ಹೆಚ್ಚು ಸಂಪಾದಿಸುತ್ತಿರುವವರನ್ನು ಕಾಣಬಹುದು. ಕಿಚನ್ ಮ್ಯಾನೇಜ್ಮೆಂಟ್ ಹೋಟೆಲ್ ಯಾವ ಪದವಿ ಕೋರ್ಸ್‌ಗಳಿಗೂ ಕಡಿಮೆ ಇಲ್ಲದಂತೆ ವಿದೇಶಗಳಲ್ಲಿ ಉದ್ಯೋಗ ಸೃಷ್ಟಿಸುತ್ತಿವೆ. ನಮ್ಮ ಹುಡುಗರು ಇಲ್ಲಿಂದ ಲಂಡನ್‌ಗೆ ಎಂಎಸ್ ಕಲಿಯಲಿಕ್ಕೆ ಹೋಗುತ್ತಿರುವುದು ಇತ್ತೀಚಿನ ದಿನಗಳಲ್ಲಿ ಸರ್ವೇ ಸಾಮಾನ್ಯ.

ಬದಲಾಗುತ್ತಿರುವ ಈಗಿನ ಉದ್ಯೋಗ ಮಾರುಕಟ್ಟೆಯಲ್ಲಿ ಹೊಸ ವೃತ್ತಿಗಳು ಮತ್ತು ಸ್ಕಿಲ್‌ಗಳ ಬಗ್ಗೆ ಅವಲೋಕನ ಅತೀ ಜರೂರು ಮತ್ತು ಅಗತ್ಯ. ಇಂದಿನ ಸ್ವದೇಶಿ ಮತ್ತು ವಿದೇಶಿ ನೆಲದಲ್ಲಿ ಮೆಡಿಕಲ್, ಸಾಫ್ಟ್‌ವೇರ್ ಎಕ್ಸಿಕ್ಯೂಟಿವ್ ಮ್ಯಾನೇಜ್ಮೆಂಟ್ ಹುದ್ದೆಗಳು ಅತೀ ಬೇಡಿಕೆ ಮತ್ತು ಮುಖ್ಯ ವೃತ್ತಿ ಮತ್ತು ಅಧಿಕ ಆದಾಯದ ವೃತ್ತಿಗಳಾಗಿವೆ. ನೋ ಡೌಟ್ 12ನೇ ತರಗತಿ ಮುಗಿಸಿದ ವಿದ್ಯಾರ್ಥಿಗಳ ಕಣ್ಣುಗಳಲ್ಲಿ ಆ ಹೈ ಪ್ರೊಫೈಲ್ ಹುದ್ದೆಗಳನ್ನು ಪಡೆಯಲು ಬೇಕಾದ ಶಿಕ್ಷಣ ಮತ್ತು ಅವುಗಳ ಗೇಟ್ ಪರೀಕ್ಷೆಗಳು ಅವುಗಳನ್ನು ದಾಟಲು ಬೇಕಾದ ತಯಾರಿಗಳು ಮತ್ತು ನಿರೀಕ್ಷಿತ ಫಲಿತಾಂಶಗಳ ಕಡೆಗೆ ನಮ್ಮ ವಿದ್ಯಾರ್ಥಿಗಳ ನಡಿಗೆ ಇದೆ.

ಬಹುಪಾಲು ಕಾರ್ಪೋರೇಟ್ ವಲಯದ ಮತ್ತು ನಗರ ಕೇಂದ್ರಿತ ವಿದ್ಯಾವಂತ ಪೋಷಕ ವರ್ಗದ ಬೆಂಬಲ ಮತ್ತು ಪ್ರೇರಣೆ ಆ ವಲಯದ ಮಕ್ಕಳಿಗೆ ಅನಾಯಾಸವಾಗಿ ಸಿಗುತ್ತದೆ. ಆ ಮಕ್ಕಳು ಈ ದಿಸೆಯಲ್ಲಿ ಯಶಸ್ವಿಯು ಆಗುತ್ತಾರೆ ಅವರಿಗೆ ಶುಭವಾಗಲಿ. ಆದರೆ ಇದಾವುದೂ ಇಲ್ಲದ 12ನೇ ತರಗತಿ ಪಾಸ್ ಮಾಡಿ ಮುಂದೇನು ಎಂದು ಪ್ರಶ್ನಾರ್ಥಕ ಚಿನ್ಹೆಯ ಕೆಳಗೆ ಕುಳಿತ ಸಾಮಾನ್ಯ ವರ್ಗದ ವಿದ್ಯಾರ್ಥಿಗಳಿಗೆ ಕೋರ್ಸುಗಳ ಆಯ್ಕೆಯ ವಿಷಯದಲ್ಲಿ ನಿಗಾ ಇರಲಿ ಎಂಬ ಒಂದೇ ಉದ್ದೇಶ ಈ ಲೇಖನಕ್ಕೆ ಅಷ್ಟೇ ಕಾರಣ. ಕೆರಿಯರ್ ಗೈಡೆನ್ಸ್ ಇಲ್ಲದೆ ಬೆಳೆದ ತಲೆಮಾರಿನವರು ನಾವು ಸಿಕ್ಕಿದ್ದನ್ನು ಆರಿಸಿಕೊಂಡು ತೋಚಿದ್ದನ್ನು ಓದಿಕೊಂಡು ಬೆಳೆದವರು ಜೀವನ ಉದ್ಯೋಗ ಹೇಗೋ ನಡೆದು ಹೋಯಿತು. ಆದರೀಗ ಎಐ ತಂತ್ರಜ್ಞಾನದ ಉದ್ಯೋಗ ಸೃಷ್ಟಿಯ ಕಾಲ. ಇಲ್ಲಿ ಬಳಸಲ್ಪಡುವ ಆಯ್ಕೆಯ ಮಾನದಂಡಗಳು ಅಪ್ಡೇಟೆಡ್ ಮಾದರಿಯಲ್ಲಿರುತ್ತವೆ. ನಮ್ಮ ಸರ್ಕಾರಿ ಕಾಲೇಜಿನ ಮಕ್ಕಳು ಗ್ರಾಮೀಣ ವಿದ್ಯಾರ್ಥಿ ಪೋಷಕರು ತಾವೇ ತಮ್ಮಷ್ಟಕ್ಕೆ ದ್ವೀಪಗಳಂತೆ ಬದುಕಬಾರದು. ಅನಂತ ಆಕಾಶದಂತೆ ತಮ್ಮ ಆಯ್ಕೆಯ ಮಾನದಂಡಗಳನ್ನು ವಿಸ್ತರಿಸಿಕೊಳ್ಳುತ್ತಾ ಈ ಹಂತವನ್ನು ದಾಟಬೇಕು. ಆ ಶಕ್ತಿ ನಮ್ಮ ಮಕ್ಕಳಿಗಿದೆ. ಅವರಿಗೆ ಸರಿಯಾದ ಸಮಯದಲ್ಲಿ ಎಚ್ಚರಿಸಿ ಅವರ ಗೊತ್ತು ಗುರಿಗಳನ್ನು ಗೋಚರಿಸುವ ಪ್ರಯತ್ನವನ್ನು ನಾವು ಮಾಡಬೇಕು. ಈ ನಿಟ್ಟಿನಲ್ಲಿ ಮಕ್ಕಳನ್ನು ಪ್ರೇರೇಪಿಸಲು ಇದೊಂದು ಚಿಕ್ಕ ಪ್ರಯತ್ನ. ಹೆಚ್ಚಿನ ಅಧ್ಯಯನ ಮತ್ತು 5 ವರ್ಷಗಳ ನಂತರದಲ್ಲಿ ಭದ್ರವಾದ ಉದ್ಯೋಗ ನೆಲೆ ಬೇಕಾದವರು ತಾಂತ್ರಿಕ, ಸಾಂಪ್ರದಾಯಿಕ ಪ್ರಾಯೋಗಿಕ ಯಾವುದೇ ಇರಲಿ, ಪದವಿಯನ್ನೇ ಆಯ್ಕೆ ಮಾಡಿ ಕೊಂಡರು ತಪ್ಪಾಗುವುದಿಲ್ಲ. ಇಲ್ಲಿ ಅಧ್ಯಯನ ಆಸಕ್ತಿಗಳು ನಿರಂತರ ಓದಿನ ಪ್ರಕ್ರಿಯೆಗಳ ಬಗೆಗೆ ಆಸಕ್ತಿ ಇರುವವರಿಗೆ ಮಾತ್ರ ಇದು ಸೂಕ್ತ.


ಇಷ್ಟಾದರೂ ನಮ್ಮ ಮಕ್ಕಳು ಅಂದರೆ, ನಮ್ಮ ವಿದ್ಯಾರ್ಥಿಗಳು ಮೇಲಿನ ಯಾವುದೋ ಒಂದು ಗುಂಪಿನಲ್ಲಿ ದಾಖಲಾಗಿ ತಮ್ಮ ಗುರಿ ಮುಟ್ಟಿ ಉದ್ಯೋಗಗಿಟ್ಟಿಸಿ ಬದುಕು ಕಟ್ಟಿಕೊಂಡು ಎಲ್ಲೋ ಒಂದು ಕಡೆ ಸಂತಸದಿಂದಿರಲಿ ಎಂದು ಲೇಖನ ಮುಗಿಸಿಬಿಡಲು ಮನಸ್ಸಾಗುತ್ತಿಲ್ಲ. ಕಾರಣ ಇಷ್ಟೇ ಇಲ್ಲಿವರೆಗೂ ನಾವು ಚರ್ಚಿಸಿದ್ದು ವಿದ್ಯಾರ್ಥಿಗಳ ಆಯ್ಕೆಯ ಕೋರ್ಸ್‌ಗಳು ಮತ್ತು ಉದ್ಯೋಗಾಕಾಂಕ್ಷಿ ಮಾದರಿಗಳು. ಆದರೆ ಇವರಲ್ಲೇ ಕೆಲವು ಡೈನಾಮಿಕ್ ಪರ್ಸನಾಲಿಟಿಗಳು ಇರುತ್ತಾರೆ. ನಮ್ಮ ಹಳ್ಳಿ ಕಡೆ ಕೆಲವರನ್ನು ಎದ್ದಾಳು ಅಂತಾರಲ್ಲ ಹಾಗೆ. ಅಂತಹವರು ಈ ಗುಂಪಿನಲ್ಲಿ ಅಂತಹ ಎದ್ದಾಳುಗಳು ಯಾರಾದರೂ ಇದ್ದರೆ ಅವರು ಅಪ್ಡೇಟ್ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡು ತಂತ್ರಜ್ಞಾನ ಸಂಬಂಧಿ ಉದ್ಯೋಗ ಗಳಿಸಿ ಅನುಭವ ಪಡೆದು ಸಪ್ಲೈ ಚೈನ್ ಅಥವಾ ಸೇವಾ ಕ್ಷೇತ್ರದ ಕಡೆ ಮುಖ ಮಾಡಿ ಹೊಸ ಸ್ಟಾರ್ಟಪ್ ಕಂಪನಿಗಳನ್ನು ಪ್ರಾರಂಭಿಸಲು ಬೇಕಾದ ತಯಾರಿ, ಪೂರ್ವಸಿದ್ಧತೆ ಗೆಳೆಯರ ಬಳಗ, ಮಾರುಕಟ್ಟೆಯ ಅರಿವು, ಸ್ಪಷ್ಟ ಉದ್ದೇಶ ಸಿದ್ಧಪಡಿಸಬೇಕಾದ ಉತ್ಪನ್ನ, ಅದಕ್ಕೆ ಬೇಕಾದ ಕಚ್ಚಾ ಸಾಮಗ್ರಿ, ಮಾನವ ಸಂಪನ್ಮೂಲ, ಆರ್ಥಿಕ ಸಹಾಯ ಮುಂತಾದ ಉದ್ಯಮ ಸಂಬಂಧಿತ ವಿಚಾರಗಳ ಬಗ್ಗೆ ಈಗಿನಿಂದಲೇ ತಿಳಿದುಕೊಳ್ಳುವ ಪ್ರಯತ್ನ ಮಾಡಬೇಕು. ಅದಕ್ಕಾಗಿ ಸರ್ಕಾರಿ ಸೇವಾ ಸಂಸ್ಥೆಗಳಿಂದ ತಮ್ಮ ಬಿಡುವಿನ ವೇಳೆಯಲ್ಲಿ ಮಾಹಿತಿ ಮತ್ತು ಮಾರ್ಗದರ್ಶನ ಪಡೆಯಬೇಕು.

ಇಂತಹ ದೊಡ್ಡ ದೊಡ್ಡ ಸಾಹಸಗಳಿಗೆ 18–19ರ ವಯಸ್ಸು ಸಾಕೆ. ಇಂದು ಮೂಗು ಮುರಿಯುವವರ ಮುಂದೆ ಸಾಧಿಸುವ ಮನಸ್ಸಿಗೆ ವಯಸ್ಸು ಅಡ್ಡಿಯಲ್ಲ ಎಂಬಂತೆ ಈಗಿನಿಂದಲೇ ಒಂದು ಸ್ಟಾರ್ಟಪ್ ಎಂಟಪ್ರ್ಯೆನರ್ಶಿಪ್‌ಗಾಗಿ ನಿಮ್ಮ ಮನಸ್ಸು ಹಂಬಲಿಸಬೇಕು. ಒಟ್ಟು 7.10 ಲಕ್ಷ ವಿದ್ಯಾರ್ಥಿಗಳು ಈ ಬಾರಿ ದ್ವಿತೀಯ ಪಿಯುಸಿ ಪರೀಕ್ಷೆ ಬರೆದಿದ್ದಾರೆ. ಅವರಲ್ಲಿ ವಿಜ್ಞಾನ ವಿಭಾಗಕ್ಕೆ ಒಟ್ಟು 2,92,645 ಲಕ್ಷ ವಾಣಿಜ್ಯ ವಿಭಾಗಕ್ಕೆ 2,11,174 ಲಕ್ಷ ಕಲಾವಿಭಾಗಕ್ಕೆ 1,42,982 ಲಕ್ಷ ಮಂದಿ ಪರೀಕ್ಷೆ ಬರೆದಿದ್ದಾರೆ. ಇವರಲ್ಲಿ ಎಲ್ಲರೂ ಉದ್ಯೋಗಾಕಾಂಕ್ಷಿಗಳಾದರೆ ಏನು ಪ್ರಯೋಜನ. ಇವರಲ್ಲೇ ಕೆಲವರಾದರು ಉದ್ಯೋಗದಾತರಾಗಿ ಬೆಳೆಯುವ ಮನಸ್ಸು ಮಾಡಬೇಕು ಅದಕ್ಕಾಗಿ ಇಂದಿನಿಂದಲೇ ಅಂದರೆ ನಿಮ್ಮ ಕೋರ್ಸ್ ಅನ್ನು ಆಯ್ಕೆ ಮಾಡಿಕೊಂಡು ಕಲಿಯುವಾಗಲೇ ಈ ನಿಟ್ಟಿನಲ್ಲಿ ಸಿದ್ಧತೆ ಮಾಡಿಕೊಳ್ಳಬೇಕು.

ವಿದ್ಯಾರ್ಥಿ ತನಗೆ ಇಷ್ಟವಿರುವ ಕ್ಷೇತ್ರಕ್ಕೆ ಹೊರಟು ನಿಂತರೆ ಉದ್ಯೋಗ ಖಾತ್ರಿ ಇಲ್ಲ. ಖಾತ್ರಿ ಇರುವ ಕೋರ್ಸ್‌ಗಳನ್ನು ಆಯ್ಕೆ ಮಾಡಿಕೊಂಡರೆ ಅದು ತನ್ನ ಆಸಕ್ತಿಯ ಕ್ಷೇತ್ರ ಅಲ್ಲ. ಒಂದು ವೇಳೆ ಎರಡು ಬೇಕೆಂದರೆ ಮನೆಯಲ್ಲಿ ಪೋಷಕರ ಒಪ್ಪಿಗೆ ಸಿಗುವುದಿಲ್ಲ. ಸಹಪಾಠಿಗಳಂತೆ ಪ್ರವಾಹದೊಂದಿಗೆ ತೇಲಿ ಹೋಗೋಣವೆಂದರೆ ಸಹಪಾಠಿಯಷ್ಟು ಅಂಕಗಳು ಬಂದಿಲ್ಲ ಅಂಕಗಳಿಲ್ಲದ ಮೇಲೆ ವೃತ್ತಿ ಶಿಕ್ಷಣದ ಕೋರ್ಸ್‌ಗಳು ಸಿಗುವುದಿಲ್ಲ. ಕೌಶಲ್ಯಾಧಾರಿತ ಕೋರ್ಸ್‌ಗಳು ಮನೆಯವರ ಮುಂದೆ ಸಹಪಾಠಿಗಳ ಮುಂದೆ ಶೋಭೆ ತರುವುದಿಲ್ಲ ಎಂದು ಕಾಡುತ್ತವೆ. ನಮ್ಮ ಸರಾಸರಿ ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಈ ಕೋರ್ಸುಗಳೆಂಬ ದ್ವಂದ್ವಗಳು ಆಯ್ಕೆಯ ಸಂದರ್ಭದಲ್ಲಿ ವಿಪರೀತವಾಗಿ ಕಾಡುತ್ತವೆ.

ಜ್ಞಾನಿ ಪೋಷಕರು ಕೂಡ ಆಯ್ಕೆ ಹಂತದಲ್ಲಿ ಮಕ್ಕಳ ಭವಿಷ್ಯದ ಬಗ್ಗೆ ನೂರು ಬಾರಿ ಯೋಚಿಸುತ್ತಾರೆ. ಒಂದು ಕಾಲದಲ್ಲಿ ಭಾರತದ ಯುವಕರು ವಿದೇಶಗಳಿಗೆ ಉದ್ಯೋಗಕ್ಕಾಗಿ ತೆರಳಿದರೆ ಪ್ರತಿಭೆಗಳ ಫಾರಿನ್ ಪಲಾಯನ ಎಂಬ ಶೀರ್ಷಿಕೆಯಡಿ ಪತ್ರಿಕೆಗಳು ಲೇಖನ ಬಳಸುತ್ತಿದ್ದವು. ಆದರೆ ಈಗ ವಿಶ್ವವೇ ಚಿಕ್ಕದಾಗಿ ಹೋಗಿದೆ. ಕಲಿಕೆಗಳಿಗೆ ಎರಡರಲ್ಲೂ ಜಗತ್ತೇ ಒಂದು ಮನೆಯಂತಾಗಿದೆ. ಅವಕಾಶದ ಹುಡುಕಾಟದಲ್ಲಿ ತನ್ನ ಎಲ್ಲೇ ವ್ಯಾಪ್ತಿಗಳನ್ನು ವಿಸ್ತರಿಸಿಕೊಂಡು ಕುವೆಂಪುರವರ ಅನಿಕೇತನದ ಸಾಲುಗಳಂತೆ ನಮ್ಮ ಯುವ ಸಮುದಾಯ ನಿರ್ದಿಗಂತವಾಗಿ ಏರಿ ತಮ್ಮ ಸೀಮಾ ರೇಖೆಗಳಲ್ಲಿ ನೆಲೆ ಹುಡುಕುತ್ತಿದ್ದಾರೆ. ಇದುವೇ ಇದು ಮೇ, ಜೂನ್ ತಿಂಗಳು 12ನೇ ತರಗತಿ ಪಾಸ್ ಆಗಿ ಹೀಗೆ ಕೋರ್ಸ್‌ಗಳ ಹುಡುಕಾಟದಲ್ಲಿರುವ ಲಕ್ಷ ಲಕ್ಷ ಜನ ವಿದ್ಯಾರ್ಥಿ, ಪೋಷಕರು ಉತ್ಸುಕತೆಯಲ್ಲಿ ಕುತೂಹಲಿಯಾಗಿದ್ದಾರೆ. ಮತ್ತೊಮ್ಮೆ ನೀಟ್ ಬರೆಯಲು ಸಜ್ಜಾಗುತ್ತಿದ್ದಾರೆ. ಈ ಗುಂಪಿನ ಹುಡುಗ–ಹುಡುಗಿಯರಿಗೆ ತಮ್ಮ ಕೆರಿಯರ್ ಗೈಡೆನ್ಸ್ ಕೊಡುವ ಹೊಸ ಹೊಸ ಆವಿಷ್ಕಾರಗಳಿಗಾಗಿ ಹುಡುಕಾಡುತ್ತಿದ್ದಾರೆ. ಈ ನಿಟ್ಟಿನಲ್ಲಿ 'ಮೈಸೂರು ಮಿತ್ರ' ಕೂಡ ತನ್ನ ಓದುಗ ಪೋಷಕರಿಗಾಗಿ ಒಂದಷ್ಟು ಕೆರಿಯರ್ ಗೈಡೆನ್ಸ್ ಮಾದರಿಯ ಚಿಕ್ಕ ಟಿಪ್ಪಣಿಯೊಂದನ್ನು ಸಿದ್ಧಪಡಿಸಿ, ನೀಡಿದರೆ ಲಕ್ಷಗಳು ಬೇಡ ಸಾವಿರಗಳು ಬೇಡ ನೂರುಗಳು ಬೇಡ ಹತ್ತಾರು ಮಕ್ಕಳು ಇದರಿಂದ ಪ್ರೇರಣೆಗೊಂಡು ಕೋರ್ಸ್‌ಗಳ ಆಯ್ಕೆಯಲ್ಲಿ ಜಾಣತನ ತೋರಿ ತಮ್ಮ ಉದ್ಯೋಗಮುಖ ಆಸಕ್ತಿದಾಯಕ ಉದ್ಯಮಶೀಲತಾ ನಡೆಯೊಂದಿಗೆ ಹೆಜ್ಜೆ ಹಾಕಿದರೆ ಅವರ ಕನಸುಗಳು ಸಾಕಾರಗೊಳ್ಳುತ್ತವೆ. ಅವರ ಪೋಷಕರ ಬಯಕೆ ಪತ್ರಿಕೆಯ ಮತ್ತು ನಮ್ಮ ನಿಮ್ಮೆಲ್ಲರ ನಿರೀಕ್ಷೆ ಸಾರ್ಥಕಕೊಳ್ಳುತ್ತದೆ ಏನಂತೀರಿ?

ಕಾರು ಡಿಕ್ಕಿ: ಬೈಕ್ ಸವಾರ ಸಾವು, ಮತ್ತೋರ್ವನಿಗೆ ಗಂಭೀರ ಗಾಯ



ಮೈಸೂರು, ಮೇ 18– ಕಾರು ಡಿಕ್ಕಿ ಹೊಡೆದು ಬೈಕ್ ಸವಾರ ಸ್ಥಳದಲ್ಲೇ ಸಾವನ್ನಪ್ಪಿ, ಮತ್ತೋರ್ವ ಗಂಭೀರವಾಗಿ ಗಾಯಗೊಂಡಿರುವ ಘಟನೆ ಮೈಸೂರು–ಬನ್ನೂರು ರಸ್ತೆಯ ಎಟಿಎಂಇ ಕಾಲೇಜು ಬಳಿ ಶನಿವಾರ ತಡರಾತ್ರಿ ನಡೆದಿದೆ.

ಬೆಂಗಳೂರಿನ ಅನ್ನ ಪೂರ್ಣೇಶ್ವರಿ ನಗರದ ಮಂಜು(23) ಅಪಘಾತದಲ್ಲಿ ಮೃತಪಟ್ಟಿದ್ದು, ಅದೇ ಬಡಾವಣೆ ನಿವಾಸಿ ವಿಕಾಸ್(21) ಗಂಭೀರವಾಗಿ ಗಾಯಗೊಂಡು ಖಾಸಗಿ ಆಸ್ಪತ್ರೆಯಲ್ಲಿ ದಾಖಲಾಗಿ ದ್ದಾರೆ. ವೆಲ್ಡರ್ ಆಗಿರುವ ವಿಕಾಸ್, ಮೈಸೂರಿನ ಬನ್ನೂರು ರಸ್ತೆಯಲ್ಲಿರುವ ಕೆಇಬಿ ಸ್ಟೇಷನ್‌ನಲ್ಲಿ ವೆಲ್ಡಿಂಗ್ ಗುತ್ತಿಗೆ ತೆಗೆದುಕೊಂಡಿದ್ದು, ಸಹಾಯಕ್ಕೆಂದು ಸ್ನೇಹಿತ ಮಂಜುನನ್ನು ಕರೆತಂದಿದ್ದ. ಇವರಿಬ್ಬರೂ ಮೆಲ್ಲಹಳ್ಳಿ ಗ್ರಾಮದಲ್ಲಿ ಬಾಡಿಗೆ ರೂಂ ನಲ್ಲಿದ್ದುಕೊಂಡು ಕಳೆದ ನಾಲ್ಕು ತಿಂಗಳಿಂದ ಕೆಲಸ ಮಾಡುತ್ತಿದ್ದರು.

ಶನಿವಾರ(ಮೇ 16) ರಾತ್ರಿ ಕೆಲಸ ಮುಗಿಸಿಕೊಂಡು ದೇವೇಗೌಡ ವೃತ್ತದ ಬಳಿ ಊಟ ಮಾಡಿಕೊಂಡು ತಡ ರಾತ್ರಿ 12.30ರ ವೇಳೆಯಲ್ಲಿ ಬೈಕ್‌ನಲ್ಲಿ ರೂಂಗೆ ವಾಪಸ್ಸಾಗುವಾಗ ಎಟಿಎಂಇ ಕಾಲೇಜು ಬಳಿ ಎದುರಿನಿಂದ ವೇಗವಾಗಿ ಬಂದ ಕಾರು ಡಿಕ್ಕಿ ಹೊಡೆದಿದೆ. ಪರಿಣಾಮ ಬೈಕ್ ಓಡಿಸುತ್ತಿದ್ದ ಮಂಜು ಹಾಗೂ ಹಿಂಬದಿಯಲ್ಲಿ ಕುಳಿತಿದ್ದ ವಿಕಾಸ್ ನೆಲಕ್ಕುರುಳಿದ್ದಾರೆ. ಘಟನೆಯಲ್ಲಿ ತಲೆಗೆ ತೀವ್ರ ಪೆಟ್ಟಾಗಿದ್ದ ಮಂಜು ಸ್ಥಳದಲ್ಲೇ ಮೃತಪಟ್ಟಿದ್ದು, ವಿಕಾಸ್ ತೀವ್ರವಾಗಿ ಗಾಯಗೊಂಡಿದ್ದಾರೆ. ಈ ಸಂಬಂಧ ಗಾಯಾಳು ವಿಕಾಸ್ ಆಸ್ಪತ್ರೆಯಲ್ಲಿ ನೀಡಿದ ಹೇಳಿಕೆಯಂತೆ ಪ್ರಕರಣ ದಾಖಲಿಸಿಕೊಂಡಿರುವ ವರುಣ ಠಾಣೆ ಪೊಲೀಸರು, ಅಪಘಾತವೆಸಗಿದ ಕಾರು ಪತ್ತೆಗೆ ಕ್ರಮ ವಹಿಸಿದ್ದಾರೆ.

ಪಡಿತರ ಅಕ್ಕಿ ಸಾಗಿಸುತ್ತಿದ್ದ ನಾಲ್ವರು ವಶಕ್ಕೆ; 11 ಕ್ವಿಂಟಾಲ್ ಅಕ್ಕಿ ಜಪ್ತಿ

ಮೈಸೂರು, ಮೇ 18– ಮೈಸೂರಿನಲ್ಲಿ ಸಾರ್ವಜನಿಕರಿಂದ ಅಕ್ರಮವಾಗಿ ಪಡಿತರ ಅಕ್ಕಿ ಖರೀದಿಸಿ, ಸಾಗಿಸುತ್ತಿದ್ದ ನಾಲ್ವರನ್ನು ವಶಕ್ಕೆ ಪಡೆಯಲಾಗಿದೆ.

ಆಹಾರ ಇಲಾಖೆ ಹಾಗೂ ಪೊಲೀಸ್ ಜಂಟಿ ಕಾರ್ಯಾಚರಣೆಯಲ್ಲಿ ಭಾನುವಾರ ಮೈಸೂರಿನ ಬಿಎಂಶ್ರೀ ನಗರದ ನಿವಾಸಿ ಫಯಾಜ್ ಪಾಷಾ(34), ಸಾತಗಳ್ಳಿಯ ಸಿದ್ದಿಕ್ ಪಾಷ(38) ಹಾಗೂ ಕಲ್ಯಾಣಗಿರಿಯ ಮುಬಾರಕ್ ಪಾಷಾ(24)ನನ್ನು ವಶಕ್ಕೆ ಪಡೆದು, ಇವರು ಪ್ಯಾಸೆಂಜರ್ ಆಟೋದಲ್ಲಿ ಸಾಗಿಸುತ್ತಿದ್ದ 11.43 ಕ್ವಿಂಟಾಲ್ ಅಕ್ಕಿಯನ್ನು ಜಪ್ತಿ ಮಾಡಲಾಗಿದೆ. ಪಡಿತರ ಅಕ್ಕಿಯನ್ನು ಆಟೋದಲ್ಲಿ ಸಾಗಿಸುತ್ತಿರುವ ಬಗ್ಗೆ ಖಚಿತ ಮಾಹಿತಿ ದೊರೆತ ಹಿನ್ನೆಲೆಯಲ್ಲಿ ಮೈಸೂರು ತಾಲೂಕು ಕಚೇರಿಯ ಆಹಾರ ನಿರೀಕ್ಷಕ ಸಿ.ಎ.ಮಂಜುನಾಥ್, ಮೈಸೂರು ದಕ್ಷಿಣ ಪೊಲೀಸ್ ಠಾಣೆಯ ಸಬ್ ಇನ್ಸ್‌ಪೆಕ್ಟರ್ ಶಾಂತಲಿಂಗಯ್ಯ, ರಮ್ಮನಹಳ್ಳಿ ಉಪಠಾಣೆ ಸಿಬ್ಬಂದಿ ಇಮ್ರಾನುದ್ದೀನ್ ಹಾಗೂ ರಾಘವೇಂದ್ರ ಭುಗತಗಳ್ಳಿ ಗೇಟ್ ಬಳಿ ಹಂಚ್ಯಾ ಗ್ರಾಮದ ಕಡೆಯಿಂದ ಬರುತ್ತಿದ್ದ ಆಟೋ ತಡೆದು ಪರಿಶೀಲಿಸಿದಾಗ 19 ಚೀಲ ಪಡಿತರ ಅಕ್ಕಿ ಪತ್ತೆಯಾಗಿದೆ. ಈ ಬಗ್ಗೆ ಆಟೋದಲ್ಲಿದ್ದ ಮೂವರನ್ನು ವಿಚಾರಿಸಿದಾಗ ಬೆಲವತ್ತ ಗ್ರಾಮದಲ್ಲಿ ಜನರಿಂದ ಅಕ್ಕಿ ಖರೀದಿಸಿ ಬನ್ನೂರಿಗೆ ಸಾಗಿಸುತ್ತಿದ್ದಾಗಿ ತಿಳಿಸಿದ್ದಾರೆ. ಈ ಸಂಬಂಧ ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಿಸಿಕೊಂಡು, ಮುಂದಿನ ಕ್ರಮ ಕೈಗೊಳ್ಳಲಾಗಿದೆ.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಶಿಥಿಲಾವಸ್ಥೆಯ ಡಾ.ರಾಧಾಕೃಷ್ಣನ್ ಬಂಗಲೆ ನವೀಕರಣಕ್ಕೆ ಮೈಸೂರು ವಿವಿ ನಿರ್ಧಾರ

ಪುರಾತತ್ವ ಇಲಾಖೆ ಆಯುಕ್ತರು, ಇಂಜಿನಿಯರ್‌ಗಳು, ಕುಲಪತಿ, ಕುಲಸಚಿವರಿಂದ ಸ್ಥಳ ಪರಿಶೀಲನೆ



ಶಿಥಿಲಾವಸ್ಥೆಯ ಮೈಸೂರಿನ ಸರಸ್ವತಿಪುರಂನ ಡಾ.ಎಸ್.ರಾಧಾಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರ ಕಟ್ಟಡವನ್ನು ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಪರಿಶೀಲನೆ ನಡೆಸಿದರು.

ಮೈಸೂರು, ಮೇ19(ಬಿಎಲ್‌ಯು)– ಶಿಥಿಲಾವಸ್ಥೆ ತಲುಪಿರುವ ಮೈಸೂರಿನ ಸರಸ್ವತಿಪುರಂನಲ್ಲಿರುವ ಡಾ.ಎಸ್.ರಾಧಾಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರದ ಕಟ್ಟಡವನ್ನು ನವೀಕರಣ ಮಾಡಲು ಮೈಸೂರು ವಿಶ್ವವಿದ್ಯಾನಿಲಯ ನಿರ್ಧರಿಸಿದೆ.

'ಮೈಸೂರು ಮಿತ್ರ' ವರದಿ ಫಲಶೃತಿ

'ಮೈಸೂರು ಮಿತ್ರ'ನ ಭಾನುವಾರದ ಸಂಚಿಕೆಯಲ್ಲಿ 'ಮಾಜಿ ರಾಷ್ಟ್ರಪತಿ ಡಾ.ರಾಧಾಕೃಷ್ಣನ್ ನೆಲೆಸಿದ್ದ ಬಂಗಲೆ ಭಾಗ ಕುಸಿತ' ಶೀರ್ಷಿಕೆಯಡಿ ಪ್ರಕಟಗೊಂಡ ವರದಿಯನ್ನು ಗಂಭೀರವಾಗಿ ಪರಿಗಣಿಸಿ ರುವ ವಿಶ್ವವಿದ್ಯಾನಿಲಯದ ಆಡಳಿತ, ಬಂಗಲೆಯನ್ನು ನವೀಕರಿಸಿ, ಸಂರಕ್ಷಣೆ ಮಾಡುವ ತೀರ್ಮಾನ ಕೈಗೊಂಡಿದೆ.

ಈ ಸಂಬಂಧ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವೆ ಎಂ.ಕೆ. ಸವಿತಾ ಹಾಗೂ ಇತರೆ ಅಧಿಕಾರಿಗಳ ಜೊತೆ ಇಂದು ಡಾ.ರಾಧಾಕೃಷ್ಣನ್ ಅವರ ಬಂಗಲೆಗೆ ಖುದ್ದು ಭೇಟಿ ನೀಡಿ ಪರಿಶೀಲನೆ ನಡೆಸಿದರು.

ತರುವಾಯ ಈ ಬಗ್ಗೆ 'ಮೈಸೂರು ಮಿತ್ರ'ಗೆ ಪ್ರತಿಕ್ರಿಯೆ ನೀಡಿದ ಸವಿತಾ, ಬಂಗಲೆಯ ಎಲ್ಲಾ ಕೊಠಡಿಯನ್ನು ಪರಿಶೀಲನೆ ಮಾಡಿದ್ದೇವೆ. ಅಲ್ಲದೆ, ಕಟ್ಟಡ ಮೇಲ್ಭಾಗ ಸಹ ವೀಕ್ಷಣೆ ಮಾಡಿದೆ. ಒಂದು ಭಾಗದಲ್ಲಿ ಗಿಡಗಳು ಬೆಳೆದು ಹಾನಿಯಾಗಿದೆ. ಕಟ್ಟಡದ ಉಳಿದ ಭಾಗ ಸುಭದ್ರವಾಗಿದೆ ಎಂದು ತಿಳಿಸಿದರು.

ಹಾನಿಯಾಗಿರುವ ಭಾಗವನ್ನು ರಿಪೇರಿ ಮಾಡಿ ನವೀಕರಣ ಮಾಡಲು ನಿರ್ಧಾರ ಮಾಡಲಾಗಿದೆ. ಈ ಸಂಬಂಧ ಪುರಾತತ್ವ ವಸ್ತು ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆಯ ಆಯುಕ್ತ ದೇವರಾಜು ಅವರ ಜೊತೆ ಸಮಾಲೋಚನೆ ಮಾಡಿದ್ದೇನೆ. ನಾಳೆ ಇಂಜಿನಿಯರ್‌ಗಳ ತಂಡದೊಂದಿಗೆ ಭೇಟಿ ನೀಡುವುದಾಗಿ ತಿಳಿಸಿದ್ದಾರೆ. ಆ ವೇಳೆ ನಾನು ಹಾಗೂ ಕುಲಪತಿಗಳು ಕೂಡ ಹಾಜರಿದ್ದು, ಪರಿಶೀಲನೆ ನಡೆಸುತ್ತೇವೆ. ಇದು ಪಾರಂಪರಿಕ ಕಟ್ಟಡವಾದ ಹಿನ್ನೆಲೆಯಲ್ಲಿ ತಜ್ಞ ಇಂಜಿನಿಯರ್‌ಗಳಿಂದ ನವೀಕರಣ ಯೋಜನೆ ರೂಪಿಸಲಾಗುವುದು. ತರುವಾಯ ಅಂದಾಜು ಸಿದ್ಧಪಡಿಸಲಾಗುವುದು. ಸಣ್ಣ ಪ್ರಮಾಣದ ವೆಚ್ಚವಾದರೆ ನಮ್ಮ ಹಂತದಲ್ಲೆ ನವೀಕರಣ ಮಾಡಲಾಗುವುದು. ಒಂದು ವೇಳೆ ಅಧಿಕ ಹಣ ಖರ್ಚಾಗುತ್ತದೆ ಎಂದಾದರೆ ಸರ್ಕಾರದಿಂದ ಅನುದಾನ ಪಡೆದು ನವೀಕರಣ ಮಾಡಲು ದೇವರಾಜ್ ಅವರ ಜೊತೆ ಚರ್ಚೆ ಮಾಡಿದ್ದೇನೆ ಎಂದು ಸವಿತಾ ಮಾಹಿತಿ ನೀಡಿದರು.

ಬೆಂಗಳೂರಿನ ಪಿಇಎಸ್ ಶಿಕ್ಷಣ ಸಂಸ್ಥೆಯ ಸಂಸ್ಥಾಪಕ ಅಧ್ಯಕ್ಷ ಪ್ರೊ.ದೊರೆಸ್ವಾಮಿ ಅವರು ಈಗಾಗಲೇ ಈ ಕಟ್ಟಡವನ್ನು ನವೀಕರಣ ಮಾಡಿದ್ದರು. ಹಾನಿಯಾಗಿರುವ ಭಾಗ ಹಾಗೂ ಮತ್ತೆ ಕೆಲವು ಭಾಗವನ್ನು ಪುನಃ ನವೀಕರಣ ಮಾಡುವುದಾಗಿ ಪ್ರೊ.ದೊರೆಸ್ವಾಮಿ ಅವರ ಪುತ್ರರೂ ಆದ ಪಿಇಎಸ್ ಶಿಕ್ಷಣ ಸಂಸ್ಥೆಗಳ ಹಾಲಿ ಅಧ್ಯಕ್ಷರು ಭರವಸೆ ನೀಡಿದ್ದರು. ತರುವಾಯ ಅವರಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ ಎಂದು ತಿಳಿಸಿದರು.

ಶೀಘ್ರದಲ್ಲೇ ಪ್ರೊ.ದೊರೆಸ್ವಾಮಿ ಅವರ ಮಗನನ್ನು ಭೇಟಿ ಮಾಡಿ ನವೀಕರಣ ಮಾಡಿಸುವಂತೆ ಮನವಿ ಮಾಡುತ್ತೇನೆ. ಒಟ್ಟಾರೆ ದಾನಿಗಳಿಂದ ಅಥವಾ ವಿಶ್ವವಿದ್ಯಾನಿಲಯದಿಂದ ಇಲ್ಲವೆ ಪುರಾತತ್ವ ಇಲಾಖೆಯಿಂದ ಡಾ.ಎಸ್.ರಾಧಾಕೃಷ್ಣನ್ ತತ್ವಶಾಸ್ತ್ರ ಮತ್ತು ಭಾರತೀಯ ಸಂಸ್ಕೃತಿ ಕೇಂದ್ರದ ಕಟ್ಟಡವನ್ನು ನವೀಕರಣ ಮಾಡಿ, ಅದನ್ನು ಸಂರಕ್ಷಣೆ ಮಾಡಲಾಗುವುದು. ಯಾವುದೇ ಕಾರಣಕ್ಕೂ ಅದನ್ನು ಹಾಳಾಗಲು ಬಿಡುವುದಿಲ್ಲ ಎಂದು ಸವಿತಾ ಸ್ಪಷ್ಟಪಡಿಸಿದರು.

ರಂಗಶಿಕ್ಷಣ ತರಬೇತಿಗೆ ಅರ್ಜಿ ಆಹ್ವಾನ

ಮೈಸೂರು: ರಂಗಾಯಣದ ವತಿಯಿಂದ 2026–27ನೇ ಸಾಲಿನ ರಂಗಶಿಕ್ಷಣದಲ್ಲಿ ಹತ್ತು ತಿಂಗಳ ಡಿಪ್ಲೊಮಾ ಕೋರ್ಸ್‌ನ ತರಬೇತಿಗಾಗಿ ಅರ್ಹ ಅಭ್ಯರ್ಥಿಗಳಿಂದ ಅರ್ಜಿಯನ್ನು ಆಹ್ವಾನಿಸಲಾಗಿದೆ.

ರಂಗ ತರಬೇತಿ ಕೋರ್ಸ್‌ಗೆ ಸೇರ ಬಯಸುವ ವಿದ್ಯಾರ್ಥಿಗಳು ರಂಗಭೂಮಿಯ ಪ್ರಾಥಮಿಕ ಅನುಭವ ಹೊಂದಿರಬೇಕು. ಕನಿಷ್ಠ ದ್ವಿತೀಯ ಪಿಯುಸಿ (10+2) ಅಥವಾ ತತ್ಸಮಾನ ಪರೀಕ್ಷೆ ತೇರ್ಗಡೆ ಹೊಂದಿರಬೇಕು. ವಯೋಮಿತಿ ಅರ್ಜಿ ಸಲ್ಲಿಸಲು ನಿಗದಿಗೊಳಿಸಿದ ಕಡೆಯ ದಿನಾಂಕಕ್ಕೆ 18 ವರ್ಷ ತುಂಬಿದ ಮತ್ತು 28 ವರ್ಷ ತುಂಬಿರದ ಅಭ್ಯರ್ಥಿಗಳಾಗಿರಬೇಕು. ಆಯ್ಕೆಯಾದ ವಿದ್ಯಾರ್ಥಿಗಳಿಗೆ ಕೋರ್ಸಿನ ಒಂದು ವರ್ಷದ ವ್ಯಾಸಂಗ ಅವಧಿಯಲ್ಲಿ ಊಟ, ವಸತಿ ಹಾಗೂ ಪಠ್ಯ ಸಾಮಗ್ರಿಗಳ ವೆಚ್ಚಗಳನ್ನು ವಿದ್ಯಾರ್ಥಿವೇತನದಲ್ಲಿ ಭರಿಸಲಾಗುತ್ತದೆ. ಆಸಕ್ತರು ಜೂ.20ರ ಸಂಜೆ 5.30 ರೊಳಗೆ http://rangayanamysore.karnataka.gov.in ಮೂಲಕ ಅಥವಾ ರಂಗಾಯಣದ ಕಚೇರಿಯಲ್ಲಿ ಅರ್ಜಿ ಪಡೆದು ಅಗತ್ಯ ದಾಖಲೆಗಳೊಂದಿಗೆ ಸಲ್ಲಿಸಬಹುದು. ಅರ್ಜಿ ಶುಲ್ಕ ಸಾಮಾನ್ಯ ವರ್ಗ ರೂ.300, ಪ.ಜಾ, ಪ.ವರ್ಗ, ಪ್ರವರ್ಗ–1 ಅಭ್ಯರ್ಥಿಗಳಿಗೆ ರೂ.200ಗಳು ಡಿ.ಡಿ.ಯನ್ನು ಉಪನಿರ್ದೇಶಕರು, ರಂಗಾಯಣ, ಇವರ ಹೆಸರಿನಲ್ಲಿ ಪಡೆದು ರಂಗಾಯಣದ ವಿಳಾಸಕ್ಕೆ ಅಂಚೆ ಮೂಲಕ ಕಳುಹಿಸಬಹುದು. ಮಾಹಿತಿಗೆ ದೂ.ಸಂ: 0821-2512639.

ಯುವಕ ನಾಪತ್ತೆ



ಮೈಸೂರು: ಇಲ್ಲಿನ ಉದಯಗಿರಿ ಪೊಲೀಸ್ ಠಾಣಾ ವ್ಯಾಪ್ತಿಯ ನಿವಾಸಿ ಸಮೀರ್ ಅಹಮ್ಮದ್ ಮೇ 5ರಂದು ಕೆಲಸಕ್ಕೆಂದು ಮನೆಯಿಂದ ಹೊರ ಹೋದವರು ನಾಪತ್ತೆಯಾಗಿದ್ದಾರೆ. ನಾಪತ್ತೆಯಾದ ಸಮೀರ್ ಅಹಮ್ಮದ್ ವಯಸ್ಸು 26 ವರ್ಷ, 5.5 ಅಡಿ ಎತ್ತರ, ಕೋಲುಮುಖ, ಸಾಧಾರಣ ಮೈಕಟ್ಟು, ಎಣ್ಣೆಗೆಂಪು ಮೈಬಣ್ಣ ಹೊಂದಿದ್ದು, ಉರ್ದು, ಕನ್ನಡ ಮತ್ತು ಹಿಂದಿ ಮಾತನಾಡುತ್ತಾರೆ. ಕಾಣೆಯಾದ ವೇಳೆ ಬಿಳಿ ಬಣ್ಣದ ತುಂಬುತೋಳಿನ ಶರ್ಟ್, ಗ್ರೇ ಬಣ್ಣದ ಪ್ಯಾಂಟ್ ಧರಿಸಿರುತ್ತಾರೆ. ಇವರ ಬಗ್ಗೆ ಯಾರಿಗಾದರೂ ಸುಳಿವು ಸಿಕ್ಕಲ್ಲಿ ಉದಯಗಿರಿ ಪೊಲೀಸ್ ಠಾಣೆ ದೂ.ಸಂ. 0821-2418309, 2418339 ಮೂಲಕ ಮಾಹಿತಿ ನೀಡುವಂತೆ ಪ್ರಕಟಣೆ ಕೋರಿದೆ.

ವಿವಿಧ ವಸ್ತುಸಂಗ್ರಹಾಲಯಗಳ ವೀಕ್ಷಿಸಿದ ವಿಶೇಷಚೇತನರು

ಮೈಸೂರು, ಮೇ 18(ಎಂಕೆ)–ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಹಾಗೂ ಇಂದಿರಾಗಾಂಧಿ ರಾಷ್ಟ್ರೀಯ ಮಾನವ ಸಂಗ್ರಹಾಲಯದ ವತಿಯಿಂದ ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನಾಚರಣೆ ಅಂಗವಾಗಿ 'ವಸ್ತು ಸಂಗ್ರಹಾಲಯಗಳು ವಿಭಜಿತ ಜಗತ್ತನ್ನು ಒಂದುಗೂಡಿಸುತ್ತವೆ' ಶೀರ್ಷಿಕೆಯಡಿ ವಿಶೇಷಚೇತನರಿಗೆ ಮೈಸೂರಿನಲ್ಲಿರುವ ವಿವಿಧ ವಸ್ತು ಸಂಗ್ರಹಾಲಯಗಳ ವೀಕ್ಷಣೆ (ಮ್ಯೂಸಿಯಮ್ಸ್ ಆನ್ ವ್ಹೀಲ್ಸ್) ಮಾಡಿಸಲಾಯಿತು.

ಮೈಸೂರಿನ ಇರ್ವಿನ್ ರಸ್ತೆಯಲ್ಲಿರುವ ವೆಲ್ಲಿಂಗ್ಟನ್ ವಸ್ತು ಸಂಗ್ರಹಾಲಯ ಮತ್ತು ಕಲಾ ಗ್ಯಾಲರಿ ವೀಕ್ಷಣೆ ಮಾಡಿದ 50ಕ್ಕೂ ಹೆಚ್ಚು ಮಂದಿ ವಿಶೇಷಚೇತನರು, ಮೈಸೂರು–ಬೆಂಗಳೂರು ರಸ್ತೆಯಲ್ಲಿರುವ ವಿಂಟೇಜ್ ಕಾರ್ ಮ್ಯೂಸಿಯಂ ವೀಕ್ಷಿಸಿ, ನಂತರ ಮೈಸೂರಿನ ಪ್ರಾಕೃತಿಕ ವಸ್ತು ಸಂಗ್ರಹಾಲಯ ಹಾಗೂ ರೈಲ್ವೆ ಮ್ಯೂಸಿಯಂ ವೀಕ್ಷಣೆ ಮಾಡಿ, ವಾಪಸ್ ವೆಲ್ಲಿಂಗ್ಟನ್ ವಸ್ತು ಸಂಗ್ರಹಾಲಯ ತಲುಪಿದರು.

ಅತ್ಯಾಕರ್ಷಕ ವಿಂಟೇಜ್ ಕಾರುಗಳ ಜೊತೆಗೆ ಪ್ರಾಚೀನ ಕಾಲದಲ್ಲಿ ಬಳಸಲಾದ ನಾಣ್ಯಗಳು, ಐತಿಹಾಸಿಕ ಛಾಯಾಚಿತ್ರಗಳು, ವಿಜ್ಞಾನ ಮತ್ತು ತಂತ್ರಜ್ಞಾನದ ಆವಿಷ್ಕಾರಗಳು ಮತ್ತು ದಕ್ಷಿಣ ಭಾರತದ ಪ್ರಖ್ಯಾತ ರಾಜ ವಂಶಸ್ಥರಾದ ಶಾತವಾಹನರು, ಬಾದಾಮಿಯ ಚಾಲುಕ್ಯರು, ರಾಷ್ಟ್ರಕೂಟರು, ಕಲ್ಯಾಣ ಚಾಲುಕ್ಯರು, ಕಳಚೂರಿಗಳು, ಬಹಮನಿಗಳು, ಆದಿಲ್ ಷಾಹಿಗಳು ಮತ್ತು ನಿಜಾಮರ ಆಳ್ವಿಕೆ ಕಾಲದ ಕಲಾತ್ಮಕ ವಸ್ತುಗಳು, ಸ್ಮಾರಕಗಳು ವಿಶೇಷಚೇತನರ ಗಮನ ಸೆಳೆದವು.



ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನಾಚರಣೆ ಅಂಗವಾಗಿ ವಿಶೇಷಚೇತನರಿಗೆ ಮೈಸೂರಿನ ವಿವಿಧ ವಸ್ತು ಸಂಗ್ರಹಾಲಯಗಳ ವೀಕ್ಷಣೆ(ಮ್ಯೂಸಿಯಮ್ಸ್ ಆನ್ ವ್ಹೀಲ್ಸ್)ಗೆ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎಂ.ದೇವರಾಜು ಚಾಲನೆ ನೀಡಿದರು.

ಇದಕ್ಕೂ ಮುನ್ನ ಮ್ಯೂಸಿಯಮ್ಸ್ ಆನ್ ವ್ಹೀಲ್ಸ್ ಕಾರ್ಯಕ್ರಮಕ್ಕೆ ಚಾಲನೆ ನೀಡಿದ ಪುರಾತತ್ವ, ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಆಯುಕ್ತ ಎಂ.ದೇವರಾಜು ಮಾತನಾಡಿ, ಐತಿಹಾಸಿಕ ಅವಶೇಷಗಳು, ಪಳಯುಳಿಕೆಗಳನ್ನು ವ್ಯವಸ್ಥಿತವಾಗಿ ಸಂರಕ್ಷಣೆ ಮಾಡಬೇಕಿರುವುದು ಅತ್ಯಂತ ಅವಶ್ಯ. ಈ ನಿಟ್ಟಿನಲ್ಲಿ ಅವಶೇಷಗಳನ್ನು ವ್ಯವಸ್ಥಿತವಾಗಿ ಸಂರಕ್ಷಿಸುವಲ್ಲಿ ವಸ್ತು ಸಂಗ್ರಹಾಲಯಗಳು ವರದಾನವಾಗಿವೆ ಎಂದರು.

ಯುರೋಪಿಯನ್ನರು ವಸ್ತು ಸಂಗ್ರಹಾಲಯದ ಪರಿಕಲ್ಪನೆ ಮೂಡಿಸುವ ಜೊತೆಗೆ, ಅವುಗಳನ್ನು ಸ್ಥಾಪಿಸುವ ಮೂಲಕ ಇತಿಹಾಸವನ್ನು ಸಂರಕ್ಷಿಸುವ ಮಹತ್ವದ ಕೆಲಸವನ್ನು ಮಾಡಿದರು. ಯುವ ಜನರು ಸಹ ಈ ಐತಿಹಾಸಿಕ ಪಳಯುಳಿಕೆಗಳನ್ನು ಸಂರಕ್ಷಿಸುವ ಕಾರ್ಯದಲ್ಲಿ ತೊಡಗಿಸಿಕೊಳ್ಳಬೇಕು ಎಂದರು.


ವೆಲ್ಲಿಂಗ್ಟನ್ ವಸ್ತು ಸಂಗ್ರಹಾಲಯದ ಉಸ್ತುವಾರಿ ಅಧಿಕಾರಿ ಅಶೋಕ್ ವರ್ಧನ್ ಮಾತನಾಡಿ, ಎಲ್ಲಿಯಾದರೂ ಐತಿಹಾಸಿಕ ದಾಖಲೆಗಳು, ಅವಶೇಷಗಳು ಕಣ್ಣಿಗೆ ಬಿದ್ದರೆ ಅದನ್ನು ನಿರ್ಲಕ್ಷಿಸಬಾರದು, ಕೂಡಲೇ ಪುರಾತತ್ವ ಇಲಾಖೆಯ ಅಧಿಕಾರಿಗಳನ್ನು ಸಂಪರ್ಕಿಸಬೇಕು. ಈ ಮೂಲಕ ದೇಶದ ಇತಿಹಾಸದ ಬಗ್ಗೆ ಹೊಸ ಬೆಳಕು ಚೆಲ್ಲಬಹುದು. ಆದ್ದರಿಂದ ಐತಿಹಾಸಿಕ ದಾಖಲೆಯ ಬಗ್ಗೆ ಯಾವತ್ತಿಗೂ ನಿರ್ಲಕ್ಷ್ಯ ವಹಿಸಬಾರದು ಎಂದು ಸಲಹೆ ನೀಡಿದರು.

ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನಾಚರಣೆ ಹಿನ್ನೆಲೆ ವಿಶೇಷ ವ್ಯವಸ್ಥೆ

ವಸ್ತು ಸಂಗ್ರಹಾಲಯಗಳು ಆಯಾ ದೇಶಗಳ ಸಂಸ್ಕೃತಿ, ಇತಿಹಾಸವನ್ನು ತಿಳಿಸುವ ಮಹತ್ವದ ಕೊಂಡಿಗಳಾಗಿವೆ. ಇತಿಹಾಸ, ಸಂಸ್ಕೃತಿಯನ್ನು ಪರಿಚಯಿಸುವ ಕೆಲಸ ಮಾಡುತ್ತಿರುವ ವಸ್ತು ಸಂಗ್ರಹಾಲಯಗಳ ಮಹತ್ವವನ್ನು ತಿಳಿಯಪಡಿಸುವ ದೃಷ್ಟಿಯಿಂದ ಮೇ 18 ರಂದು ವಿಶ್ವಸಂಸ್ಥೆ ವಿಶ್ವದಾದ್ಯಂತ ವಸ್ತು ಸಂಗ್ರಹಾಲಯಗಳ ದಿನಾಚರಣೆ ಆಚರಣೆ ಮಾಡುತ್ತಿದ್ದು, ಇದರ ಬಗ್ಗೆ ಹೆಚ್ಚಿನ ಮಾಹಿತಿಯನ್ನು ತಿಳಿದುಕೊಳ್ಳಬೇಕು ಎಂದು ಹೇಳಿದರು.

ಇದೇ ವೇಳೆ ವಸ್ತು ಸಂಗ್ರಹಾಲಯದಲ್ಲಿನ ಕಲಾತ್ಮಕ ವಸ್ತುಗಳು ಮತ್ತು ಸ್ಮಾರಕಗಳ ಬಗ್ಗೆ ಸ್ಕ್ಯಾನ್ ಮಾಡಿ ಮಾಹಿತಿ ಪಡೆಯುವ ಎಆರ್–ವಿಆರ್ ಕಾರ್ಡ್ ಮತ್ತು ಟಿ–ಶರ್ಟ್‌ಗಳನ್ನು ವಿತರಣೆ ಮಾಡಲಾಯಿತು. ಜಿಲ್ಲಾ ಅಂಗವಿಕಲ ಕಲ್ಯಾಣ ಅಧಿಕಾರಿ ರಾಘವೇಂದ್ರ, ಪುರಾತತ್ವ ಸಂಗ್ರಹಾಲಯಗಳು ಮತ್ತು ಪರಂಪರೆ ಇಲಾಖೆ ಉಪನಿರ್ದೇಶಕಿ ಡಾ.ಮಂಜುಳಾ, ಸಹಾಯಕ ನಿರ್ದೇಶಕ ಎಂ.ಸುನಿಲ್‌ಕುಮಾರ್, ಸಂರಕ್ಷಣಾ ಇಂಜಿನಿಯರ್ ಟಿ.ತಾರಕೇಶ್ ಮತ್ತಿತರರಿದ್ದರು.

ಮೈಸೂರು ಜೆಡಿಎಸ್ ಕಚೇರಿಯಲ್ಲಿ ಮಾಜಿ ಪ್ರಧಾನಮಂತ್ರಿ ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬ...





ಮಾಜಿ ಪ್ರಧಾನಮಂತ್ರಿ, ಜೆಡಿಎಸ್ ವರಿಷ್ಠರಾದ ಹೆಚ್.ಡಿ.ದೇವೇಗೌಡರ 93ನೇ ಹುಟ್ಟುಹಬ್ಬವನ್ನು ಮೈಸೂರು ನಗರ(ಜಿಲ್ಲೆ) ಜೆಡಿಎಸ್ ಕಚೇರಿಯಲ್ಲಿ ಮುಖಂಡರು ಕೇಕ್ ಕತ್ತರಿಸುವ ಮೂಲಕ ಆಚರಿಸಿದರು. ಬಳಿಕ ಕಚೇರಿಯ ಮುಂಭಾಗ ಜೆಡಿಎಸ್ ರಾಜ್ಯ ರಾಜಕೀಯ ವ್ಯವಹಾರಗಳ ಸಮಿತಿಯ ಸದಸ್ಯರಾದ ಮಾಜಿ ಸಚಿವ ಸಾ.ರಾ.ಮಹೇಶ್ ಸಿಹಿ ವಿತರಿಸಿದರು. ಈ ಸಂದರ್ಭದಲ್ಲಿ ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ, ಪಕ್ಷದ ನಗರ ಅಧ್ಯಕ್ಷ ಎಸ್‌ಬಿಎಂ ಮಂಜು, ಮಾಜಿ ಮೇಯರ್ ಆರ್.ಲಿಂಗಪ್ಪ, ರಾಜ್ಯ ವಕ್ತಾರ ಎನ್.ಆರ್.ರವಿಚಂದ್ರೇಗೌಡ, ಪಾಲಿಕೆ ಮಾಜಿ ಸದಸ್ಯರಾದ ಪ್ರೇಮಾ ಶಂಕರೇಗೌಡ, ರಮೇಶ ರಮಣಿ, ಭಾಗ್ಯ ಮಾದೇಶ್, ಮುಖಂಡರಾದ ರಮೇಶ್, ಕೆ.ಟಿ.ಚೆಲುವೇಗೌಡ, ಕೃಷ್ಣ, ರವಿ, ವರುಣ ಪ್ರಶಾಂತ, ರಾಮು, ಆನಂದ ಮತ್ತಿತರರು ಉಪಸ್ಥಿತರಿದ್ದರು.

ಹೆಚ್.ಡಿ.ದೇವೇಗೌಡರಿಗೆ ಭಾರತ ರತ್ನ ನೀಡಲು ಮನವಿ



ಮೈಸೂರಿನ ಅಗ್ರಹಾರದ 101 ಗಣಪತಿ ದೇವಸ್ಥಾನದಲ್ಲಿ ಅರಿವು ಸಂಸ್ಥೆಯಿಂದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬದ ಅಂಗವಾಗಿ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ ನಂತರ ಸಿಹಿ ವಿತರಿಸಲಾಯಿತು.

ಮೈಸೂರು:ಅಗ್ರಹಾರದ 101 ಗಣಪತಿ ದೇವಸ್ಥಾನದಲ್ಲಿ ಅರಿವು ಸಂಸ್ಥೆ ವತಿಯಿಂದ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬದ ಅಂಗವಾಗಿ ಅವರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ, ಸಿಹಿ ವಿತರಿಸಲಾಯಿತು.

ಈ ವೇಳೆ ಮಾಜಿ ಮೇಯರ್ ಸಂದೇಶ್ ಸ್ವಾಮಿ, ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ವಾಣಿಜ್ಯ ಮತ್ತು ಕೈಗಾರಿಕೆ ಸಂಸ್ಥೆಯ ಅಧ್ಯಕ್ಷ ಕೆ.ಬಿ. ಲಿಂಗರಾಜು, ಜೀವಧಾರ ರಕ್ತ ನಿಧಿ ಕೇಂದ್ರದ ನಿರ್ದೇಶಕ ಗಿರೀಶ್, ಪಾಲಿಕಾ ಮಾಜಿ ಸದಸ್ಯ ಜಗದೀಶ್, ಅರಿವು ಸಂಸ್ಥೆಯ ಅಧ್ಯಕ್ಷ ಶ್ರೀಕಾಂತ್ ಕಶ್ಯಪ್, ಜೆಡಿಎಸ್ ಮುಖಂಡರಾದ ಗಗನ್ ಗೌಡ, ಪ್ರಶಾಂತ್, ಯದುನಂದನ್, ರಾಮು, ನಾಗೇಶ್ ಯಾದವ್, ದೂರ ರಾಜಣ್ಣ, ಚಕ್ರಪಾಣಿ, ಗೋವಿಂದ, ದಯಾನಂದ ನಾಯಕ್ ಹಾಗೂ ಇನ್ನಿತರರು ಹಾಜರಿದ್ದರು. ಈ ವೇಳೆ ಸಂದೇಶ್ ಸ್ವಾಮಿ, ದೇವೇಗೌಡರಿಗೆ ಭಾರತರತ್ನ ನೀಡಬೇಕೆಂದು ಮನವಿ ಮಾಡಿದರು.



ಮಾಜಿ ಪ್ರಧಾನಮಂತ್ರಿ ಹಾಗೂ ಜೆಡಿಎಸ್ ವರಿಷ್ಠರಾದ ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬದ ಅಂಗವಾಗಿ ಜೆಡಿಎಸ್ ರಾಜ್ಯ ರಾಜಕೀಯ ವ್ಯವಹಾರಗಳ ಸಮಿತಿಯ ಸದಸ್ಯರೂ ಆದ ಮಾಜಿ ಸಚಿವ ಸಾ.ರಾ.ಮಹೇಶ್, ವಿಧಾನಪರಿಷತ್ ಸದಸ್ಯ ಸಿ.ಎನ್.ಮಂಜೇಗೌಡ ಆತ್ಮೀಯವಾಗಿ ಅಭಿನಂದಿಸಿ, ಶುಭಾಶಯ ಕೋರುವುದರೊಂದಿಗೆ ಆಶೀರ್ವಾದ ಪಡೆದರು.

ವ್ಯಕ್ತಿ ನಾಪತ್ತೆ

ಮೈಸೂರು, ಮೇ 18– ಶರತ್ ಎಂ.ಎಂ ಎಂಬ ವ್ಯಕ್ತಿ ಕಾಣೆಯಾಗಿರುವುದಾಗಿ ಅವರ ಪಿರ್ಯಾದಿ ಮಂಜಪ್ಪ ವಿ.ವಿ ಪುರಂ ಪೊಲೀಸ್ ಠಾಣೆಯಲ್ಲಿ ದೂರು ನೀಡಿದ ಮೇರೆಗೆ ಪ್ರಕರಣ ದಾಖಲಾಗಿ ತನಿಖೆಯಲ್ಲಿದೆ.

ಸುಮಾರು 19 ವರ್ಷ, 149 ಸೆಂಮೀ ಎತ್ತರ, ಸಾಧಾರಣ ಮೈ ಕಟ್ಟು, ಎಣ್ಣೆಗೆಂಪು ಮೈ ಬಣ್ಣ, ಕೋಲು ಮುಖ, ಕಪ್ಪು ಕೂದಲು, ತಿಳಿ ನೀಲಿ ಬಣ್ಣದ ಟೀ ಶರ್ಟ್, ಕಪ್ಪು ಬಣ್ಣದ ನಿಕ್ಕರ್ ಧರಿಸಿರುತ್ತಾರೆ.

ಕಾಣೆಯಾಗಿರುವ ವ್ಯಕ್ತಿಯ ಬಗ್ಗೆ ಮಾಹಿತಿ ಕಂಡುಬಂದಲ್ಲಿ ದೂ.ಸಂಖ್ಯೆ: 0821-2418314, 9480802238 ನ್ನು ಸಂಪರ್ಕಿಸಬಹುದೆಂದು ವಿ.ವಿ.ಪುರಂ ಪೊಲೀಸ್ ಠಾಣೆಯ ಪೊಲೀಸ್ ಇನ್ಸ್‌ಪೆಕ್ಟರ್ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದೇಶ - ವಿದೇಶ

ಹರಿದ್ವಾರದಲ್ಲಿ ಬಾಂಬ್ ಸ್ಫೋಟದ ಬೆದರಿಕೆ ಹಾಕಿದ್ದವ ಅಂದರ್



ಹರಿದ್ವಾರ: ಉತ್ತರಾಖಂಡದ ಪವಿತ್ರ ನಗರ ಹರಿದ್ವಾರದ ಹರ್ ಕಿ ಪೌರಿ ಘಾಟ್‌ನಲ್ಲಿ ಬಾಂಬ್ ಸ್ಫೋಟಿಸುವುದಾಗಿ ದೂರವಾಣಿ ಬೆದರಿಕೆ ಬಂದಿದ್ದ ಕಾರಣ ಕೆಲಕಾಲ ಆತಂಕದ ವಾತಾವರಣ ಸೃಷ್ಟಿಯಾಗಿತ್ತು. ಕೂಡಲೇ ಕಾರ್ಯಪ್ರವೃತ್ತರಾದ ಪೊಲೀಸರು ಬೆದರಿಕೆ ಕರೆ ಮಾಡಿದ ವ್ಯಕ್ತಿಯನ್ನು ಪತ್ತೆಹಚ್ಚಿ ಬಂಧಿಸಿದ್ದಾರೆ. ಮದ್ಯಪಾನ ಮಾಡಿದ್ದ ಯುವಕ 112 ತುರ್ತು ಸಂಖ್ಯೆಗೆ ಕರೆ ಮಾಡಿ, ಹರ್ ಕಿ ಪೌರಿ ಸೇರಿದಂತೆ ಇತರ ಸ್ಥಳಗಳಲ್ಲಿ ನಾಲ್ಕು ದಿನಗಳೊಳಗೆ ಬಾಂಬ್ ಸ್ಫೋಟಿಸುವುದಾಗಿ ಬೆದರಿಕೆ ಹಾಕಿದ್ದ. ಈ ಕರೆಯಿಂದಾಗಿ ಪೊಲೀಸ್ ಇಲಾಖೆಯಲ್ಲಿ ಭಾರಿ ಗೊಂದಲ ಉಂಟಾಗಿತ್ತು. ತಕ್ಷಣವೇ ತಂಡಗಳನ್ನು ರಚಿಸಿ ಆರೋಪಿಯ ಪತ್ತೆಹಚ್ಚಿ ಬಂಧಿಸಲಾಯಿತು.

ಬಂಧಿತನನ್ನು ಪೌರಿ ಜಿಲ್ಲೆಯ ಯಮ್‌ಕೇಶ್ವರ್ ನಿವಾಸಿ ಸೋಹನ್ ಸಿಂಗ್ ರಾವತ್(30) ಎಂದು ಗುರುತಿಸಲಾಗಿದೆ. ಕುಡಿದ ಅಮಲಿನಲ್ಲಿ ಬೆದರಿಕೆ ಹಾಕಿದ್ದಾಗಿ ವಿಚಾರಣೆ ವೇಳೆ ತಿಳಿಸಿದ್ದಾನೆ. ಈ ಸಂಬಂಧ ಹರಿದ್ವಾರ ನಗರ ಕೋತ್ವಾಲಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಏರ್‌ಶೋ ವೇಳೆ ಅಮೆರಿಕದ ಎರಡು ಯುದ್ಧ ವಿಮಾನ ಡಿಕ್ಕಿ



ಅಮೆರಿಕಾ: ಇಲ್ಲಿನ ಇಡಾಹೊದಲ್ಲಿ ಮೌಂಟೇನ್ ಹೋಮ್ ಏರ್ ಫೋರ್ಸ್ ಬೇಸ್‌ನಲ್ಲಿ ಭಾನುವಾರ ನಡೆದ ವಾಯು ಪ್ರದರ್ಶನದ ವೇಳೆ ಅಮೆರಿಕಾದ ಎರಡು ಫೈಟರ್ ಜೆಟ್‌ಗಳು ಮಧ್ಯಾಕಾಶದಲ್ಲೇ ಡಿಕ್ಕಿ ಹೊಡೆದಿದ್ದು, ತಕ್ಷಣವೇ ಎಚ್ಚೆತ್ತ 4 ಮಂದಿ ಪೈಲಟ್‌ಗಳೂ ಪ್ಯಾರಾಚೂಟ್‌ಗಳ ಮೂಲಕ ಹಾರಿ ಅಪಾಯದಿಂದ ಪಾರಾಗಿದ್ದಾರೆ. ಅಪಘಾತಕ್ಕೀಡಾಗಿರುವ ಈ ಎರಡು ಯುದ್ಧ ವಿಮಾನಗಳು ಏರೋಬ್ಯಾಟಿಕ್ ಕುಶಲತೆಯನ್ನು ನಿರ್ವಹಿಸುತ್ತಿದ್ದಾಗ, ಸಮತೋಲನ ಕಳೆದುಕೊಂಡು ಅಥವಾ ಸಮನ್ವಯದ ಕೊರತೆಯಿಂದಾಗಿ, ಡಿಕ್ಕಿ ಹೊಡೆದು ಬೆಂಕಿಯ ಚೆಂಡಿನಂತೆ ಛಿದ್ರಛಿದ್ರವಾಗಿ ನೆಲಕ್ಕಪ್ಪಳಿಸಿದೆ. ಈ ಭಯಾನಕ ಘಟನೆಯ ವೀಡಿಯೊ ಸಾಮಾಜಿಕ ಮಾಧ್ಯಮದಲ್ಲಿ ವೈರಲ್ ಆಗುತ್ತಿದೆ. ಸುಮಾರು 8 ವರ್ಷಗಳ ಬಳಿಕ ಮೊದಲ ಬಾರಿಗೆ ಈ ವಾರಾಂತ್ಯದಲ್ಲಿ ಗನ್‌ಫೈಟರ್ ಸ್ಕೈಸ್ ಏರ್ ಶೋ ನಡೆಸಲಾಗಿದ್ದು, ಮಿಲಿಟರಿ ವಿಮಾನ ಪ್ರದರ್ಶನಗಳು ಮತ್ತು ವೈಮಾನಿಕ ಪ್ರದರ್ಶನಗಳನ್ನು ವೀಕ್ಷಿಸಲು ಸಾವಿರಾರು ಜನರು ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು. ಸದ್ಯ ಯುದ್ಧ ವಿಮಾನಗಳ ಅಪಘಾತದಿಂದ ಯಾವುದೇ ಸಾವು–ನೋವು ಸಂಭವಿಸಿಲ್ಲ.

ಉತ್ತರ ಪ್ರದೇಶದಲ್ಲಿ ಭೀಕರ ಅಪಘಾತ; 10 ಮಂದಿ ಸಾವು



ಲಖನೌ: ಭೀಕರ ರಸ್ತೆ ಅಪಘಾತದಲ್ಲಿ 10 ಮಂದಿ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಉತ್ತರ ಪ್ರದೇಶದ ಲಖಿಂಪುರ ಖೇರಿ ಜಿಲ್ಲೆಯಲ್ಲಿ ಸೋಮವಾರ(ಮೇ 18) ಬೆಳಗ್ಗೆ ಸಂಭವಿಸಿದೆ. ಲಖಿಂಪುರ ಖೇರಿಯ ಇಸಾನಗರ ಪೊಲೀಸ್ ಠಾಣೆ ವ್ಯಾಪ್ತಿಯ ರಾಷ್ಟ್ರೀಯ ಹೆದ್ದಾರಿ–730ರಲ್ಲಿ ಇರುವ ಸಿಸೈಯಾ ಬಳಿ ಟ್ರಕ್ ಹಾಗೂ ಟಾಟಾ ಮ್ಯಾಜಿಕ್ ವ್ಯಾನ್ ಮುಖಾಮುಖಿ ಡಿಕ್ಕಿಯಾಗಿದ್ದು, ಘಟನೆಯಲ್ಲಿ ವ್ಯಾನ್ ಸಂಪೂರ್ಣವಾಗಿ ನಜ್ಜುಗುಜ್ಜಾಗಿದೆ. ಈ ದುರ್ಘಟನೆ ಬಗ್ಗೆ ದುಃಖ ವ್ಯಕ್ತಪಡಿಸಿರುವ ಪ್ರಧಾನಿ ಮೋದಿ, ಮೃತಪಟ್ಟವರ ಆತ್ಮಕ್ಕೆ ಶಾಂತಿ ಕೋರಿ ದ್ದಾರೆ. ಅಲ್ಲದೆ, ಮೃತರ ಕುಟುಂಬಸ್ಥರಿಗೆ ಪ್ರಧಾನಮಂತ್ರಿ ಪರಿಹಾರ ನಿಧಿಯಿಂದ ತಲಾ 2 ಲಕ್ಷ ರೂ. ಮತ್ತು ಗಾಯಾಳುಗಳಿಗೆ ತಲಾ 50 ಸಾವಿರ ರೂ. ಪರಿಹಾರ ಘೋಷಣೆ ಮಾಡಿದ್ದಾರೆ. ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರೂ ಶೋಕ ವ್ಯಕ್ತಪಡಿಸಿ, ಸಂಬಂಧಪಟ್ಟ ಅಧಿಕಾರಿಗಳಿಗೆ ಕರೆ ಮಾಡಿ ಗಾಯಾಳುಗಳಿಗೆ ಸೂಕ್ತ ಚಿಕಿತ್ಸೆ ನೀಡುವಂತೆ ಸೂಚಿಸಿದ್ದಾರೆ ಮತ್ತು ಮೃತರ ಕುಟುಂಬಗಳಿಗೆ ಸಾಂತ್ವನ ಹೇಳಿದ್ದಾರೆ.

ಇರಾನ್‌ನ ಮಾಧ್ಯಮಗಳಲ್ಲೂ ಬಂದೂಕು ಬಳಕೆ ತರಬೇತಿ!



ಟೆಹ್ರಾನ್: ಪಶ್ಚಿಮ ಏಷ್ಯಾದಲ್ಲಿನ ಬಿಕ್ಕಟ್ಟು ಹೆಚ್ಚುತ್ತಿರುವುದರ ನಡುವೆ ಇರಾನ್‌ನ ರಾಜ್ಯ ಮಾಧ್ಯಮದಲ್ಲಿನ ನಿರೂಪಕರು ನಾಗರಿಕರಿಗೆ ಬಂದೂಕು ತರಬೇತಿ ಕಾರ್ಯಕ್ರಮಗಳನ್ನು ಬಹಿರಂಗವಾಗಿ ಪ್ರಸಾರ ಮಾಡಲಾರಂಭಿಸಿದ್ದಾರೆ.

ನಿರೂಪಕರು ಹಾಗೂ ಇರಾನ್ ಮಿಲಿಟರಿಯ ಬೋಧಕರು ಆಕ್ರಮಣಕಾರಿ ರೈಫಲ್‌ಗಳನ್ನು ಹೇಗೆ ನಿರ್ವಹಿಸಬೇಕು ಎಂದು ತರಬೇತಿ ನೀಡುತ್ತಿರುವ ವೀಡಿಯೊಗಳು ಸದ್ಯ ಸಾಮಾಜಿಕ ಜಾಲತಾಣದಲ್ಲಿ ವೈರಲ್ ಆಗುತ್ತಿವೆ. ಮಿಲಿಟರಿಯವರ ಮಾರ್ಗದರ್ಶನ ಅನುಸರಿಸುತ್ತಾ ನಿರೂಪಕರು ಯುಎಇ ಧ್ವಜವನ್ನು ಗುರಿಯಾಗಿಸಿಕೊಂಡು ಗುಂಡು ಹಾರಿಸಿದ್ದಾರೆ. ಇನ್ನು, ಇರಾನ್‌ನ ಸಾರ್ವಜನಿಕ ಸ್ಥಳಗಳಲ್ಲೂ ನಾಗರಿಕರಿಗೆ ಬಂದೂಕಿನ ತರಬೇತಿ ನೀಡಲಾಗುತ್ತಿದೆ. ಪುರುಷರು, ಮಹಿಳೆಯರು, ಯುವಕರು ಮತ್ತು ಹಿರಿಯರು ಸೇರಿದಂತೆ ಎಲ್ಲಾ ವಯೋಮಾನದವರು ತರಬೇತಿಯಲ್ಲಿ ಭಾಗವಹಿಸುತ್ತಿದ್ದಾರೆ.

ಪ್ರಮುಖ ಶಕ್ತಿ ಮತ್ತು ಜಾಗತಿಕ ದಬ್ಬಾಳಿಕೆಯನ್ನು ಇರಾನ್ ಎದುರಿಸುತ್ತಿದ್ದು, ಈ ಸಮಯದಲ್ಲಿ ಶಸ್ತ್ರಾಸ್ತ್ರಗಳ ಪರಿಚಯ ಮಾಡಿಸುವುದು ಶೈಕ್ಷಣಿಕ, ಸಾಂಸ್ಕೃತಿಕ ಮತ್ತು ನೈತಿಕ ತರಬೇತಿಯ ಭಾಗವಾಗಿದೆ ಎಂದು ಅಲ್ಲಿನ ಅಧಿಕಾರಿಗಳು ಸಮರ್ಥಿಸಿಕೊಂಡಿದ್ದಾರೆ.

ಪಶ್ಚಿಮ ಬಂಗಾಳ, ಕೇರಳದಲ್ಲಿ ಮಹಿಳೆಯರಿಗೆ ಉಚಿತ ಬಸ್ ಪ್ರಯಾಣ



ನವದೆಹಲಿ: ಪಶ್ಚಿಮ ಬಂಗಾಳ ಮಹಿಳೆಯರಿಗೆ ಮುಂದಿನ ತಿಂಗಳಿಂದ ಸರ್ಕಾರದ 3 ಸಾವಿರ ರೂ. ಮಾಸಿಕ ಸಹಾಯ ಧನ ಸಿಗಲಿದೆ. ಚುನಾವಣಾ ಪ್ರಣಾಳಿಕೆಯಲ್ಲಿ ಘೋಷಿಸಿದ್ದಂತೆ ಮಹಿಳೆಯರ ಖಾತೆಗೆ ಪ್ರತಿ ತಿಂಗಳು 3 ಸಾವಿರ ಸಹಾಯಧನ ಜಮೆ ಮಾಡುವ 'ಅನ್ನಪೂರ್ಣ ಯೋಜನೆ' ಮತ್ತು ಸರ್ಕಾರಿ ಬಸ್‌ನಲ್ಲಿ ಮಹಿಳೆಯರಿಗೆ ಉಚಿತ ಪ್ರಯಾಣ ಯೋಜನೆಗಳಿಗೆ ಮುಖ್ಯಮಂತ್ರಿ ಸುವೇಂದು ಅಧಿಕಾರಿ ನೇತೃತ್ವದ ಬಿಜೆಪಿ ಸರ್ಕಾರ ಅನುಮೋದನೆ ನೀಡಿದೆ. ಇವು ಜೂ.1ರಿಂದ ಜಾರಿಯಾಗಲಿದ್ದು, ಸಿಎಎ ಅಡಿಯಲ್ಲಿ ಪೌರತ್ವಕ್ಕೆ ಅರ್ಜಿ ಸಲ್ಲಿಸಿರುವ ಮತ್ತು ಎಸ್‌ಐಆರ್ ಪ್ರಕ್ರಿಯೆಯ ನಂತರ ಮತದಾರರ ಪಟ್ಟಿಯ ಸೇರ್ಪಡೆಗಾಗಿ ನ್ಯಾಯಾಲಯದ ಮೆಟ್ಟಿಲೇರಿರುವ ಮಹಿಳೆಯರೂ ಈ ಯೋಜನೆಗಳ ಪ್ರಯೋಜನ ಪಡೆಯಬಹುದು ಎಂದು ಮಹಿಳಾ ಮತ್ತು ಮಕ್ಕಳ ಕಲ್ಯಾಣ ಸಚಿವೆ ಅಗ್ನಿಮಿತ್ರ ಪೌಲ್ ತಿಳಿಸಿದ್ದಾರೆ. ಈ ಹಿಂದಿನ ಟಿಎಂಸಿ ಸರ್ಕಾರವು 'ಲಕ್ಷ್ಮೀರ್ ಭಂಡಾರ್' ಯೋಜನೆ ಅಡಿಯಲ್ಲಿ ಪ್ರತಿ ತಿಂಗಳು 1,500 ರೂ. ನೀಡುತ್ತಿತ್ತು.

ಜೂ.15ರಿಂದ ಕೇರಳದಲ್ಲಿ: ಕೇರಳ ಮುಖ್ಯಮಂತ್ರಿಯಾಗಿ ವಿ.ಡಿ.ಸತೀಶನ್ ಅಧಿಕಾರ ವಹಿಸಿಕೊಂಡ ಬೆನ್ನಲ್ಲೇ ನಡೆದ ಸಚಿವ ಸಂಪುಟದಲ್ಲಿ ಜೂ.15ರಿಂದ ಜಾರಿಗೆ ಬರುವಂತೆ ರಾಜ್ಯದ ಮಹಿಳೆಯರಿಗೆ ಸರ್ಕಾರಿ ಸಾರಿಗೆಯಲ್ಲಿ ಉಚಿತ ಪ್ರಯಾಣ ಕಲ್ಪಿಸುವ ಯೋಜನೆಗೆ ಅನುಮೋದನೆ ನೀಡಲಾಗಿದೆ.

ಮಂಡ್ಯ ಕಸಾಪ ಸಮ್ಮೇಳನದ ಲೆಕ್ಕ ಕೊಡದ

ಮಹೇಶ್ ಜೋಶಿ ವಿರುದ್ಧ ಕ್ರಮ ಕೈಗೊಳ್ಳಿ

ಸರ್ಕಾರದ ಮೇಲೆ ಒತ್ತಡ ತರಲು ಮುಖಂಡರ ಸಭೆಯಲ್ಲಿ ನಿರ್ಧಾರ

ಮಂಡ್ಯ, ಮೇ 18– ಕೇಂದ್ರ ಕನ್ನಡ ಸಾಹಿತ್ಯ ಪರಿಷತ್ತಿನ ರಾಜ್ಯಾಧ್ಯಕ್ಷ ಸ್ಥಾನದಿಂದ ವಜಾಗೊಂಡಿರುವ ಡಾ.ಮಹೇಶ್ ಜೋಶಿ ವಿರುದ್ಧ ಸರ್ಕಾರ ಕ್ರಮ ಕೈಗೊಳ್ಳಬೇಕು. ಆ ನಿಟ್ಟಿನಲ್ಲಿ ಸರ್ಕಾರದ ಮೇಲೆ ಒತ್ತಡ ಹಾಕಲು ವಿವಿಧ ಸಂಘಟನೆಗಳ ಮುಖಂಡರ ಸಭೆಯಲ್ಲಿ ನಿರ್ಧಾರ ಕೈಗೊಳ್ಳಲಾಯಿತು.



ಡಾ.ಜಯಪ್ರಕಾಶ್‌ಗೌಡ

ನಗರದ ಕರ್ನಾಟಕ ಸಂಘದ ಕೆ.ಟಿ.ಶಿವಲಿಂಗಯ್ಯ ಸಭಾಂಗಣದಲ್ಲಿ ಕರ್ನಾಟಕ ಸಂಘ, ಸಾಹಿತ್ಯಾಸಕ್ತರು, ಸೇರಿದಂತೆ ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರ ಸಭೆಯಲ್ಲಿ ಚರ್ಚೆ ನಡೆಸಲಾಯಿತು.

ಕರ್ನಾಟಕ ಸಂಘದ ಅಧ್ಯಕ್ಷ ಡಾ.ಜಯಪ್ರಕಾಶ್‌ಗೌಡ ಮಾತನಾಡಿ, 87ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನದಲ್ಲಿ ಪಡೆದಿದ್ದ 2.50 ಕೋಟಿ ರೂ. ಅನುದಾನಕ್ಕೆ ಲೆಕ್ಕವೇ ನೀಡಿಲ್ಲ. ಸರ್ಕಾರವೇ ಸಮ್ಮೇಳನ ನಡೆಸಬಹುದಿತ್ತು. ಅಧ್ಯಕ್ಷನಿಗೆ ಹಣ ನೀಡುವ ಅವಶ್ಯಕತೆ ಇರಲಿಲ್ಲ ಎಂದರು.

ಈಗಾಗಲೇ ಕೇಂದ್ರ ಕನ್ನಡ ಸಾಹಿತ್ಯ ಪರಿಷತ್‌ಗೆ ಆಡಳಿತಾಧಿಕಾರಿ ನೇಮಕ ಮಾಡಲಾಗಿದೆ. ಸಾಹಿತ್ಯ ಪರಿಷತ್‌ನಲ್ಲಿ ನಡೆದಿರುವ ಎಲ್ಲ ಹಣಕಾಸು ವ್ಯವಹಾರಗಳ ಬಗ್ಗೆ ಸರ್ಕಾರ ವರದಿ ಪಡೆದಿದೆ. ಆದರೆ ವರದಿ ಬಗ್ಗೆ ಸರ್ಕಾರ ಇನ್ನೂ ಯಾವುದೇ ಕ್ರಮ ಕೈಗೊಂಡಿಲ್ಲ. ತಪ್ಪು ಕಂಡು ಬಂದರೆ ಕೂಡಲೇ ಕ್ರಮ ಕೈಗೊಳ್ಳಲಿ. ಇದು ಸಾರ್ವಜನಿಕರ ಒತ್ತಾಯವಾಗಿದೆ ಎಂದು ಹೇಳಿದರು.

ವಿವಿ ಮುಚ್ಚುವ ಹುನ್ನಾರ: ಹಿಂದೆ ಬಿಜೆಪಿ ಸರ್ಕಾರ 12ನೇ ಹಣಕಾಸು ಆಯೋಗದಂತೆ ಮಂಡ್ಯ ವಿಶ್ವವಿದ್ಯಾಲಯ ಸ್ಥಾಪನೆ ಮಾಡಿದ್ದು, ಪ್ರತೀ ವರ್ಷ 2 ಕೋಟಿ ರೂ. ಅನುದಾನ ನೀಡಬೇಕಾಗಿತ್ತು. ಅನುದಾನ ನೀಡಿದ್ದರೆ ವಿವಿ ಸುಗಮವಾಗಿ ನಡೆಯುತ್ತಿತ್ತು. ವಿವಿ ರಚನೆ ಮಾಡುವಾಗ ಸುಮ್ಮನಿದ್ದು, ಈಗ ವಿವಿ ಮುಚ್ಚಿ ಎನ್ನುವುದು ಸರಿಯಲ್ಲ ಎಂದು ಹೇಳಿದರು.

ವಿಧಾನಪರಿಷತ್ ಮಾಜಿ ಸದಸ್ಯ ಮರಿತಿಬ್ಬೇಗೌಡರು ವಿವಿಯಲ್ಲಿ ಅಕ್ರಮ ನಡೆದಿದೆ ಎಂದು ಹೇಳುತ್ತಾರೆ. ಆದರೆ ಅವರದ್ದೇ ಸರ್ಕಾರವಿದೆ. ಸಚಿವರು, ಶಾಸಕರ ಮೂಲಕ ಹೋರಾಟ ಮಾಡುವ ಮೂಲಕ ವಿವಿ ಉಳಿಸಬೇಕು. ಇದು ಜಿಲ್ಲೆಯ ಆಸ್ಮಿತೆಯಾಗಿದೆ. ಶಾಸಕ ಪಿ.ರವಿಕುಮಾರ್‌ಗೌಡ ಗಣಿಗ ವಿವಿ ಪರವಾಗಿದ್ದಾರೆ. ವಿವಿ ಮುಚ್ಚಿದರೆ ಬೆಂಕಿ ಹಚ್ಚೇವೆ ಎನ್ನುತ್ತಾರೆ. ಅತ್ತ ಉನ್ನತ ಶಿಕ್ಷಣ ಸಚಿವ ಡಾ.ಸುಧಾಕರ್ ಅವರು ವಿವಿ ಮುಚ್ಚುವ ಬಗ್ಗೆ ಸರ್ಕಾರ ನಿರ್ಧಾರ ಕೈಗೊಳ್ಳಲಿದೆ ಎನ್ನುತ್ತಾರೆ. ಇತ್ತ ಎಂಎಲ್ಸಿ ದಿನೇಶ್‌ಗೂಳಿಗೌಡ ಅವರು ಎಸ್.ಎಂ.ಕೃಷ್ಣ ಪೀಠ ರಚಿಸಬೇಕು ಎಂದು ಆಗ್ರಹಿಸಿದ್ದಾರೆ. ಈ ಎಲ್ಲ ಬೆಳವಣಿಗೆಗಳನ್ನು ನೋಡಿದರೆ ವಿವಿ ಮುಚ್ಚುವ ಹುನ್ನಾರ ನಡೆಯುತ್ತಿದೆಯೇ ಎಂಬ ಅನುಮಾನ ಮೂಡುತ್ತಿದೆ ಎಂದು ಬೇಸರ ವ್ಯಕ್ತಪಡಿಸಿದರು.

ಜಿಲ್ಲೆಯ ಗೌರವಕ್ಕೆ ಧಕ್ಕೆ: ಮಂಡ್ಯ ವಿವಿ ಮುಚ್ಚಿದರೆ ಜಿಲ್ಲೆಯ ಗೌರವಕ್ಕೆ ಧಕ್ಕೆಯಾಗಲಿದೆ. ಪ್ರಾರಂಭಿಸಿದಾಗಲೇ ಬೇಡ ಎನ್ನಬೇಕಿತ್ತು. ಈಗ ಏಳು ವರ್ಷಗಳ ನಂತರ ಬೇಡ ಎನ್ನುವುದು ಜಿಲ್ಲೆಗೆ ಅವಮಾನ ಮಾಡಿದಂತಾಗುತ್ತದೆ. ಯಾವುದೇ ಕಾರಣಕ್ಕೂ ವಿವಿ ಮುಚ್ಚಲು ಬಿಡಬಾರದು. ಎಲ್ಲರೂ ಒಗ್ಗಟ್ಟಿನಿಂದ ಹೋರಾಟ ಮಾಡುವುದು ಅಗತ್ಯವಾಗಿದೆ ಎಂದರು.

ಕನ್ನಡ ಭವನ ಬೇರೆಡೆ ನಿರ್ಮಾಣ ಮಾಡಲಿ: ಸಮ್ಮೇಳನದ ನೆನಪಿಗಾಗಿ ನಿರ್ಮಾಣ ಮಾಡಲು ಮುಂದಾಗಿರುವ ಕನ್ನಡ ಭವನವನ್ನು ಬೇರೆಡೆ ಎರಡು ಎಕರೆ ಜಾಗ ಗುರುತಿಸಿ ನಿರ್ಮಾಣ ಮಾಡಲಿ. ಕ್ರೀಡಾಂಗಣದ ಆವರಣದಲ್ಲಿ ನಿರ್ಮಾಣ ಮಾಡಿದರೆ ಸಮಸ್ಯೆಯಾಗಲಿದೆ. ಕೇವಲ ನಗರ ಕೇಂದ್ರೀಕರಣ ಮಾಡುವುದನ್ನು ಬಿಟ್ಟು ಹೊರ ವಲಯಕ್ಕೂ ವಿಸ್ತರಿಸಬೇಕು ಎಂದು ಹೇಳಿದರು.

ಸಭಾಂಗಣದ ಕೊರತೆ: ಮಂಡ್ಯ ನಗರ ಸೇರಿದಂತೆ ತಾಲೂಕು ಮಟ್ಟದಲ್ಲಿಯೂ ಉತ್ತಮ ಸಭಾಂಗಣಗಳಿಲ್ಲ. ಯಾವುದೇ ಕಾರ್ಯಕ್ರಮ ಮಾಡಲು ಸಾಧ್ಯವಾಗುತ್ತಿಲ್ಲ. ಕಲಾಮಂದಿರ ಮತ್ತೆ ದುರಸ್ತಿಗೆ ಬಂದು ನಿಂತಿದೆ. ರೈತಸಭಾಂಗಣ ಇನ್ನೂ ಕಾಮಗಾರಿ ನಡೆಯುತ್ತಿದೆ. ಅಂಬೇಡ್ಕರ್ ಭವನದಲ್ಲಿ ಬಾಡಿಗೆ ಹೆಚ್ಚಿದೆ. ಈಗಿರುವಾಗ ಸಾಂಸ್ಕೃತಿಕವಾಗಿ ಕಾರ್ಯಕ್ರಮ ಮಾಡಲು ಉತ್ತಮ ಆಡಿಟೋರಿಯಂ ಇಲ್ಲ. ಇದರ ಬಗ್ಗೆ ಚರ್ಚೆ ನಡೆಸಬೇಕಿದೆ ಎಂದರು.

23ರಂದು ಮತ್ತೊಂದು ಸಭೆ ನಿಗದಿ: ಕರ್ನಾಟಕ ಸಂಘದ ಕಾರ್ಯದರ್ಶಿ ಲೋಕೇಶ್ ಚಂದಗಾಲು ಮಾತನಾಡಿ, ಜಿಲ್ಲೆಯ ಸಾಹಿತ್ಯ, ಸಾಂಸ್ಕೃತಿಕ ಹಾಗೂ ಶೈಕ್ಷಣಿಕ ಸಮಸ್ಯೆಗಳ ಚರ್ಚೆ ನಡೆಸಲು ಪಕ್ಷಾತೀತವಾಗಿ ಸಭೆ ಕರೆಯಲು ನಿರ್ಧರಿಸಲಾಯಿತು. ಮೇ 23ರಂದು ಬೆಳಿಗ್ಗೆ 12ಕ್ಕೆ ಸಭೆ ನಿಗದಿಪಡಿಸಲಾಗಿದ್ದು, ಅಂದಿನ ಸಭೆಗೆ ರಾಜಕೀಯ ಮುಖಂಡರು, ಸಾಹಿತ್ಯಾಸಕ್ತರು, ಶಿಕ್ಷಣ ತಜ್ಞರು, ರೈತಸಂಘಗಳ ಮುಖಂಡರು, ವಿವಿಧ ಕನ್ನಡಪರ ಸಂಘಟನೆಗಳ ಮುಖಂಡರು ಸೇರಿದಂತೆ ಎಲ್ಲರೂ ಪಕ್ಷಾತೀತವಾಗಿ ಭಾಗವಹಿಸಬೇಕು. ಜಿಲ್ಲೆಯ ಅಭಿವೃದ್ಧಿ, ಪ್ರವಾಸೋದ್ಯಮ, ಶಿಕ್ಷಣ, ಸಾಹಿತ್ಯ, ಸಾಂಸ್ಕೃತಿಕ ಸಮಸ್ಯೆಗಳ ಬಗ್ಗೆ ಸಮಗ್ರ ಚರ್ಚೆ ನಡೆಸಲಾಗುವುದು. ಆದ್ದರಿಂದ ಎಲ್ಲರೂ ಭಾಗವಹಿಸಬೇಕು ಎಂದು ಮನವಿ ಮಾಡಿದರು.

ಸಭೆಯಲ್ಲಿ ಸಾಹಿತಿ ಕೃಷ್ಣಸ್ವರ್ಣಸಂದ್ರ, ಸಂಘಟಕರಾದ ವಿ.ಹರ್ಷ ಪಣ್ಣೇದೊಡ್ಡಿ, ಚಂದ್ರಲಿಂಗು, ಕರವೇ ರಾಜ್ಯ ಉಪಾಧ್ಯಕ್ಷ ಮ.ಸೋ.ಚಿದಂಬರ್, ತಾಲೂಕು ಅಧ್ಯಕ್ಷ ತೇಜುಗೌಡ ಸೇರಿದಂತೆ ಮತ್ತಿತರರಿದ್ದರು.

ಕಾರಿಗೆ ಸಾರಿಗೆ ಬಸ್ ಡಿಕ್ಕಿ: ವಕೀಲ ಸ್ಥಳದಲ್ಲೇ ಸಾವು

ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಸ್ಥಳಕ್ಕೆ ಬರುವಂತೆ ಅಗ್ರಹಿಸಿ ಮೃತದೇಹವನ್ನಿಟ್ಟುಕೊಂಡು ಪ್ರತಿಭಟನೆ

ಚಿನಕುರಳಿ: ಕಾರಿಗೆ, ಕೆಎಸ್‌ಆರ್‌ಟಿಸಿ ಬಸ್ ಡಿಕ್ಕಿ ಹೊಡೆದ ಪರಿಣಾಮ ವಕೀಲರೊಬ್ಬರು ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ಪಾಂಡವಪುರ ತಾಲೂಕಿನ ಕಣಿವೆ ಗೇಟ್ ಸಮೀಪದ ಬೋರೆ ಬಳಿ ಸಂಭವಿಸಿದ್ದು, ಉದ್ರಿಕ್ತ ಜನರು ಕೆಎಸ್‌ಆರ್‌ಟಿಸಿ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡುವಂತೆ ಆಗ್ರಹಿಸಿ ಮೃತ ದೇಹವನ್ನಿಟ್ಟುಕೊಂಡು ಪ್ರತಿಭಟನೆ ನಡೆಸಿದರು.



ಕಣಿವೆ ಕೊಪ್ಪಲು ಗ್ರಾಮದ ಟಿಎಪಿಸಿಎಂಎಸ್‌ನ ಮಾಜಿ ನಿರ್ದೇಶಕರು ಹಾಗೂ ಹೆಸರಾಂತ ವಕೀಲರಾದ ಕಣಿವೆ ಯೋಗೇಶ್(49)ಎಂಬುವರೇ ದುರಂತದಲ್ಲಿ ಸಾವನ್ನಪ್ಪಿದವರು.

ಪಾಂಡವಪುರ–ಕೆ.ಆರ್.ಪೇಟೆ ಮುಖ್ಯರಸ್ತೆಯಲ್ಲಿ ಚಿನಕುರಳಿ ಕಡೆಯಿಂದ ಪಾಂಡವಪುರ ಕಡೆಗೆ ವಕೀಲ ಕಣಿವೆ ಯೋಗೇಶ್ ಅವರು ಕಾರ್‌ನಲ್ಲಿ ಬರುತ್ತಿದ್ದ ಸಂದರ್ಭದಲ್ಲಿ ಮೈಸೂರು ಕಡೆಯಿಂದ ವೇಗವಾಗಿ ಬಂದ ಸಾರಿಗೆ ಬಸ್ ಕಾರಿಗೆ ಡಿಕ್ಕಿ ಹೊಡೆದಿದೆ. ಡಿಕ್ಕಿ ಹೊಡೆದ ರಭಸಕ್ಕೆ ವಕೀಲ ಕಣಿವೆ ಯೋಗೇಶ್ ಸ್ಥಳದಲ್ಲಿಯೇ ಸಾವನ್ನಪ್ಪಿದ್ದಾರೆ.

ವಿಷಯ ತಿಳಿದು ಸಾರ್ವಜನಿಕರು ಜಮಾಯಿಸಿ ಸಾರಿಗೆ ಅಧಿಕಾರಿಗಳ ವಿರುದ್ಧ ಘೋಷಣೆ ಕೂಗಿ ಆಕ್ರೋಶ ವ್ಯಕ್ತಪಡಿಸಿದರು. ಡಿಪೋ ಮ್ಯಾನೇಜರ್ ಸ್ಥಳಕ್ಕೆ ಬರುವವರೆಗೂ ಮೃತದೇಹ ತೆಗೆಯುವುದಿಲ್ಲವೆಂದು ಪಟ್ಟು ಹಿಡಿದು ಪ್ರತಿಭಟನೆ ನಡೆಸಿದರು. ಸಾರಿಗೆ ಅಧಿಕಾರಿ ಸ್ಥಳಕ್ಕೆ ಭೇಟಿ ನೀಡಿ ಪರಿಹಾರ ನೀಡುವುದಾಗಿ ಭರವಸೆ ನೀಡಿದ ಬಳಿಕ ಮೃತದೇಹವನ್ನು ಪಾಂಡವಪುರ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಲಾಯಿತು.

ಮೃತರು ಪತ್ನಿ ತಾಪಂ ಮಾಜಿ ಸದಸ್ಯೆ ಗೀತಾ, ಓರ್ವ ಪುತ್ರ ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ. ವಕೀಲ ಕಣಿವೆ ಯೋಗೇಶ್ ನಿಧನಕ್ಕೆ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು, ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್, ಜಿಪಂ ಮಾಜಿ ಸದಸ್ಯ ಸಿ.ಅಶೋಕ್ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ. ಮಂಗಳವಾರ ಬೆಳಗ್ಗೆ ತಾಲೂಕಿನ ಕಣಿವೆಕೊಪ್ಪಲು ಗ್ರಾಮದ ಸ್ವಜಮೀನಿನಲ್ಲಿ ಅಂತ್ಯಸಂಸ್ಕಾರ ನೆರವೇರಲಿದೆ ಎಂದು ಕುಟುಂಬಸ್ಥರು ತಿಳಿಸಿದ್ದಾರೆ.

ಗೋಮಾಳದಲ್ಲಿ ಅಕ್ರಮ ಗಣಿಗಾರಿಕೆ

ಸ್ಫೋಟಕ ವಸ್ತು, ಇಟಾಚಿ, ಕಂಪ್ರೆಷರ್ ಯಂತ್ರ ವಶ

ಶ್ರೀರಂಗಪಟ್ಟಣ: ತಾಲೂಕಿನ ಮುಂಡುಗದೊರೆ ವ್ಯಾಪ್ತಿಯ ಸರ್ಕಾರಿ ಗೋಮಾಳದಲ್ಲಿ ಅಕ್ರಮವಾಗಿ ನಡೆಯುತ್ತಿದ್ದ ಕಲ್ಲು ಗಣಿಗಾರಿಕೆ ಮೇಲೆ ದಾಳಿ ನಡೆಸಿದ ಅಧಿಕಾರಿ ಗಳು ಸ್ಫೋಟಕ ವಸ್ತು, ಇಟಾಚಿ ಮತ್ತು ಕಂಪ್ರೆಷರ್ ಯಂತ್ರಗಳನ್ನು ವಶಪಡಿಸಿಕೊಂಡಿದ್ದಾರೆ.



ದಾಳಿ ನಡೆಸಿದ ಅಧಿಕಾರಿಗಳು

ತಹಸೀಲ್ದಾರ್ ಚೇತನಾ ಯಾದವ್, ಗಣಿ ಮತ್ತು ಭೂ ವಿಜ್ಞಾನ ಇಲಾಖೆ ಸಹಾಯಕ ಅಧಿಕಾರಿ ರಜಿನಿ, ಸಿಪಿಐ ವಿವೇಕಾನಂದ ನೇತೃತ್ವದ ತಂಡ ದಾಳಿ ನಡೆಸಿದ್ದು ಎರಡು ಬಾಕ್ಸ್ ಜಿಲೆಟಿನ್ ಕಡ್ಡಿಗಳು, ಮೂರು ಇಟಾಚಿ ಯಂತ್ರಗಳು, ಕಲ್ಲು ಬಂಡೆ ಕೊರೆಯುವ ಎರಡು ಕಂಪ್ರೆಷರ್ ಯಂತ್ರಗಳು ಹಾಗೂ ಸ್ಫೋಟಕ್ಕೆ ಬಳಸುವ ಟ್ಯೂಬ್‌ಗಳನ್ನು ವಶಪಡಿಸಿ ಕೊಳ್ಳಲಾಗಿದೆ.

ಮುಂಡುಗದೊರೆ ಗ್ರಾಮದ ಸ.ನಂ. 351ರ ಸರ್ಕಾರಿ ಗೋಮಾಳದಲ್ಲಿ ಅಕ್ರಮವಾಗಿ ನಡೆಯುತ್ತಿದ್ದ ಕಲ್ಲು ಗಣಿಗಾರಿಕೆ ಬಗ್ಗೆ ಪ್ರಗತಿಪರ ಸಂಘಟನೆಗಳ ಮುಖಂಡರು ನೀಡಿದ ಮಾಹಿತಿ ಆಧರಿಸಿ ಈ ದಾಳಿ ನಡೆದಿದೆ. ಹಂಗರಹಳ್ಳಿ ಗ್ರಾಮದ ಕ್ರಷರ್ ಮಾಲೀಕ ಸೇರಿದಂತೆ ಇತರರ ವಿರುದ್ಧ ಸ್ವಯಂಪ್ರೇರಿತವಾಗಿ ಪ್ರಕರಣ ದಾಖಲಿಸಲಾಗಿದೆ ಎಂದು ಅರಕೆರೆ ಠಾಣೆ ಪೊಲೀಸರು ತಿಳಿಸಿದ್ದಾರೆ.

ತಾಲೂಕಿನ ಮುಂಡುಗದೊರೆ, ಹಂಗರಹಳ್ಳಿ, ಚನ್ನನಕೆರೆ, ಟಿ.ಎಂ. ಹೊಸೂರು ಇತರೆಡೆ ಕಲ್ಲು ಗಣಿಗಾರಿಕೆ ಪ್ರದೇಶಗಳಲ್ಲಿ ನಿಷೇಧಾಜ್ಞೆ ಜಾರಿಯಲ್ಲಿದೆ. ಆದರೂ ಕಲ್ಲು ಗಣಿಗಾರಿಕೆ ಅಡೆತಡೆಯಿಲ್ಲದೆ ನಡೆಯುತ್ತಿದೆ. ಅಧಿಕಾರಿಗಳು ಜಾಣ ಕುರುಡು ಪ್ರದರ್ಶಿಸುತ್ತಿದ್ದಾರೆ ಎಂದು ಆರೋಪಿಸಲಾಗಿದೆ.

ಮಾಜಿ ಪ್ರಧಾನಿ ದೇವೇಗೌಡರ ಹುಟುಹಬ್ಬ ಆಚರಣೆ

ಪಾಂಡವಪುರ: ಮಾಜಿ ಪ್ರಧಾನಿ ಹೆಚ್.ಡಿ. ದೇವೇಗೌಡರ ಹುಟ್ಟುಹಬ್ಬದ ಅಂಗವಾಗಿ ಪಟ್ಟಣದಲ್ಲಿ ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಅಭಿಮಾನಿಗಳು ಹಾಗೂ ಜೆಡಿಎಸ್ ಪಕ್ಷದ ಕಾರ್ಯಕರ್ತರು ಸಾರ್ವಜನಿಕ ಆಸ್ಪತ್ರೆಯ ರೋಗಿಗಳಿಗೆ ಮನ್‌ಮುಲ್ ನಿರ್ದೇಶಕ ಸಿ.ಶಿವಕುಮಾರ್ ನೇತೃತ್ವದಲ್ಲಿ ಹಣ್ಣುಹಂಪಲು ವಿತರಿಸಿದರು.



ಪಾಂಡವಪುರ ಆಸ್ಪತ್ರೆಯಲ್ಲಿ ಒಳರೋಗಿಗಳಿಗೆ ಹಣ್ಣುಹಂಪಲು ವಿತರಿಸಲಾಯಿತು.

ಬಳಿಕ ಮಾತನಾಡಿದ ಸಿ.ಶಿವಕುಮಾರ್ ಜೆಡಿಎಸ್ ಪಕ್ಷದ ರಾಷ್ಟ್ರೀಯ ಅಧ್ಯಕ್ಷರು ಹಾಗೂ ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ. ದೇವೇಗೌಡರ ಹುಟ್ಟುಹಬ್ಬದ ಅಂಗವಾಗಿ ಆಸ್ಪತ್ರೆಯಲ್ಲಿ ರೋಗಿಗಳಿಗೆ ಹಣ್ಣುಹಂಪಲು ವಿತರಣೆ ಮಾಡಿದ್ದೇವೆ. ಹುಟ್ಟು ಹೋರಾಟಗಾರರಾದ ಹೆಚ್.ಡಿ.ದೇವೇಗೌಡರು ಸದಾ ರೈತರು, ದುರ್ಬಲರು, ಅಲ್ಪಸಂಖ್ಯಾತರು, ದೀನ ದಲಿತರ ಪರವಾಗಿ ಚಿಂತಿಸುವ ಮುತ್ಸದ್ದಿ ನಾಯಕರಾಗಿದ್ದಾರೆ. ಪ್ರಧಾನಿಯಾಗಿ ದೆಹಲಿಯ ಕೆಂಪುಕೋಟೆಯ ಮೇಲೆ ನಿಂತು ರಾಷ್ಟ್ರಧ್ವಜ ಹಾರಿಸಿದ ನಾಡಿನ ಏಕೈಕ ಕನ್ನಡಿಗ, ಪ್ರಧಾನಮಂತ್ರಿ, ಮುಖ್ಯಮಂತ್ರಿಯಾಗಿ ರಾಷ್ಟ್ರ, ನಾಡಿಗೆ ಅಪಾರವಾದ ಕೊಡುಗೆಯನ್ನು ನೀಡಿದ್ದಾರೆ ಎಂದರು.

ಈ ಸಂದರ್ಭದಲ್ಲಿ ಜೆಡಿಎಸ್ ಅಧ್ಯಕ್ಷ ಎಸ್.ಎ.ಮಲ್ಲೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಚಿಕ್ಕಾಡೆ ಗಿರೀಶ್, ಮಾಜಿ ಅಧ್ಯಕ್ಷ ಡಿ.ಶ್ರೀನಿವಾಸ್, ನಿರ್ದೇಶಕರಾದ ರಾಮಕೃಷ್ಣೇಗೌಡ, ವಿ.ಎಸ್.ನಿಂಗೇಗೌಡ, ಡಿಸಿಸಿ ಬ್ಯಾಂಕ್ ಮಾಜಿ ನಿರ್ದೇಶಕರಾದ ಗುರುಸ್ವಾಮಿ, ಶ್ಯಾದನಹಳ್ಳಿ ಚಲುವರಾಜ್ ಇತರರಿದ್ದರು.

ಶಿವಕುಮಾರ್ ಅವಿರೋಧ ಆಯ್ಕೆ



ಮಂಡ್ಯ: ಜಿಲ್ಲಾ ಸಹಕಾರ ಒಕ್ಕೂಟ ನಿಯಮಿತ ಇದರ ಆಡಳಿತ ಮಂಡಳಿಯ ಪಾಂಡವಪುರ ವಿಭಾಗದ ಎಲ್ಲಾ ಹಾಲು ಉತ್ಪಾದಕರ ಸಹಕಾರ ಸಂಘಗಳ ನಿರ್ದೇಶಕ ಸ್ಥಾನಕ್ಕೆ ಸಿ.ಶಿವಕುಮಾರ್ ಅವಿರೋಧವಾಗಿ ಆಯ್ಕೆಯಾಗಿದ್ದಾರೆ. ಅವಿರೋಧವಾಗಿ ಆಯ್ಕೆಯಾದ ಶಿವಕುಮಾರ್ ಅವರನ್ನು ಮಾಜಿ ಸಚಿವ ಸಿ.ಎಸ್.ಪುಟ್ಟರಾಜು ಸೇರಿದಂತೆ ಅನೇಕ ಗಣ್ಯರು ಅಭಿನಂದಿಸಿದ್ದಾರೆ.

ಪ್ರತಿಭಾ ಪುರಸ್ಕಾರಕ್ಕೆ ಅರ್ಜಿ ಆಹ್ವಾನ

ನಾಗಮಂಗಲ: ರಾಜ್ಯ ಸರ್ಕಾರಿ ನೌಕರರ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲು ಅರ್ಜಿ ಆಹ್ವಾನಿಸಲಾಗಿದೆ ಎಂದು ರಾಜ್ಯ ಸರ್ಕಾರಿ ನೌಕರರ ಸಂಘ ಅಧ್ಯಕ್ಷರಾದ ಜೆ.ವೈ ಮಂಜುನಾಥ್ ತಿಳಿಸಿದ್ದಾರೆ. ರಾಜ್ಯ ಸರ್ಕಾರಿ ನೌಕರರ ಪ್ರತಿಭಾನ್ವಿತ ಮಕ್ಕಳನ್ನು ಗುರುತಿಸಿ ಪ್ರೋತ್ಸಾಹಿಸುವ ಉದ್ದೇಶದಿಂದ ಪ್ರತಿ ವರ್ಷ ರಾಜ್ಯ ಸರ್ಕಾರಿ ನೌಕರರ ಸಂಘದಿಂದ ರಾಜ್ಯಾಧ್ಯಕ್ಷರಾದ ಸಿ.ಎಸ್.ಷಡಕ್ಷರಿ ಅವರ ನೇತೃತ್ವದಲ್ಲಿ ಸುಮಾರು 10,000 ಕ್ಕೂ ಹೆಚ್ಚು ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಗುತ್ತಿದೆ ಎಂದರು.

2026 ಸಾಲಿನಲ್ಲಿ ಎಸ್‌ಎಸ್‌ಎಲ್‌ಸಿ ಮತ್ತು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಶೇ 90ಕ್ಕಿಂತ ಹೆಚ್ಚು ಅಂಕ ಪಡೆದ ನಾಗಮಂಗಲ ತಾಲೂಕಿನ ರಾಜ್ಯ ಸರ್ಕಾರಿ ನೌಕರರ ಮಕ್ಕಳು https:/powermedia.info ಲಿಂಕ್ ಮುಖಾಂತರ ಅರ್ಜಿ ಸಲ್ಲಿಸುವಂತೆ ರಾಜ್ಯ ಸರ್ಕಾರಿ ನೌಕರರ ಸಂಘದ ತಾಲೂಕು ಅಧ್ಯಕ್ಷರಾದ ಜೆ ವೈ ಮಂಜುನಾಥ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ಚಿಕ್ಕೋಸಹಳ್ಳಿ ಚನ್ನಮ್ಮ ನಿಧನ

ಕೆ.ಆರ್.ಪೇಟೆ, ಮೇ 18– ತಾಲೂಕಿನ ಕಸಬಾ ಹೋಬಳಿಯ ಚಿಕ್ಕೋಸಹಳ್ಳಿ ಗ್ರಾಮದ ಲೇಟ್ ನಂಜೇಗೌಡ ಉರುಫ್ ಪಾಪೇಗೌಡ ಅವರ ಧರ್ಮಪತ್ನಿ ಚನ್ನಮ್ಮ (80) ಸೋಮವಾರ ನಿಧನರಾಗಿದ್ದಾರೆ.



ಮೃತರು ಗ್ರಾ.ಪಂ ಮಾಜಿ ಅಧ್ಯಕ್ಷರು ಹಾಗೂ ಪ್ರಥಮ ದರ್ಜೆ ಗುತ್ತಿಗೆದಾರ ಚಿಕ್ಕೋಸಹಳ್ಳಿ ಎನ್.ರಮೇಶ್ ಸೇರಿದಂತೆ ನಾಲ್ವರು ಪುತ್ರರು, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಮೃತರ ಅಂತ್ಯಕ್ರಿಯೆಯು ಮೇ 19ರಂದು ಬೆಳಗ್ಗೆ 11 ಗಂಟೆಗೆ ಸ್ವಗ್ರಾಮ ಚಿಕ್ಕೋಸ ಹಳ್ಳಿ ಗ್ರಾಮದಲ್ಲಿ ಇರುವ ಅವರ ಜಮೀನಿನಲ್ಲಿ ನಡೆಯಲಿದೆ ಎಂದು ಕುಟುಂಬದ ಸದಸ್ಯರು ತಿಳಿಸಿದ್ದಾರೆ.

ಒಂದನೇ ಪುಟದಿಂದ

ದುಬಾರೆ ದುರಂತ !

ಸೋಮವಾರ ಬೆಳಗ್ಗೆ ದುಬಾರೆ ಕ್ಯಾಂಪ್ ಪಕ್ಕ ಹರಿಯುವ ಕಾವೇರಿ ನದಿಯ ಸ್ನಾನ ಘಟ್ಟದ ಬಳಿ ಕರೆದುಕೊಂಡು ಬರಲಾಗಿದೆ. ಈ ವೇಳೆ ಕಾವೇರಿ ನದಿಯಲ್ಲಿ ಅದಾಗಲೇ 8 ಆನೆಗಳಿಗೆ ಸ್ನಾನ ಮಾಡಿಸಲಾಗುತ್ತಿತ್ತು. ನೀರಿಗಿಳಿಯುತ್ತಲೇ ಏಕಾಏಕಿ ರೊಚ್ಚಿಗೆದ್ದ ಕಂಜನ್, ಪಕ್ಕದಲ್ಲೇ ಸ್ನಾನ ಮಾಡಿಸುತ್ತಿದ್ದ ಮಾರ್ತಾಂಡ(38) (ಮಕ್ನ) ಆನೆ ಮೇಲೆ ಮುಗಿ ಬಿದ್ದಿದೆ. ಟಿಕೆಟ್ ಪಡೆದು ಆನೆಗಳ ಸ್ನಾನ ಮಾಡುವುದನ್ನು ಹಲವು ಪ್ರವಾಸಿಗರು ವೀಕ್ಷಿಸುತ್ತಿರುವಾಗಲೇ ಈ ಅನಿರೀಕ್ಷಿತ ಘಟನೆಯಲ್ಲಿ ತಮಿಳುನಾಡಿನ ಒಂದೇ ಕುಟುಂಬದ ಮೂವರು ಸಿಲುಕಿದ್ದಾರೆ.

ಕಂಜನ್ ರೋಷಾವೇಶದಿಂದ ಮುನ್ನುಗ್ಗಿ ಕೋರೆಯಿಂದ ತಿವಿಯುತ್ತಿದ್ದಂತೆ ಮಾರ್ತಾಂಡ ನದಿ ದಡದಲ್ಲಿ ಮುಗ್ಗರಿಸಿ ಉರುಳಿ ಬಿದ್ದಿದೆ. ಆದರೂ, ಸುಮ್ಮನಾಗದ ಕಂಜನ್ ಮೇಲೆರಗಿ ತಿವಿಯುತ್ತಲೇ ಇದೆ. ಹಾಗಾಗಿ ಮೇಲೇಳಲು ಮಾರ್ತಾಂಡ ಪ್ರಯತ್ನಿಸುತ್ತಿರುವಾಗಲೇ ಆಯತಪ್ಪಿ ಕೆಳಗೆ ಬಿದ್ದ ಜುನೇಷ(ತುಳಸಿ), ಅದರ ಕಾಲಡಿ ಬಿದ್ದಾಗ, ಅದು ಅವರ ಮೇಲೆ ಕಾಲೂರಿದೆ. ಆನೆ ಕಾಲಿನಡಿ ಸಿಲುಕಿದ್ದ ಪತ್ನಿಯನ್ನು ಅವರ ಪತಿ ಒಂದು ಕೈಯ್ಯಲ್ಲಿ ಮಗುವನ್ನು ಎತ್ತಿಕೊಂಡು, ಮತ್ತೊಂದು ಕೈಯ್ಯಲ್ಲಿ ರಕ್ಷಣೆಗೆ ಮುಂದಾಗಿದ್ದಾರೆ. ಅಷ್ಟರಲ್ಲಾಗಲೇ ಆನೆ ಕಾಲಿನ ಬಾರ ಹಾಗೂ ಮುಖದ ಭಾಗ ನೀರಿನಲ್ಲಿ ಸಂಪೂರ್ಣ ಮುಳುಗಿದ್ದರಿಂದ ಜುನೇಷ ಅವರು ಉಸಿರುಗಟ್ಟಿ ಮೃತಪಟ್ಟಿದ್ದಾರೆ.

ಎರಡೇ ನಿಮಿಷದಲ್ಲಿ ಹಾರಿ ಹೋದ ಪ್ರಾಣಪಕ್ಷಿ: ಚೆನ್ನೈನ ಪಲ್ಲವರಂ ನಿವಾಸಿ ಜೋಯೆಲ್ ಅವರು ರಜೆ ಹಿನ್ನೆಲೆಯಲ್ಲಿ ಪತ್ನಿ ಜೊಯಿಷ ಮತ್ತು ಒಂದು ವರ್ಷದ ಮಗುವಿನೊಂದಿಗೆ ಭಾನುವಾರ ಬೆಳಗ್ಗೆಯಷ್ಟೇ ಮೈಸೂರಿಗೆ ಬಂದಿದ್ದರು. ರೈಲಿನಲ್ಲಿ ಬಂದ ಈ ಕುಟುಂಬ ಮೈಸೂರಲ್ಲಿ ವಸತಿಗೃಹವೊಂದರಲ್ಲಿ ಕೊಠಡಿ ಪಡೆದು, ಕ್ಯಾಬ್‌ನಲ್ಲಿ ಚಾಮುಂಡಿ ಬೆಟ್ಟ ಸೇರಿದಂತೆ ಸ್ಥಳೀಯ ಪ್ರವಾಸಿ ತಾಣ ವೀಕ್ಷಿಸಿದ್ದಾರೆ. ಇಂದು ಬೆಳಗ್ಗೆ ಮೈಸೂರಿಂದ ದುಬಾರೆ ಆನೆ ಕ್ಯಾಂಪ್ ವೀಕ್ಷಿಸಲು ಕ್ಯಾಬ್‌ನಲ್ಲಿ ತೆರಳಿದ್ದಾರೆ. ಕ್ಯಾಂಪ್ ತೆರೆಯುತ್ತಿದ್ದಂತೆ ಟಿಕೆಟ್ ಪಡೆದು ಅರಣ್ಯ ಇಲಾಖೆಯ ಬೋಟ್‌ನಲ್ಲಿ ಆನೆ ಕ್ಯಾಂಪ್ ಪ್ರವೇಶಿಸಿ, ಅಲ್ಲಿನ ಸಾಕಾನೆಗಳನ್ನೆಲ್ಲಾ ವೀಕ್ಷಿಸಿದ್ದಾರೆ. ಈ ವೇಳೆ ಮಾವುತರು, ಕಾವಾಡಿಗರು ಎಲ್ಲಾ ಆನೆಗಳಿಗೆ ತಿಂಡಿ(ಕುಸುರೆ) ನೀಡಿದ ಬಳಿಕ 11 ಗಂಟೆಗೆ ಆನೆಗಳಿಗೆ ನೀರು ಕುಡಿಸಿ, ಸ್ನಾನ ಮಾಡಿಸಲು ಕಾವೇರಿ ನದಿಯ ದಡಕ್ಕೆ ಕರೆದುಕೊಂಡ ಬಂದಿದ್ದಾರೆ.

ಅಷ್ಟರಲ್ಲಾಗಲೇ ಕ್ಯಾಂಪ್‌ನಲ್ಲಿದ್ದ ಪ್ರವಾಸಿಗರು ನದಿಯಲ್ಲಿ ಆನೆಗಳಿಗೆ ಸ್ನಾನ ಮಾಡಿಸುವ ದೃಶ್ಯ ಕಣ್ತುಂಬಿಕೊಳ್ಳಲು ಮುಂದಾಗಿದ್ದಾರೆ. 11.20ರಲ್ಲಿ ಎಲ್ಲಾ ಆನೆಗಳಂತೆ ಸ್ನಾನಕ್ಕೆ ಬಂದಿದ್ದ ಕಂಜನ್ ಏಕಾಏಕಿ ಕೆರಳಿದ್ದಾನೆ. ಸುತ್ತಮುತ್ತ ಪ್ರವಾಸಿಗರು ಮತ್ತು ಇತರೆ ಆನೆಗಳಿದ್ದರೂ ಅದರ ಕೋಪ ಮಾರ್ತಾಂಡ (ಮಕ್ನ) ಆನೆಯ ಮೇಲೆ ಬಿದ್ದಿದೆ. ದಿಢೀರನೆ ಅದರ ಮೇಲೆ ದಾಳಿ ನಡೆಸಿದೆ.

ಈ ವೇಳೆ ಆನೆಗಳ ಮುಂದೆ ಫೋಟೋ ತೆಗೆಸಿಕೊಳ್ಳುತ್ತಿದ್ದ ಜೋಯೆಲ್ ಕುಟುಂಬವಿದ್ದ ಸ್ಥಳಕ್ಕೆ ಮಾರ್ತಾಂಡ ಆನೆ ತಳ್ಳಿದ್ದರಿಂದ ಅದು ಇವರ ಬಳಿ ಬಂದು ಬಿದ್ದಿದೆ. ಈ ಗಾಬರಿಯಲ್ಲಿ ಆಯತಪ್ಪಿ ಜಿನ್ಶು ಕೆಳಕ್ಕೆ ಬಿದ್ದಿದ್ದಾರೆ. ಅಪಾಯದ ಸುಳಿವರಿತ ಜೋಯೆಲ್ ಮಗಳನ್ನು ತಬ್ಬಿಕೊಂಡೇ ಪತ್ನಿಯನ್ನು ರಕ್ಷಿಸಲು ಮುಂದಾಗಿದ್ದಾರೆ. ಮಾವುತರು, ಕಾವಾಡಿಗಳು ಸಹ ಆನೆಗಳ ಕಾಳಗ ತಡೆಯಲು ತೀವ್ರ ಪ್ರಯತ್ನಿಸುತ್ತಿರುವ ಸಂದರ್ಭದಲ್ಲಿಯೇ ಮಕಾಡೆ ಬಿದ್ದಿದ್ದ ಜಿನ್ಶು ಅವರ ಮೇಲೆ ಮಾರ್ತಾಂಡ ಆನೆ ಕಾಲು ಚಾಚಿದೆ. ಇದರಿಂದ ಅವರು ನೀರಿನಲ್ಲಿ ಮುಳುಗಿ, ಆನೆ ಕಾಲಿನ ಬಾರಕ್ಕೆ ಮುಖ ನೆಲಕ್ಕಪ್ಪಳಿಸಿ ಎರಡೇ ನಿಮಿಷದಲ್ಲಿ ಉಸಿರು ಚೆಲ್ಲಿದ್ದಾರೆ.


ಗಾಬರಿಗೊಂಡ ಪ್ರವಾಸಿಗರು: ಆನೆಗಳ ಕಾಳಗದಿಂದ ದಿಗ್ಭ್ರಾಂತರಾದ ಪ್ರವಾಸಿಗರು ಕಿರುಚಾಡಿದ್ದಾರೆ. ಕಂಜನ್ ದಾಳಿಗೆ ತುತ್ತಾಗಿದ್ದ ಮಾರ್ತಾಂಡ ಆನೆ ಘೀಳಿಡಲಾರಂಭಿಸಿದೆ. ಆನೆಗಳ ಭೀಕರ ಕಾಳಗದಿಂದ ಇನ್ನಿತರ ಆನೆಗಳು ನದಿಯಿಂದ ಹೊರಗೆ ದಿಕ್ಕೆಟ್ಟು ಓಡಲಾರಂಭಿಸಿವೆ. ಅಷ್ಟರಲ್ಲಾಗಲೇ ಎಲ್ಲಾ ಆನೆಗಳ ಮಾವುತರು, ಕಾವಾಡಿಗಳು ಸ್ಥಳಕ್ಕೆ ದೌಡಾಯಿಸಿ, ತಮ್ಮ ತಮ್ಮ ಆನೆಗಳನ್ನು ಸುರಕ್ಷಿತವಾಗಿ ಕರೆದೊಯ್ದು ಕಟ್ಟಿ ಹಾಕಿದ್ದಾರೆ. ಅಲ್ಲದೆ, ಕಾದಾಟಕ್ಕಿಳಿದಿದ್ದ ಆನೆಗಳನ್ನು ಬೇರ್ಪಡಿಸಲು ಹರಸಾಹಸ ಪಟ್ಟಿದ್ದಾರೆ. 3–4 ನಿಮಿಷಗಳ ಬಳಿಕ ಎರಡೂ ಆನೆಗಳು ಕಾದಾಟ ಕೊನೆಗೊಳಿಸಿವೆ. ಮಾರ್ತಾಂಡ ಆನೆ ಓಡಿ ಹೋಗಿ ಸುರಕ್ಷಿತ ಸ್ಥಳ ಸೇರಿಕೊಂಡಿದೆ.

ಕಾವಾಡಿ ನಿಯಂತ್ರಣಕ್ಕೆ ಸಿಗದ ಕಂಜನ್: ಕಂಜನ್ ಕಾವಾಡಿ ಕಿರಣ್, ಆನೆಗಳ ಕಾದಾಟದ ವೇಳೆ ಅದನ್ನು ನಿಯಂತ್ರಿಸಲು ಹರಸಾಹಸ ಪಟ್ಟರೂ ಪ್ರಯತ್ನ ಫಲ ನೀಡಲಿಲ್ಲ. ಕಂಜನ್ ರೋಷದಿಂದ ದಾಳಿ ಮಾಡುತ್ತಿದ್ದರೂ ಅಂಕುಶದಿಂದ ಕಂಜನ್ ಮೇಲೆ ಬಲ ಪ್ರಯೋಗಿಸಿ ನಿಯಂತ್ರಿಸಲು ಶ್ರಮಿಸಿದ್ದಾನೆ. ನದಿಯಲ್ಲಿ ಮಲಗಿದ್ದ ಮಾರ್ತಾಂಡಗೆ ತಿವಿಯಲು ಕಂಜನ್ ಮುಂದಿನ ಎರಡೂ ಕಾಲನ್ನು ನೆಲಕ್ಕೆ ಊರಿ, ದೇಹ ಬಾಗಿದ್ದರೂ, ಆನೆ ಮೇಲೆ ಕುಳಿತಿದ್ದ ಕಿರಣ್, ನಿಯಂತ್ರಿಸುವ ಪ್ರಯತ್ನ ಮಾಡಿದ್ದಾನೆ.

ಶಾಸಕರಿಂದ ಸಾಂತ್ವಾನ: ಆನೆ ದಾಳಿ ಸುದ್ದಿ ಕೇಳಿ ಕುಶಾಲನಗರದ ಖಾಸಗಿ ಆಸ್ಪತ್ರೆಗೆ ಆಗಮಿಸಿದ ಶಾಸಕ ಮಂಥರ್‌ಗೌಡ ಪತ್ನಿ ಕಳೆದುಕೊಂಡ ಜೋಯೆಲ್ ಅವರಿಗೆ ಸಾಂತ್ವನ ಹೇಳಿದರು. ಪುತ್ರಿಯ ಆರೋಗ್ಯ ವಿಚಾರಿಸಿದರು. ಈ ವೇಳೆ ಜಿಲ್ಲಾಧಿಕಾರಿ ಸೋಮಶೇಖರ್, ಡಿಸಿಎಫ್ ಅಭಿಷೇಕ್ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

ಗಂಭೀರ ಗಾಯ, ಪ್ರಾಣಾಪಾಯದಿಂದ ಪಾರು

ಮಾರ್ತಾಂಡ ಆನೆಗೆ ದಂತವಿಲ್ಲದ ಕಾರಣ ಹಾಗೂ ಮಲಗಿದ್ದ ಸ್ಥಿತಿಯಲ್ಲಿದ್ದರಿಂದ ಕಂಜನ್ ಆನೆಯ ದಂತ ಮಾರ್ತಾಂಡ ಆನೆ ದೇಹ ಚುಚ್ಚಿ ಗಾಯವಾಗಿದೆ. ಅದರ ಕಿವಿ ಸೀಳಿದೆ. ಪಕ್ಕೆ ತೊಡೆ ಬಳಿ ದಂತ ಚುಚ್ಚಿ ದೊಡ್ಡ ಮಟ್ಟದ ಗಾಯವಾಗಿದ್ದು, ಪಶುವೈದ್ಯ ರಾದ ಡಾ. ಚಿಟ್ಟಿಯಪ್ಪ ಹಾಗೂ ಡಾ. ಮುಜೀಬ್ ಆನೆಗೆ ಚಿಕಿತ್ಸೆ ನೀಡಿದ್ದಾರೆ. ತಕ್ಷಣವೇ ಚಿಕಿತ್ಸೆ ದೊರೆತಿದ್ದರಿಂದ ಮಾರ್ತಾಂಡ ಪ್ರಾಣಾಪಾಯದಿಂದ ಪಾರಾಗಿದೆ.



ಆನೆ ಕಾಲಿನಡಿ ಸಿಲುಕಿದ್ದ ಪತ್ನಿಯನ್ನು ಅವರ ಪತಿ ಒಂದು ಕೈಯ್ಯಲ್ಲಿ ಮಗುವನ್ನು ಎತ್ತಿಕೊಂಡು, ಮತ್ತೊಂದು ಕೈಯ್ಯಲ್ಲಿ ರಕ್ಷಣೆಗೆ ಯತ್ನಿಸುತ್ತಿರುವುದು.

ಜಿನ್ಶು ಮೃತದೇಹ ಚೆನ್ನೈಗೆ ರವಾನೆ

ಮಡಿಕೇರಿ, ಮೇ 18– ದುಬಾರೆ ಸಾಕಾನೆ ಶಿಬಿರದಲ್ಲಿ ದುರಂತದಲ್ಲಿ ಸಾವಿ ಗೀಡಾದ ತಮಿಲ್ನಾಡು ಪ್ರವಾಸಿ ಜಿನ್ಶು ದೇಹವನ್ನು ಚೆನ್ನೈಗೆ ಕೊಂಡೊಯ್ಯಲಾಗಿದೆ. ಕುಶಾಲನಗರದ ಸರಕಾರಿ ಆಸ್ಪತ್ರೆಯಲ್ಲಿ ಮರಣೋತ್ತರ ಪರೀಕ್ಷೆ ಬಳಿಕ ಪತ್ನಿಯ ಕಣ್ಣುಗಳನ್ನು ಆಸ್ಪತ್ರೆಗೆ ದಾನಮಾಡಿ, ಸಂಜೆ 5 ಗಂಟೆಗೆ ಜೋಯಲ್ ಆಂಬುಲೆನ್ಸ್‌ನಲ್ಲಿ ತಮ್ಮ ಪುತ್ರಿಯೊಂದಿಗೆ ದೇಹವನ್ನು ತಮಿಳುನಾಡಿನ ಪಲ್ಲಾವರಂಗೆ ಕೊಂಡೊಯ್ದರು ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಕೆ.ಆರ್. ಬಿಂದುಮಣಿ 'ಮೈಸೂರು ಮಿತ್ರ'ನಿಗೆ ತಿಳಿಸಿದರು.

ಆಕಸ್ಮಿಕ ಘಟನೆ

ಆನೆ ಸ್ನಾನ ಮಾಡಿಸುವ ವೇಳೆ ಕಂಜನ್ ಆನೆ ಮಾರ್ತಾಂಡ ಆನೆ ಮೇಲೆ ದಾಳಿ ಮಾಡಿದೆ. ಈ ವೇಳೆ ಮಾರ್ತಾಂಡ ಆನೆ ಮುಗ್ಗರಿಸಿ ಬಿದ್ದಿದ್ದು, ಅಲ್ಲಿಯೇ ನಿಂತಿದ್ದ ತಮಿಳುನಾಡು ಮೂಲದ ಪ್ರವಾಸಿ ಮಹಿಳೆ ಆಕಸ್ಮಿಕವಾಗಿ ಆನೆ ಕಾಲಿಗೆ ಸುಲುಕಿ ಮೃತಪಟ್ಟಿದ್ದಾರೆ. ಕಂಜನ್ ಆನೆಗೆ ಮದ ಬಂದಿಲ್ಲ. ಆದರೆ ಕೆಲವೊಮ್ಮೆ ಗಂಡಾನೆಗಳ ನಡುವೆ ಇಂತಹ ಕಾದಾಟ ಸಂಭವಿಸುತ್ತವೆ.

– **ಅಭಿಷೇಕ್**, ಡಿಸಿಎಫ್, ಮಡಿಕೇರಿ

ಸಾಕಾನೆ ಶಿಬಿರಗಳಲ್ಲಿ ಪ್ರವಾಸಿಗರ ಸುರಕ್ಷತೆಗಾಗಿ ಎಸ್‌ಓಪಿ ಜಾರಿ

ಮೈಸೂರು, ಮೇ 18(ಎಂಟಿವೈ)– ರಾಜ್ಯದಲ್ಲಿರುವ ಎಲ್ಲ ಸಾಕಾನೆ ಶಿಬಿರಗಳಲ್ಲಿ ಪ್ರವಾಸಿಗರ ಸುರಕ್ಷತೆಗಾಗಿ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಓಪಿ) ರೂಪಿಸುವಂತೆ ಮತ್ತು 100 ಅಡಿ ದೂರದಲ್ಲಿ ನಿಂತು ಆನೆಗಳ ವೀಕ್ಷಿಸಲು ಅವಕಾಶ ನೀಡುವಂತೆ ಅರಣ್ಯ ಸಚಿವ ಈಶ್ವರ ಬಿ ಖಂಡ್ರೆ ಆದೇಶಿಸಿದ್ದಾರೆ.

ದುಬಾರೆ ಸಾಕಾನೆ ಶಿಬಿರದಲ್ಲಿ ಆನೆ ಕಾಳಗದಿಂದ ಪ್ರವಾಸಿ ಮಹಿಳೆ ದುರಂತ ಸಾವಿಗೀಡಾದ ಹಿನ್ನೆಲೆಯಲ್ಲಿ ಅರಣ್ಯ ಇಲಾಖೆಯ ಹಿರಿಯ ಅಧಿಕಾರಿಗಳೊಂದಿಗೆ ಸಭೆ ನಡೆಸಿ, ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿ ಮತ್ತು ಮುಖ್ಯ ವನ್ಯಜೀವಿ ಪರಿಪಾಲಕರಿಗೆ ಎಸ್‌ಓಪಿ ರಚಿಸುವಂತೆ ಸೂಚನೆ ನೀಡಿದ್ದಾರೆ. ಈ ಸಂಬಂಧ ಮಾತನಾಡಿರುವ ಸಚಿವರು, ದುಬಾರೆ ಸಾಕಾನೆ ಶಿಬಿರದಲ್ಲಿ ಎರಡು ಆನೆಗಳ ನಡುವೆ ನಡೆದ ಕಾದಾಟದ ವೇಳೆ ಮಹಿಳೆ ಮೃತಪಟ್ಟಿರುವ ಹಿನ್ನೆಲೆಯಲ್ಲಿ ಪ್ರವಾಸಿಗರ ಸುರಕ್ಷತೆಗೆ ಹೆಚ್ಚಿನ ಆದ್ಯತೆ ನೀಡಲು ಕ್ರಮ ಕೈಗೊಳ್ಳಲಾಗುವುದು. ಪರಿಸರ ಪ್ರವಾಸೋದ್ಯಮದ ಚಾರಣಪಥಗಳಲ್ಲಿ ಚಾರಣಿಗರ, ಪ್ರವಾಸಿಗರ ಸುರಕ್ಷತೆ ದೃಷ್ಟಿಯಿಂದ ಪ್ರಮಾಣಿತ ಕಾರ್ಯಾಚರಣೆ ವಿಧಾನ (ಎಸ್‌ಓಪಿ) ರೂಪಿಸಲಾಗಿದ್ದು, ಈ ಎಸ್‌ಓಪಿ ಜಾರಿ ಖಚಿತಪಡಿಸಿಕೊಳ್ಳುವವರೆಗೆ ಚಾರಣಪಥಗಳ ಕಾರ್ಯಾಚರಣೆಯನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಲು ಈಗಾಗಲೇ ಸೂಚಿಸಲಾಗಿದೆ. ಅದೇ ಪ್ರಕಾರವಾಗಿ ಸಾಕಾನೆ ಶಿಬಿರಗಳಿಗೆ ಬರುವ ಪ್ರವಾಸಿಗರ ಸುರಕ್ಷತೆಯ ದೃಷ್ಟಿಯಿಂದ ಎಸ್‌ಓಪಿ ರೂಪಿಸಲು ನಿರ್ದೇಶನ ನೀಡಲಾಗಿದೆ ಎಂದರು.



ಈಶ್ವರ ಬಿ ಖಂಡ್ರೆ

ರಾಜ್ಯದಲ್ಲಿರುವ ಎಲ್ಲ ಸಾಕಾನೆ ಶಿಬಿರದಲ್ಲಿ ನಾಳೆ(ಮೇ.19)ಯಿಂದಲೇ ಪ್ರವಾಸಿಗರು ಆನೆಯ ಬಳಿ ಹೋಗದಂತೆ, ಕನಿಷ್ಠ 100 ಅಡಿ ದೂರದಲ್ಲಿ ನಿಂತು ಆನೆ ಮೈತೊಳೆಯುವುದನ್ನು ವೀಕ್ಷಿಸುವಂತೆ ಹಾಗೂ ಆನೆಗಳ ಬಳಿ ಸೆಲ್ಫಿ, ಫೋಟೋ ತೆಗೆಸಿಕೊಳ್ಳಲು, ಮೈತೊಳೆಯಲು, ಬಾಳೆ ಹಣ್ಣು, ಬೆಲ್ಲ, ಕಬ್ಬು ಇತ್ಯಾದಿ ಯಾವುದೇ ಆಹಾರವನ್ನು ಪ್ರವಾಸಿಗರ ಕೈಯಿಂದ ತಿನ್ನಿಸದಂತೆ ಆದೇಶ ಹೊರಡಿಸಲೂ ಸೂಚಿಸಿರುವುದಾಗಿ ತಿಳಿಸಿದ್ದಾರೆ.

ಸೌಮ್ಯ ಸ್ವಭಾವಿ ಕಂಜನ್

ಇಂದು ದಾಳಿ ನಡೆಸಿದ ಕಂಜನ್ ಸೌಮ್ಯ ಸ್ವಭಾವಿ. ಮಾನವ ಸಂಘರ್ಷಕ್ಕೆ ಒಳಗಾಗಿದ್ದ ಈ ಆನೆಯನ್ನು 2014 ರಲ್ಲಿ ಹಾಸನದ ಯಸಳೂರು ವಲಯದಲ್ಲಿ ಸೆರೆ ಹಿಡಿಯಲಾಗಿತ್ತು. ದುಬಾರೆ ಕ್ಯಾಂಪ್‌ನಲ್ಲಿ ಪಳಗಿದ ನಂತರ ಇದಕ್ಕೆ ಕಂಜನ್ ಎಂದು ಹೆಸರಿಡಲಾಗಿತ್ತು. ತರಬೇತಿ ವೇಳೆ ಸೌಮ್ಯ ಸ್ವಭಾವ ರೂಡಿಸಿಕೊಂಡಿತ್ತು. ದಸರಾ ಮಹೋತ್ಸವದಲ್ಲಿ ಮೂರು ವರ್ಷ ಪಾಲ್ಗೊಂಡಿರುವ ಅನುಭವ ಹೊಂದಿದ್ದು, ಭರವಸೆ ಮೂಡಿಸಿತ್ತು.

ಎರಡನೇ ಬಾರಿ ಸೆರೆ ಹಿಡಿದ ಮಕ್ಣ

ದಾಳಿಗೆ ತುತ್ತಾದ ಮಕ್ಣ ಆನೆಯೂ ಹಾಸನದ ಸಕಲೇಶಪುರದ ಸುತ್ತಮುತ್ತ ಸಂಘರ್ಷಕ್ಕೆ ತುತ್ತಾಗಿದ್ದ ಆನೆಯಾಗಿದ್ದು, 2021ರಲ್ಲಿ ಸೆರೆ ಹಿಡಿದು ರೇಡಿಯೋ ಕಾಲರ್ ಅಳವಡಿಸಿ ಬಂಡೀಪುರ ಅಭಯಾರಣ್ಯದಲ್ಲಿ ಬಿಡುಗಡೆ ಮಾಡಲಾಗಿತ್ತು. ಆದರೆ, 15 ದಿನದಲ್ಲಿ ಬಂಡೀಪುರದಿಂದ ಹಾಸನದ ಸಕಲೇಶಪುರಕ್ಕೆ ಬಂದಿತ್ತು. ಪಡಿತರ ಅಂಗಡಿಗೆ ನುಗ್ಗಿ ಅಕ್ಕಿ ತಿನ್ನುವುದನ್ನೇ ಕಾಯಕ ಮಾಡಿಕೊಂಡಿತ್ತು. ಈ ಹಿನ್ನೆಲೆಯಲ್ಲಿ ಎರಡನೇ ಬಾರಿಗೆ ಅದನ್ನು ಸೆರೆ ಹಿಡಿದು, ದುಬಾರೆ ಕ್ಯಾಂಪ್‌ನಲ್ಲಿ ಪಳಗಿಸಲಾಗಿದೆ. ಮಕ್ಣ ಆನೆಗೆ ಹೆಚ್ಚಿನ ಕೋಪವಿದ್ದು, ಅದು ಎದ್ದು ನಿಂತಿದ್ದರೆ ಘೋರ ಕಾಳಗವೇ ನಡೆಯುತ್ತಿತ್ತು. ಆದರೆ, ಅದು ಮಲಗಿದ್ದ ಸ್ಥಿತಿಯಲ್ಲಿದ್ದರಿಂದ ಕಂಜನ್ ಆನೆ ಮೇಲುಗೈ ಸಾಧಿಸಿದೆ. ಈ ಕಾಳಗಕ್ಕೆ ಮಕ್ಣ ಆನೆ ಮೇಲೆ ಇದ್ದ ಜಿದ್ದಾದರೂ ಏನು ಎಂದು ಮಾವುತರು ಚಿಂತಿತರಾಗಿದ್ದಾರೆ.

ದುಬಾರೆಯಲ್ಲಿ ಸುರಕ್ಷತೆಯೇ ಇಲ್ಲ: ಪ್ರವಾಸಿಗರ ಆಕ್ರೋಶ

ಕುಶಾಲನಗರ, ಮೇ 18– ತಾಲೂಕಿನ ಪ್ರಮುಖ ಪ್ರವಾಸಿ ತಾಣ ದುಬಾರೆ ಸಾಕಾನೆ ಶಿಬಿರದ ವೀಕ್ಷಣೆಗೆ ದಿನನಿತ್ಯ ಸಾವಿರಾರು ಸಂಖ್ಯೆಯಲ್ಲಿ ಭೇಟಿ ನೀಡುವ ಪ್ರವಾಸಿಗರಿಗೆ ಸುರಕ್ಷತೆಯೇ ಇಲ್ಲವಾಗಿದೆ ಎಂದು ಅರಣ್ಯ ಇಲಾಖೆ ವಿರುದ್ಧ ಪ್ರವಾಸಿಗರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಆನೆಗಳ ಸ್ನಾನ ಮಾಡಿಸುವ ಸ್ಥಳದಲ್ಲಿ ಮಾವುತರು, ಕಾವಾಡಿಗಳು ಹೊರತುಪಡಿಸಿ ಅರಣ್ಯ ಇಲಾಖೆಯ ಒಬ್ಬ ನೌಕರನೂ ಅಲ್ಲಿರುವುದಿಲ್ಲ. ಪ್ರವಾಸಿಗರು ಆನೆಗಳತ್ತ ಸುಳಿಯದಂತೆ ಸೂಕ್ತ ರಕ್ಷಣಾ ವ್ಯವಸ್ಥೆಯನ್ನೂ ಕಲ್ಪಿಸಿಲ್ಲ. ಸೂಕ್ತ ವ್ಯವಸ್ಥೆ ಕಲ್ಪಿಸಿದ್ದರೆ ಇಂದಿನ ಅನಾಹುತವನ್ನು ತಡೆಯಬಹುದಿತ್ತು ಎಂದು ಪ್ರವಾಸಿಗರೊಬ್ಬರು 'ಮೈಸೂರು ಮಿತ್ರ'ನಲ್ಲಿ ಅಳಲು ತೋಡಿ ಕೊಂಡಿದ್ದಾರೆ. ಪ್ರವಾಸಿಗರು ಆನೆಗಳು ಸ್ನಾನ ಮಾಡುವಾಗ ನೀರನ್ನು ಎರಚಿಕೊಳ್ಳುವುದನ್ನು ನೋಡಲು ಮಹಿಳೆಯರು, ಮಕ್ಕಳು ಕುತೂಹಲದಿಂದ ಹೋಗುತ್ತಾರೆ. ಆದರೆ ಆನೆಗಳತ್ತ ಬಾರದಂತೆ ಯಾರೂ ಎಚ್ಚರಿಕೆ ನೀಡುವುದೂ ಇಲ್ಲ, ಪ್ರವಾಸಿಗರು ಸೆಲ್ಫಿ ತೆಗೆದುಕೊಳ್ಳುತ್ತಿದ್ದರೂ ಯಾರೂ ಅದನ್ನು ತಡೆಯುವು ದಿಲ್ಲ ಎಂದು ಬೆಂಗಳೂರಿನ ಪ್ರವಾಸಿಗರೊಬ್ಬರು ತಮಗಾದ ಅನುಭವ ಹೇಳಿಕೊಂಡಿದ್ದಾರೆ.

ಇಂತಹ ಘಟನೆಗಳು ನಡೆದಾಗ ಮಾತ್ರ ಎಚ್ಚೆತ್ತುಕೊಂಡು ಆನೆಗಳತ್ತ ಯಾರೂ ಹೋಗಬಾರದು ಯಾವುದೇ ರೀತಿಯ ಫೋಟೊಗಳನ್ನು ತೆಗೆದುಕೊಳ್ಳಬಾರದು ಎಂದು ನಿಯಮ ವಿಧಿಸುವ ಸರ್ಕಾರ ಇದೇ ರೀತಿಯ ನಿಯಮಗಳನ್ನು ಮೊದಲೇ ಏಕೆ ಜಾರಿಗೆ ತರುವುದಿಲ್ಲ ಎಂದು ಆಕ್ರೋಶದಿಂದ ಪ್ರಶ್ನಿಸಿದರು.

ರಕ್ಷಣೆಗೆ ಮುಂದಾಗಲಿಲ್ಲ : ಸಾಕಾನೆ ಕಾದಾಟ ನಡೆದು ತನ್ನ ಪತ್ನಿ ಆನೆ ಕೆಳಗೆ ಸಿಲುಕಿ ಕೊಂಡಿದ್ದರೂ ಯಾರೂ ಆಕೆಯ ರಕ್ಷಣೆಗೆ ಮುಂದಾಗಲಿಲ್ಲ ಕೊನೆಗೆ ನಾನೇ ಪತ್ನಿಯನ್ನು ಆನೆಯಿಂದ ಬೇರ್ಪಡಿಸಿ, ನದಿಯಿಂದ ಎಳೆದುಕೊಂಡೆ ಎಂದು ಜೋಯೆಲ್ ದುಃಖದಿಂದಲೇ ಅವ್ಯವಸ್ಥೆ ತೆರೆದಿಟ್ಟಿದ್ದಾರೆ

ಸಾಕಾನೆ ಶಿಬಿರದಲ್ಲಿ ಆನೆಗಳ ಕಾದಾಟ ನಡೆಯುತ್ತಿರುತ್ತದೆ. ಅಲ್ಲದೆ ಸಾಕಾನೆಗಳು ಮಾವುತರ ಮೇಲೆ ದಾಳಿ ಮಾಡಿ ಗಾಯಗೊಳಿಸಿರುವ ಘಟನೆಗಳೂ ನಡೆದಿವೆ. ಆದರೆ ಶಿಬಿರದಲ್ಲಿ ಯಾವುದೇ ಆರೋಗ್ಯ ಘಟಕ ಇಲ್ಲ. ಪ್ರಥಮ ಚಿಕಿತ್ಸೆ ಕೊಡಿಸಲು ಸಾಧ್ಯವಿಲ್ಲದಂಥ ಪರಿಸ್ಥಿತಿ ಇದೆ. ಗಾಯಾಳು ಅನ್ನು ಕೂಡಲೇ ಆಸ್ಪತ್ರೆ ಸಾಗಿಸಲು ಪ್ರತ್ಯೇಕ ವಾಹನ ಸೌಲಭ್ಯ ಕೂಡ ಇಲ್ಲ. ಏನೇ ಅನಾಹುತ ನಡೆದರೂ ಅರಣ್ಯ ಸಿಬ್ಬಂದಿಗಳ ವಾಹನವನ್ನೇ ಅವಲಂಬಿಸಬೇಕಾಗಿದೆ ಎಂದು ಪ್ರವಾಸಿಗರು ದೂರಿದ್ದಾರೆ.

ಆಹಾರ ಉತ್ಪಾದನೆ ಕುಂಠಿತ ಆತಂಕ

ಭೂಮಿಗೆ ನೀರು ಹರಿಸಿ, ಅವರು ಭತ್ತ, ಕಬ್ಬು ಸೇರಿದಂತೆ ಯಾವುದೇ ಬೆಳೆ ಬೆಳೆಯಲು ಅವಕಾಶ ಮಾಡಿಕೊಡುವ ಭರವಸೆ ನೀಡಿದರು. ಜಾಗತಿಕ ಮಟ್ಟದಲ್ಲಿ ಮಧ್ಯಪ್ರಾಚ್ಯದ ಬಿಕ್ಕಟ್ಟಿನಿಂದ ರಸಗೊಬ್ಬರ ಉತ್ಪಾದನೆಗೆ ಬೇಕಾದ ಕಚ್ಚಾವಸ್ತುಗಳು ದೊರೆಯದ ಕಾರಣ ರಾಷ್ಟ್ರದಲ್ಲಿ ರಸಗೊಬ್ಬರ ಉತ್ಪಾದನೆಗೂ ತೊಡಕಾಗಿದೆ. ಅಷ್ಟೇ ಅಲ್ಲ ರಸಗೊಬ್ಬರ ಆಮದಿನಲ್ಲಿ ಅಸ್ಥಿರತೆ ಉಂಟಾಗುತ್ತಿದ್ದು, ಇದರಿಂದ ನಮಗೆ ಮುಂಗಾರು ಹಂಗಾಮಿನಲ್ಲಿ ರಸಗೊಬ್ಬರ ಪೂರೈಕೆ ಮೇಲೆ ಭಾರೀ ಪರಿಣಾಮ ಬೀರಲಿದೆ.

ರಸಗೊಬ್ಬರಗಳಿಗೆ ಪರ್ಯಾಯವಾಗಿ ರೈತರು ಜೈವಿಕ, ಸಾವಯವ ರಸಗೊಬ್ಬರ, ಹಸಿರೆಲೆ ಗೊಬ್ಬರದ ಕಡೆ ಹೆಚ್ಚು ಒತ್ತು ಕೊಡಬೇಕು ಎಂದು ಮನವಿ ಮಾಡಿದರು.

ರಾಜಾಶ್ರಯದಲ್ಲಿದ್ದ ಅತ್ಯಂತ ವ್ಯವಸ್ಥಿತ 'ಮೈಸೂರು' ಈಗೇಕೆ ಹೀಗೆ!!

ಅಧಿಕಾರಿ ವರ್ಗದ 'ಅಭಿವೃದ್ಧಿ ಐಲಾಟ; ಜನರಿಗೆ ಇದೊಂಥರಾ 'ಬಯಲಾಟ'

- ಜನರ ನಿರೀಕ್ಷೆಗೆ ಪೂರಕವಾಗಿ ರೂಪುಗೊಳ್ಳದೇ ಬಳಕೆಗೆ ಬಾರದ ಯೋಜನೆಗಳು ಅದೆಷ್ಟೊ
- ರಸ್ತೆಬದಿ, ಖಾಲಿ ನಿವೇಶನದಲ್ಲಿ ತ್ಯಾಜ್ಯದ ರಾಶಿ
- ಸವಾರರಿಗೆ ಸಂಕಷ್ಟ ತರುತ್ತಿರುವ ರಸ್ತೆ ಗುಂಡಿ
- ಫುಟ್‌ಪಾತ್ ಅತಿಕ್ರಮಣದಿಂದ ಪರದಾಟ
- ಬಿಡಾಡಿ ದನಗಳ ನಡುವೆ ಸವಾರರು ಹೈರಾಣು





ಮೈಸೂರಿನ ಬಲ್ಲಾಳ್ ವೃತ್ತದ ಸಮೀಪ ಬೀದಿಬದಿ ವ್ಯಾಪಾರಿಗಳಿಗೆ ಹಂಚಿಕೆಯಾಗದೇ ಇರುವ ಶೆಲ್ಟರ್. ಅದರ ಪಕ್ಕದಲ್ಲಿ ತರಾವರಿ ತ್ಯಾಜ್ಯದ ರಾಶಿಯನ್ನು ಬಲಚಿತ್ರದಲ್ಲಿ ಕಾಣಬಹುದು.



ಕೆಆರ್ ಮೊಹಲ್ಲಾದ ದಿವಾನ್ಸ್ ರಸ್ತೆಬದಿಯಲ್ಲಿ ಮಳೆ ನೀರು ಚರಂಡಿ ನಿರ್ಮಿಸಲು ಹಳ್ಳ ತೆಗೆದು ಅರೆಬರೆ ಕಾಮಗಾರಿ ಮಾಡಿ ಹಾಗೆಯೇ ಬಿಟ್ಟಿರುವುದು.

ಮೈಸೂರು,ಮೇ 18(ಪಿಎಂ)– ರಾಜ್ಯದ ಸಾಂಸ್ಕೃತಿಕ ರಾಜಧಾನಿ ಎಂದೇ ಹೆಸರಾಗಿರುವ ಮೈಸೂರು, ರಾಜಾಶ್ರಯದಲ್ಲಿ ಅತ್ಯಂತ ವ್ಯವಸ್ಥಿತವಾಗಿ ರೂಪುಗೊಂಡ ನಗರ. ಆದರೆ ಪ್ರಸ್ತುತದಲ್ಲಿ ಸ್ಥಳೀಯ ಆಡಳಿತದ ನಿರ್ಲಕ್ಷ್ಯದಿಂದ ಅವ್ಯವಸ್ಥೆಯತ್ತ ಮುಖ ಮಾಡುತ್ತಿದೆಯೇ ಎನ್ನುವ ಪ್ರಶ್ನೆ ಪ್ರಜ್ಞಾವಂತ ನಾಗರಿಕರಿಂದ ವ್ಯಕ್ತವಾಗುತ್ತಿದೆ.

ಇಂತಹ ದುಸ್ಥಿತಿಯಲ್ಲಿ 'ಗ್ರೇಟರ್ ಮೈಸೂರು' ಸಂಬಂಧ ಕಳೆದ ಜನವರಿಯಲ್ಲಿ ರಾಜ್ಯ ಸರ್ಕಾರ ಅಧಿಸೂಚನೆ ಹೊರಡಿಸಿದೆ. ಆ ಮೂಲಕ ನಗರದ ವ್ಯಾಪ್ತಿ ವಿಸ್ತರಿಸುತ್ತಿದ್ದು, ಈಗಿರುವ ವ್ಯಾಪ್ತಿಗೆ ಸಮರ್ಪಕ ಮೂಲಸೌಲಭ್ಯ ಕಲ್ಪಿಸಲು ಸಾಧ್ಯವಾಗದೇ ಇರುವಾಗ ಇನ್ನೂ ವಿಸ್ತರಿಸಿ ಸೌಲಭ್ಯ ಕಲ್ಪಿಸಲು ಸಾಧ್ಯವೇ ಎಂಬ ಅನುಮಾನ ನಾಗರಿಕರನ್ನು ಕಾಡುತ್ತಿದೆ.

ನಗರದ ಹೃದಯಭಾಗದಲ್ಲೇ ರಸ್ತೆಗಳು ಗುಂಡಿಮಯ. ಆ ಗುಂಡಿಗಳಿಗೆ ಒಂದಿಷ್ಟು ಮಣ್ಣಾದರೂ ಹಾಕಿ ಸಮತಟ್ಟು ಮಾಡುವ ಗೋಜಿಗೆ ಮೈಸೂರು ಮಹಾನಗರಪಾಲಿಕೆ ಮುಂದಾಗುವುದಿಲ್ಲ ಎಂಬುದಕ್ಕೆ ನಗರದ ಸಾಕಷ್ಟು ರಸ್ತೆಗಳು ನಿದರ್ಶನವಾಗುತ್ತವೆ. ಸಬ್ ಅರ್ಬನ್ ಬಸ್ ನಿಲ್ದಾಣದ ಎದುರೇ ರಸ್ತೆಯಲ್ಲಿ ದೊಡ್ಡ ಹಳ್ಳ ಇದೆ. ನಿತ್ಯ ವಾಹನ ಹಾಗೂ ಜನದಟ್ಟಣೆ ಹೆಚ್ಚಿರುವ ಇಲ್ಲಿಯಾದರೂ ಗುಂಡಿ ಮುಚ್ಚಬಾರದೇ ಎನ್ನುತ್ತಾರೆ ಜನ. ನಗರದ ಸಾಕಷ್ಟು ರಸ್ತೆಗಳಲ್ಲಿ ಸವಾರರು ಗುಂಡಿಗಳ ಹಾದು ಹೋಗುವುದು ಸವಾಲಾಗಿ ಪರಿಣಮಿಸಿದೆ.

ನಾಗರಿಕರಿಗೆ ನಿಜಕ್ಕೂ ಯಾವ ಸೌಲಭ್ಯ ಅಗತ್ಯವೆಂಬ ಆಲೋಚನೆ ಇಲ್ಲದೆ ಅನುಷ್ಠಾನಗೊಳಿಸಿರುವ ಯೋಜನೆಗಳು ಅಪ್ರಯೋಜಕವಾಗಿರುವುದು ಸುಳ್ಳಲ್ಲ. ಇದಕ್ಕೆ ಸೈಕಲ್ ಲೇನ್, ಬೀದಿಬದಿ ವ್ಯಾಪಾರಿಗಳಿಗಾಗಿ ನಿರ್ಮಿಸಿರುವ ಶೆಲ್ಟರ್ ಸೇರಿದಂತೆ ಅನೇಕ ಉದಾಹರಣೆಗಳು ಕಣ್ಮುಂದೆಯೇ ಇವೆ. ಜನತೆ ನಿರೀಕ್ಷೆಗೆ ಅನುಗುಣವಾಗಿ ಯೋಜನೆಗಳು ರೂಪುಗೊಳ್ಳದೆ ಇರುವುದೇ ಅವು ಪ್ರಯೋಜನಕ್ಕೆ ಬಾರದೇ ಇರಲು ಕಾರಣ ಎಂಬುದು ಪ್ರಜ್ಞಾವಂತ ನಾಗರಿಕರ ಅಭಿಪ್ರಾಯವಾಗಿದೆ.

ರೀತಿ ನೀತಿ ಇಲ್ಲದ ಸಿಗ್ನಲ್ ಲೈಟ್: ಇನ್ನು ಇತ್ತೀಚೆಗೆ ಅಳವಡಿಸಿದ ಹೆಚ್ಚುವರಿ ಟ್ರಾಫಿಕ್ ಸಿಗ್ನಲ್ ಲೈಟ್‌ಗಳಿಗೆ ಜನರಿಂದ ಆಕ್ಷೇಪವೇ ಹೆಚ್ಚು. ಈ ರೀತಿಯ ಸಿಗ್ನಲ್ ಲೈಟ್ ಅಳವಡಿಕೆ ಅವೈಜ್ಞಾನಿಕ ಎಂಬ ದೂರು ನಾಗರಿಕರಿಂದ ಹೆಚ್ಚಾಗಿಯೇ ಕೇಳಿಬರುತ್ತಿದೆ. ಈ ಹೆಚ್ಚುವರಿ ಸಿಗ್ನಲ್ ಲೈಟ್ ವಿರುದ್ಧ ಆರಂಭದಲ್ಲಿ ಜನರಿಂದ ಆಕ್ರೋಶ ಭಾರಿಯಾಗಿಯೇ ವ್ಯಕ್ತವಾಗಿತ್ತು. ಇದೀಗ ಹೇಗೋ ಹೊಂದಿಕೊಂಡಂತೆ ಕಾಣುತ್ತಿದೆ. ಈ ಹೆಚ್ಚುವರಿ ಸಿಗ್ನಲ್ ಲೈಟ್‌ಗಳ ಅಳವಡಿಕೆಯಿಂದಲೇ ಈಗ ಸಂಚಾರ ದಟ್ಟಣೆ ಹೆಚ್ಚಾಗುತ್ತಿದೆ ಎಂಬ ದೂರು ಕೇಳಿಬರುತ್ತಿದೆ.

ಇನ್ನು ಮೈಸೂರು ನಗರದಲ್ಲಿ ಫುಟ್‌ಪಾತ್ ಒತ್ತುವರಿ ದೊಡ್ಡ ಸಮಸ್ಯೆಯಾಗಿ ಪರಿಣಮಿಸಿದೆ. ಹೀಗಾಗಿ ಪಾದಚಾರಿಗಳು ರಸ್ತೆಗಿಳಿದು ಸಾಗುವ ಸನ್ನಿವೇಶ ಬಹುತೇಕ ಕಡೆ ಸಾಮಾನ್ಯವಾಗಿದೆ. ಇಂತಹ ಅಸುರಕ್ಷತೆಯ ಕಾರಣಕ್ಕೆ ಆಗಾಗ್ಗೆ ಸಣ್ಣಪುಟ್ಟ ಅಪಘಾತಗಳು ಸಂಭವಿಸುತ್ತಲೇ ಇವೆ. ಸಂಪೂರ್ಣವಾಗಿ ಫುಟ್‌ಪಾತ್ ಒತ್ತುವರಿ ತೆರವುಗೊಳಿಸಲು ಪಾಲಿಕೆಯಿಂದ ಸಾಧ್ಯವಾಗಿಲ್ಲ. ಜೊತೆಗೆ ಅದೆಷ್ಟೊ ರಸ್ತೆಗಳಲ್ಲಿ ಫುಟ್‌ಪಾತ್ ವ್ಯವಸ್ಥೆಯೇ ಇಲ್ಲ.

ಪೌರಕಾರ್ಮಿಕರ ಪರಿಶ್ರಮ ಅರಿಯದ ಅನಾಗರಿಕರು: ಮತ್ತೊಂದೆಡೆ ನಗರದಲ್ಲಿ ಸಚ್ಛತೆ ಕಾಯ್ದುಕೊಳ್ಳಲು ಸಾಧ್ಯವಾಗುತ್ತಿಲ್ಲ. ಪೌರಕಾರ್ಮಿಕರ ಪರಿಶ್ರಮ ಅರಿಯದ ಅನಾಗರಿಕರು ಎಲ್ಲೆಂದರಲ್ಲಿ ಕಸ ಎಸೆಯುವ ಛಾಳಿ ರೂಢಿಸಿಕೊಂಡಿದ್ದಾರೆ. ರಸ್ತೆಬದಿ, ಖಾಲಿ ನಿವೇಶನ, ಮಳೆ ನೀರಿನ ಚರಂಡಿ ಸೇರಿದಂತೆ ಎಲ್ಲೆಂದರಲ್ಲಿ ಕಸ ಎಸೆದು ಹೋಗುವ ಅನಾಗರಿಕರು, ಪೌರ ಕಾರ್ಮಿಕರ ಪರಿಶ್ರಮವನ್ನೇ ಅಣಕಿಸುತ್ತಿದ್ದಾರೆ. ಒಂದೆಡೆ ನಗರದ ಸ್ವಚ್ಛತೆ ಕಾಪಾಡುವಲ್ಲಿ ಸ್ಥಳೀಯ ಆಡಳಿತಕ್ಕೆ ಬದ್ಧತೆ ಸಾಲದಾದರೆ, ಮತ್ತೊಂದೆಡೆ ಎಲ್ಲೆಂದರಲ್ಲಿ ತ್ಯಾಜ್ಯ ಸುರಿಯುವ ಕಿಡಿಗೇಡಿ ಮನಸ್ಥಿತಿಯ ಜನ'ರಿಂದ ನಗರದ ಸ್ವಚ್ಛತೆಯನ್ನು ಕನಿಷ್ಠ ಪ್ರಮಾಣದಲ್ಲಿಯಾದರೂ ಕಾಯ್ದುಕೊಳ್ಳಲಾಗುತ್ತಿಲ್ಲ ಎನ್ನುತ್ತಾರೆ ಕಳಕಳಿಯುಳ್ಳ ನಾಗರಿಕರು.

ಇದೊಂದು ಸ್ಯಾಂಪಲ್ ಅಷ್ಟೇ!: ಮೈಸೂರಿನ ಬಲ್ಲಾಳ್ ವೃತ್ತದ ಸಮೀಪ ಬೀದಿಬದಿ ವ್ಯಾಪಾರಿಗಳಿಗಾಗಿ ಪಾಲಿಕೆ ನಿರ್ಮಿಸಿರುವ ಶೆಲ್ಟರ್ ಮಗ್ಗುಲಲ್ಲಿ ತರಹೇವಾರಿ ತ್ಯಾಜ್ಯ ಹಾಕಲಾಗಿದೆ. ಇಲ್ಲಿನ ತ್ಯಾಜ್ಯದಲ್ಲಿ ವಿಷಕಾರಿ ಪ್ಲಾಸ್ಟಿಕ್ ಕವರ್ ಹೆಚ್ಚಿನ ಪ್ರಮಾಣದಲ್ಲಿದ್ದು, ವಿವಿಧ ತ್ಯಾಜ್ಯದ ಮಿಶ್ರಣದಿಂದಾಗಿ ಇಲ್ಲಿ ಸಾಗುವವರಿಗೆ ದುರ್ವಾಸನೆ ಮೂಗಿಗೆ ಬಡಿಯಲಿದೆ. ಅನೈರ್ಮಲ್ಯಕ್ಕೆ ಇದೊಂದು ಸ್ಯಾಂಪಲ್ ಅಷ್ಟೇ. ನಗರದ ವಿವಿಧ ಭಾಗಗಳಲ್ಲಿ ಇಂತಹ ತ್ಯಾಜ್ಯದ ತಾಣಗಳು ಬೇಕಾದಷ್ಟಿವೆ.

ಬಳಕೆಗೆ ಬಾರದ ಶೆಲ್ಟರ್: ವರ್ಷಗಳೇ ಉರುಳುತ್ತಿದ್ದರೂ ಬಳಕೆಗೇ ಬಾರದ ಸ್ಥಿತಿಯಲ್ಲಿದೆ ಬೀದಿಬದಿ ವ್ಯಾಪಾರಿಗಳಿಗಾಗಿ ಬಲ್ಲಾಳ್ ವೃತ್ತದ ಸಮೀಪ ಪಾಲಿಕೆ ನಿರ್ಮಿಸಿರುವ ಶೆಲ್ಟರ್. ವೇದಾಂತ ಹೆಮ್ಮಿಗೆ ವೃತ್ತಕ್ಕೆ ಹೊಂದಿಕೊಂಡಂತೆ ನ್ಯೂ ಕಾಂತರಾಜ್ ಅರಸ್ ರಸ್ತೆ ಬದಿಯಲ್ಲಿ ಈ ಶೆಲ್ಟರ್ ನಿರ್ಮಿಸಿದ್ದು, ಇದಕ್ಕಾಗಿ ಡೇ ನಲ್ಮ್ ಯೋಜನೆಯಡಿ ಅಂದಾಜು 69 ಲಕ್ಷ ರೂ. ವೆಚ್ಚ ಮಾಡಲಾಗಿದೆ. ದುರಂತವೆಂದರೆ ವರ್ಷಗಳೇ ಉರುಳುತ್ತಿದ್ದರೂ ಯಾವುದೇ ಬೀದಿಬದಿ ವ್ಯಾಪಾರಿಗಳಿಗೆ ಇಲ್ಲಿ ಸ್ಥಳಾವಕಾಶ ಹಂಚಿಕೆಯನ್ನೇ ಮಾಡಿಲ್ಲ. ಇದೇ ಮಾದರಿಯಲ್ಲಿ ನಗರದಲ್ಲಿ ಅದೆಷ್ಟೋ ಸೌಲಭ್ಯಗಳು ಉಪಯೋಗಕ್ಕೆ ಬಾರದಾಗಿವೆ. ಸ್ಥಳೀಯ ಆಡಳಿತದ ನಿರ್ಲಕ್ಷ್ಯಕ್ಕೆ ಇದೊಂದು ಉದಾಹರಣೆಯಷ್ಟೇ.

ಬಿಡಾಡಿ ದನಗಳು: ಮೈಸೂರಿನ ಪ್ರಮುಖ ರಸ್ತೆಗಳಲ್ಲೇ ಬಿಡಾಡಿ ದನಗಳು ಅಡ್ಡಾಡುವುದು ಈಗ ಸಾಮಾನ್ಯವಾಗಿಬಿಟ್ಟಿದೆ. ಇವುಗಳನ್ನು ನಿಯಂತ್ರಿಸಲು ಪಾಲಿಕೆಯಿಂದ ಸಾಧ್ಯವಾಗದ ಪರಿಣಾಮ ವಾಹನ ಸವಾರರು ಅವುಗಳ ನಡುವೆ ಸಾಗುವುದು ಒಂದು ರೀತಿ ಸಾಹಸವೇ ಆಗಿದೆ. ರಸ್ತೆಮಧ್ಯೆ, ಫುಟ್‌ಪಾತ್‌ನಲ್ಲಿ ಬಿಡಾಡಿ ದನಗಳು ವಿಶ್ರಾಂತಿಗೆ ಜಾರುತ್ತಿದ್ದು, ಅವುಗಳ ನಡುವೆ ಅತ್ಯಂತ ಎಚ್ಚರಿಕೆಯಿಂದ ಸಾಗಬೇಕಿದೆ. ಒಮ್ಮೊಮ್ಮೆ ಅವುಗಳು ಕಾದಾಟ ಸಾರ್ವಜನಿಕರಿಗೆ ಪ್ರಾಣ ಸಂಕಟವಾಗಿ ಪರಿಣಮಿಸುತ್ತಿದೆ.

ಅರೆಬರೆ ಕಾಮಗಾರಿ

ಕೆಆರ್ ಮೊಹಲ್ಲಾದ ದಿವಾನ್ಸ್ ರಸ್ತೆಬದಿಯಲ್ಲಿ ಮಳೆ ನೀರು ಚರಂಡಿ ನಿರ್ಮಿಸಲು ಹಳ್ಳ ತೆಗೆದು ಅರೆಬರೆ ಕಾಮಗಾರಿ ಮಾಡಿ ಹಾಗೆಯೇ ಬಿಟ್ಟಿದ್ದು, ಕಾಮಗಾರಿ ಕಾರಣಕ್ಕೆ ತೆಗೆದಿರುವ ಗುಂಡಿಯಲ್ಲಿ ಆಳುದ್ದ ನೀರು ತುಂಬಿ ತ್ಯಾಜ್ಯಗಳು ಸೇರಿ ಗಬ್ಬು ನಾರುವಂತಾಗಿದೆ. ಇಂತಹ ಅರೆಬರೆ ಕಾಮಗಾರಿಗಳು ನಗರದಲ್ಲಿ ಅಸಂಖ್ಯಾತ ಎಂಬುದನ್ನು ಒತ್ತಿಹೇಳಬೇಕಿಲ್ಲ. ಮತ್ತೊಂದೆಡೆ ನಗರದಲ್ಲಿರುವ ಮಳೆ ನೀರು ಚರಂಡಿಗಳಲ್ಲಿ ಗಿಡಗಂಟಿ ಬೆಳೆದು ನಿಂತಿದ್ದು, ಅವುಗಳ ತೆರವು ಮಾಡದ ಹಿನ್ನೆಲೆಯಲ್ಲಿ ಮಳೆಯಾದಾಗ ರಸ್ತೆಯಲ್ಲಿ ನೀರು ಹೆಚ್ಚಿನ ಪ್ರಮಾಣದಲ್ಲಿ ಹರಿಯುವಂತಾಗಿದೆ.



ಸೈಕಲ್ ಲೇನ್‌ಗಾಗಿ ಅಳವಡಿಸಿರುವ ಬೊಲ್ಲಾರ್ಡ್‌ಗಳಲ್ಲಿ ಕೆಲವು ಕಿತ್ತು ನಾಪತ್ತೆಯಾಗಿರುವುದು ಹಾಗೂ ಲೇನ್ ಬಳಕೆಗೆ ಬಾರದೆ ಉಳಿದಿರುವುದು.





ಮೈಸೂರಿನ ಸಬ್ ಅರ್ಬನ್ ಬಸ್ ನಿಲ್ದಾಣದ ಬಳಿ ರಸ್ತೆಬದಿ ವ್ಯಾಪಾರಕ್ಕಾಗಿ ಫುಟ್‌ಪಾತ್ ಅತಿಕ್ರಮಿಸಿರುವುದು ಹಾಗೂ ಅಲ್ಲೇ ಸಮೀಪದ ರಸ್ತೆಯಲ್ಲಿ ಬೃಹತ್ ಗುಂಡಿ ಉಂಟಾಗಿರುವುದು.

ಪಾದಚಾರಿಗಳಿಗೆ ಸಂಕಷ್ಟ

ಸಬ್ ಅರ್ಬನ್ ಬಸ್ ನಿಲ್ದಾಣದ ಸಮೀಪ ಬಿಎನ್ ರಸ್ತೆಯಲ್ಲಿ ಫುಟ್‌ಪಾತ್ ಒತ್ತುವರಿ ತೆರವುಗೊಳಿಸಲು ಸ್ಥಳೀಯ ಆಡಳಿತಗಳಿಗೆ ಸಾಧ್ಯವೇ ಆಗಿಲ್ಲ. ಇಲ್ಲಿ ನಿತ್ಯ ಸಾವಿರಾರು ಜನ ಸಂಚರಿಸುತ್ತಾರೆ. ವಾಹನದಟ್ಟಣೆಯೂ ಅಧಿಕ. ಇಂತಹ ಸನ್ನಿವೇಶದಲ್ಲಿ ಇಲ್ಲಿನ ಫುಟ್‌ಪಾತ್ ಅತಿಕ್ರಮಣ ಸುಗಮ ಸಂಚಾರಕ್ಕೆ ಅಡ್ಡಿಯಾಗಿ ಪರಿಣಮಿಸಿದೆ. ಇಲ್ಲಿ ವಿವಿಧ ಬಗೆಯ ರಸ್ತೆಬದಿ ವ್ಯಾಪಾರದ ನಡುವೆ ಜನ ಸಾಗಲು ಕಿರಿಕಿರಿ ಅನುಭವಿಸುವಂತಾಗಿದೆ. ನಗರದ ಹೃದಯಭಾಗದಲ್ಲೇ ಇಂತಹ ದುಸ್ಥಿತಿ ತಪ್ಪಿಸಲಾಗಿಲ್ಲ. ಇರ್ವಿನ್ ರಸ್ತೆಯಲ್ಲೂ ಫುಟ್‌ಪಾತ್‌ನಲ್ಲಿ ತಿಂಡಿ ತಿನಿಸುಗಳ ಮಳಿಗೆ ಇದ್ದು, ಪಾದಚಾರಿಗಳು ಸಾಗಲು ಕಷ್ಟವಾಗುತ್ತಿದೆ. ನಗರದ ವಿವಿಧೆಡೆಯೂ ಇಂತಹ ಅತಿಕ್ರಮಣ ಸಾಕಷ್ಟಿದೆ. ಗಾಂಧಿಚೌಕ ಸೇರಿದಂತೆ ವಿವಿಧ ಭಾಗಗಳಲ್ಲಿ ಮಳಿಗೆದಾರರು ತಮ್ಮ ಮಳಿಗೆ ಎದುರಿನ ಫುಟ್‌ಪಾತ್ ಅತಿಕ್ರಮಿಸಿ ತಮ್ಮ ಸಾಮಗ್ರಿ ಪ್ರದರ್ಶಿಸುವ ಸ್ಥಳವಾಗಿ ಪರಿವರ್ತಿಸಿದ್ದಾರೆ.

ಕೇಂದ್ರ ಸರ್ಕಾರದಿಂದ ಮತದಾರರ ಹಕ್ಕು ಕಸಿಯುವ ಸಂಚು

ಮನೆ ಮನೆಗೆ ಕಾಂಗ್ರೆಸ್‌ನ 'ಬಿಎಲ್‌ಎ-2'ಗಳು ಭೇಟಿ ನೀಡಿ ಮತದಾರರ ಪಟ್ಟಿ ಗಮನಿಸಬೇಕು



ಮೈಸೂರಿನ ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಕೃಷ್ಣರಾಜ ವಿಧಾನಸಭಾ ಕ್ಷೇತ್ರದ ಬ್ಲಾಕ್, ಬೂತ್ ಮಟ್ಟದ ವಿವಿಧ ಸಮಿತಿ ಪದಾಧಿಕಾರಿಗಳಿಗೆ ಹಾಗೂ ಬಿಎಲ್‌ಎ-2ಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರಕ್ಕೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಚಾಲನೆ ನೀಡಿದರು. ರಘು ದೊಡ್ಡೇರಿ, ಡಾ.ಬಿ.ಜೆ.ವಿಜಯಕುಮಾರ್, ಆರ್.ಮೂರ್ತಿ ಇತರರಿದ್ದಾರೆ.

> “ಕೇಂದ್ರ ಚುನಾವಣೆ ಆಯೋಗ ಕೇಂದ್ರದ ಬಿಜೆಪಿ ಸರ್ಕಾರದ ಏಜೆಂಟರಂತೆ ವರ್ತಿಸುತ್ತಿದೆ. ಅಲ್ಲದೆ, ಉದ್ದೇಶಪೂರ್ವಕವಾಗಿ ಕಾಂಗ್ರೆಸ್ ಬೆಂಬಲಿಗರು ಹೆಚ್ಚಾಗಿರುವ ಪ್ರದೇಶಗಳಲ್ಲಿ ಮತದಾರರ ಹೆಸರು ಡಿಲಿಟ್ ಮಾಡುವ ಕುತಂತ್ರ ನಡೆಸಲು ಮುಂದಾಗಿದೆ. ಈ ಕುತಂತ್ರ ತಡೆಗಟ್ಟಲು ಕಾಂಗ್ರೆಸ್ ಪಕ್ಷದ ಬಿಎಲ್‌ಎ-2ಗಳು 'ಮತ ರಕ್ಷಕ'ರಂತೆ ಕೆಲಸ ಮಾಡಬೇಕಾಗಿದೆ. ಮ್ಯಾಪಿಂಗ್ ಮಾಡಲು ಬರುವಂತಹ ಅಧಿಕಾರಿಗಳ ಜೊತೆ ನಮ್ಮ ಬಿಎಲ್‌ಎ-2ಗಳು ಪ್ರತಿ ಮನೆ ಮನೆಗೆ ಭೇಟಿ ನೀಡಿ, ಕಾರಣವಿಲ್ಲದೆ ಮತ ಡಿಲೀಟ್ ಮಾಡಲು ಅವಕಾಶ ನೀಡದಂತೆ ಎಚ್ಚರಿಕೆ ವಹಿಸಬೇಕಾಗಿದೆ. **–ಎಂ.ಕೆ.ಸೋಮಶೇಖರ್**

ಮೈಸೂರು, ಮೇ 18(ಎಂಟಿವೈ)– ರಾಜ್ಯದ ಮೇಲೆ ಕಣ್ಣಿಟ್ಟಿರುವ ಕೇಂದ್ರದ ಬಿಜೆಪಿ ಸರ್ಕಾರ ಜನರ ಮತದಾನದ ಹಕ್ಕು ಕಸಿದುಕೊಳ್ಳುವ ಸಂಚು ನಡೆಸುವ ಸಾಧ್ಯತೆಯಿದ್ದು, ಕಾಂಗ್ರೆಸ್ ಪಕ್ಷದ 'ಬಿಎಲ್‌ಎ-2' ಅಧಿಕಾರಿಗಳೊಂದಿಗೆ ಮನೆ ಮನೆಗೆ ತೆರಳಿ ಮತದಾರರ ಪಟ್ಟಿಯನ್ನು ಗಮನಿಸಬೇಕು ಎಂದು ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಸಲಹೆ ನೀಡಿದರು.

ಮೈಸೂರಿನ ಕುವೆಂಪುನಗರದ ಚಿಕ್ಕಮ್ಮಾನಿಕೇತನ ಕಲ್ಯಾಣ ಮಂಟಪದಲ್ಲಿ ಮೈಸೂರು ನಗರ ಮತ್ತು ಗ್ರಾಮಾಂತರ ಜಿಲ್ಲಾ ಕಾಂಗ್ರೆಸ್ ಸಮಿತಿ ಹಾಗೂ ಮೈಸೂರು ಜಿಲ್ಲಾ ನೀತಿ ಸಂಶೋಧನೆ ಮತ್ತು ತರಬೇತಿ ವಿಭಾಗದ ವತಿಯಿಂದ ಕೃಷ್ಣರಾಜ ಕ್ಷೇತ್ರದ ಬ್ಲಾಕ್, ಬೂತ್ ಮಟ್ಟದ ವಿವಿಧ ಸಮಿತಿಯ ಪದಾಧಿಕಾರಿಗಳಿಗೆ ಹಾಗೂ ಬಿಎಲ್‌ಎ-2ಗಳಿಗೆ ಆಯೋಜಿಸಿದ್ದ ತರಬೇತಿ ಕಾರ್ಯಾಗಾರದಲ್ಲಿ ಅವರು ಮಾತನಾಡಿದರು.

ಮುಂಬರುವ ವಿಧಾನ ಸಭಾ ಚುನಾವಣೆಯಲ್ಲಿ ಬಿಜೆಪಿಯೇತರ ಪಕ್ಷಗಳು ಅಧಿಕಾರದಲ್ಲಿರುವ ರಾಜ್ಯಗಳನ್ನು ಗುರಿಯಾಗಿಸಿಕೊಂಡಿರುವ ಪ್ರಧಾನಿ ನರೇಂದ್ರ ಮೋದಿ ನೇತೃತ್ವದ ಬಿಜೆಪಿ ಸರ್ಕಾರ ಎಸ್‌ಐಆರ್ ಮೂಲಕ ಕಟ್ಟಿ ಹಾಕುವ ಕೆಲಸ ಮಾಡುತ್ತಿದೆ. ಪಶ್ಚಿಮ ಬಂಗಾಳದಲ್ಲಿ ನಡೆದ ಚುನಾವಣಾ ಫಲಿತಾಂಶವೇ ಇದಕ್ಕೆ ಉದಾಹರಣೆ. ಮತದಾನ ದೇಶವನ್ನು ಉಳಿಸುವ ಸಂವಿಧಾನಬದ್ಧ ಹಕ್ಕು ದೇಶದ ಪ್ರತಿಯೊಬ್ಬ ವ್ಯಕ್ತಿಯ ಮತದಾನದ ಹಕ್ಕನ್ನು ಕಸಿಯಲು ಯಾರಿಂದಲೂ ಸಾಧ್ಯವಿಲ್ಲ. ಒಂದು ವೇಳೆ ನಿಜವಾದ ಮತದಾರರ ಮತದಾನದ ಹಕ್ಕನ್ನು ಕಸಿದರೆ ಅದು ದೇಶದ್ರೋಹದ ಕೆಲಸವಾಗುತ್ತದೆ ಎಂದು ಕಿಡಿಕಾರಿದರು.

ಕೆಪಿಸಿಸಿ ಸಂಶೋಧನಾ ಮತ್ತು ತರಬೇತಿ ವಿಭಾಗದ ರಾಜ್ಯಾಧ್ಯಕ್ಷ ರಘು ದೊಡ್ಡೇರಿ ಎಸ್‌ಐಆರ್ ಅನುಷ್ಠಾನ ಸಾಧಕ-ಬಾಧಕಗಳ ಕುರಿತಂತೆ ವಿಷಯವನ್ನು ಮಂಡಿಸಿ ಮಾತನಾಡಿದ ಅವರು, 2028ರ ಚುನಾವಣೆಯಲ್ಲಿ ಕಾಂಗ್ರೆಸ್ ಸರ್ಕಾರವನ್ನು ಅಧಿಕಾರಕ್ಕೆ ತರುವ ನಿಟ್ಟಿನಲ್ಲಿ ಎಲ್ಲರೂ ಶ್ರಮಿಸಬೇಕು. ಕೃಷ್ಣರಾಜ ಕ್ಷೇತ್ರದಲ್ಲಿ ಮತ್ತೊಮ್ಮೆ ಕಾಂಗ್ರೆಸ್ ಬಾವುಟವನ್ನು ಹಾರಿಸುವುದು ನಮ್ಮೆಲ್ಲರ ಗುರಿಯಾಗಿದೆ. ಕಡಿಮೆ ಅಂತರದಲ್ಲಿ ಕಾಂಗ್ರೆಸ್ ಸೋತಿರುವ ಕ್ಷೇತ್ರಗಳನ್ನು ಗುರಿಯಾಗಿಸಿಕೊಂಡಿರುವ ಕೇಂದ್ರದ ಬಿಜೆಪಿ ಸರ್ಕಾರ ಎಸ್‌ಐಆರ್ ಮೂಲಕ ಕಾಂಗ್ರೆಸ್ ಬೆಂಬಲಿಗರ ಮತದಾನದ ಹಕ್ಕನ್ನು ಕಿತ್ತುಕೊಳ್ಳುವ ಹುನ್ನಾರ ನಡೆಸಲು ಮುಂದಾಗಿದೆ. ಕರ್ನಾಟಕದಲ್ಲಿ ನೂರು ಕ್ಷೇತ್ರಗಳನ್ನು ಈಗಾಗಲೇ ಗುರಿಯಾಗಿಸಿಕೊಂಡು ಎಸ್‌ಐಆರ್ ಜಾರಿಗೆ ತರುವ ಸಂಚು ನಡೆಸುತ್ತಿದೆ ಎಂದು ಆರೋಪಿಸಿದರು.

ಕಾರ್ಯಕ್ರಮದಲ್ಲಿ ಉಪಾಧ್ಯಕ್ಷರಾದ ವಾಸುದೇವಮೂರ್ತಿ, ಅಬ್ದುಲ್ ಮುನೀರ್ ಮತ್ತು ವಿಶ್ವನಾಥ್ ಮತ್ತಿತರರು ವಿಚಾರ ಮಂಡಿಸಿದರು. ನಗರಾಧ್ಯಕ್ಷ ಆರ್.ಮೂರ್ತಿ, ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷ ಡಾ.ಬಿ.ಜೆ.ವಿಜಯ್ ಕುಮಾರ್, ಕೆಪಿಸಿಸಿ ವಕ್ತಾರ ಎಂ.ಲಕ್ಷ್ಮಣ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಕೆಪಿಸಿಸಿ ಸಂಶೋಧನಾ ಮತ್ತು ತರಬೇತಿ ವಿಭಾಗದ ಉಪಾಧ್ಯಕ್ಷೆ ಪ್ರತಿಮಾ, ನಗರ ಮಹಿಳಾ ಘಟಕದ ಅಧ್ಯಕ್ಷ ಪುಷ್ಪಲತಾ ಚಿಕ್ಕಣ್ಣ, ಮಾಜಿ ಮೇಯರ್‌ಗಳಾದ ನಾರಾಯಣ್, ಟಿ.ಬಿ.ಚಿಕ್ಕಣ್ಣ, ಬಿ.ಎಲ್.ಭೈರಪ್ಪ, ಮಾಜಿ ಪಾಲಿಕೆ ಸದಸ್ಯರಾದ ಎಂ.ಶಿವಣ್ಣ, ಜಾಕೀರ್ ಪಾಷಾ, ಎಂ.ಸುನಿಲ್, ಜೆ.ಗೋಪಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಜಿ.ಸೋಮಶೇಖರ್, ಕಾಂಗ್ರೆಸ್ ಸಂಶೋಧನಾ ವಿಭಾಗದ ಸೋಮಣ್ಣೇಗೌಡ, ಡಾ.ಬಸವರಾಜು, ಶಂಭುಲಿಂಗಸ್ವಾಮಿ ಮತ್ತಿತರರು ಉಪಸ್ಥಿತರಿದ್ದರು.

ಇತ್ತೀಚಿಗೆ ಸಂಸ್ಕೃತ, ವೇದಾಧ್ಯಯನ, ಆಗಮಿಕ ವೃತ್ತಿ ಕಲಿಕೆ ಹೆಚ್ಚಿನ ಮನ್ನಣೆ ಪಡೆಯುತ್ತಿದೆ

33 ದಿನಗಳ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮದಲಿ ಶಾಸಕ ಶ್ರೀವತ್ಸ



ಅಧಿಕ ಜ್ಯೇಷ್ಠ ಮಾಸದ 33 ದಿನಗಳ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮಗಳಿಗೆ ಶ್ರೀ ಸತ್ಯಾತ್ಮ ತೀರ್ಥ ಸ್ವಾಮೀಜಿ ಚಾಲನೆ ನೀಡಿದರು. ಶಾಸಕ ಟಿ.ಎಸ್.ಶ್ರೀವತ್ಸ, ವಿಧಾನ ಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ ಇದ್ದರು.

> “ಭಕ್ತಿ ದೃಢವಾಗಲು ಸತ್ಕರ್ಮ ಮಾಡುವುದು ಮುಖ್ಯ, ನಮ್ಮ ಪ್ರಾಚೀನ ದೇಗುಲಗಳು, ಮಠಗಳು, ಧಾರ್ಮಿಕ ಕ್ಷೇತ್ರಗಳು ದೇಶದ ಸಂಸ್ಕೃತಿಯನ್ನು ಅನಾದಿ ಕಾಲದವರೆಗೆ ಉಳಿಸುವ ತಾಣಗಳಾಗಿವೆ. ಅಲ್ಲಿಂದ ಪ್ರೇರಣೆ ಪಡೆದು ಧರ್ಮ ಮಾರ್ಗದಲ್ಲಿ ಸಾಗಬೇಕು. ಭಕ್ತಿ, ಜ್ಞಾನ ಮತ್ತು ವಿರಕ್ತಿ ಮೂರ್ತಿಗಳ ಅನುಗ್ರಹದಿಂದ ಅಧಿಕ ಜ್ಯೇಷ್ಠ ಮಾಸ ಎಲ್ಲರಿಗೂ ಉತ್ತಮ ಫಲಗಳನ್ನೇ ನೀಡಲಿ ಎಂದು ಶ್ರೀ ಸತ್ಯಾತ್ಮ ತೀರ್ಥ ಸ್ವಾಮೀಜಿ ಸಂದೇಶ ನೀಡಿದರು.

ಮೈಸೂರು, ಮೇ 18(ವಿವಿಹೆಚ್)– ಮೈಸೂರು ಇತ್ತೀಚೆಗಿನ ದಿನಗಳಲ್ಲಿ ಸಂಸ್ಕೃತ, ವೇದಾಧ್ಯಯನ, ಆಗಮಿಕ ವೃತ್ತಿ ಕಲಿಕೆಯಲ್ಲಿ ಹೆಚ್ಚಿನ ಮನ್ನಣೆ ಪಡೆಯುತ್ತಿದೆ ಎಂದು ಕೃಷ್ಣರಾಜ ಕ್ಷೇತ್ರದ ಶಾಸಕ ಟಿ.ಎಸ್.ಶ್ರೀವತ್ಸ ತಿಳಿಸಿದರು.

ನಗರದ ಅಗ್ರಹಾರ ಕಾಶಿ ವಿಶ್ವೇಶ್ವರ ದೇವಾಲಯದ ಆವರಣದಲ್ಲಿ ಅಧಿಕ ಜ್ಯೇಷ್ಠ ಮಾಸದ ಅಂಗವಾಗಿ ಆಯೋಜಿಸಿರುವ ಅಧಿಕ ಜ್ಯೇಷ್ಠ ಮಾಸೋತ್ಸವ-33 ದಿನಗಳ ಧಾರ್ಮಿಕ, ಸಾಂಸ್ಕೃತಿಕ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ವೇದಗಳ ಕಲಿಕೆ ಕೇವಲ ಮಕ್ಕಳಿಂದ ಸಾಧ್ಯವಿಲ್ಲ. ಮಕ್ಕಳ ಕಲಿಕೆಗೆ ಪೋಷಕರು ನೀಡುವ ಬೆಂಬಲವೇ ಸನಾತನ ಧರ್ಮ ಉಳಿವಿಗೆ ಕಾರಣವಾಗಿದೆ. ಸನಾತನ ಧರ್ಮ ಎಂಬುದೇ ಇಲ್ಲ ಎಂಬ ಚರ್ಚೆ ಆರಂಭವಾಗಿರುವ ಕಾಲಘಟ್ಟದಲ್ಲಿ ಭಾರತೀಯರಲ್ಲಿ ತಮ್ಮ ಮೂಲ ಧರ್ಮದ ಬಗ್ಗೆ ಜಾಗೃತಿ ಮೂಡಿಸಬೇಕಿದೆ. ನಮ್ಮ ಧ'ರ್ಮದ ಉಳಿವಿಗೆ ಹೆಚ್ಚಿನ ಹೋರಾಟದ ಅಗತ್ಯವಿದೆ ಎಂದರು.

ಮನದ ಕೊಳೆ ತೊಳೆಯಲು ಜ್ಯೇಷ್ಠ ಅಧಿಕ ಮಾಸ ಉತ್ತಮ ಕಾಲಘಟ್ಟವಾಗಿದೆ. ಈ ಸಂದರ್ಭವನ್ನು ಸದ್ಬಳಕೆ ಮಾಡಿಕೊಂಡು ಸಾತ್ವಿಕ ಕಾರ್ಯಗಳನ್ನು ಹೆಚ್ಚಾಗಿ ಮಾಡಬೇಕು. ಧ್ಯಾನ, ಪೂಜೆ, ಹೋಮ ಮತ್ತು ಅನ್ನದಾನಗಳು ಪುಣ್ಯ ಹೆಚ್ಚಿಸಲಿವೆ ಎಂದು ಅಭಿಪ್ರಾಯಪಟ್ಟರು.

ವಿಧಾನಪರಿಷತ್ ಮಾಜಿ ಸದಸ್ಯ ಗೋ.ಮಧುಸೂದನ ಮಾತನಾಡಿ, ಧಾರ್ಮಿಕ ಆಕ್ರಮಣಗಳನ್ನು ತಡೆಯಲು ಭಾರತೀಯರು ಜಾಗೃತರಾಗಬೇಕಾಗಿದೆ ಎಂದು ಕರೆ ಕೊಟ್ಟರು. ದೇಶಕ್ಕೆ ಸ್ವಾತಂತ್ರ್ಯ ಬಂದು 80 ವರ್ಷ ಕಳೆದರೂ ನಾವಿನ್ನೂ ಗುಲಾಮ ಮನೋಭಾವದಲ್ಲೇ ಇದ್ದೇವೆ. ಸಾವಿರಾರು ವರ್ಷಗಳಿಂದ ಪರಕೀಯರ ಪ್ರಭುತ್ವದಲ್ಲೇ ನಲುಗಿದ್ದಾರೆ. ಇತ್ತೀಚೆಗೆ ಜಾಗೃತಿ ಮೂಡುತ್ತಿದೆ. ದೇವ ನಿರ್ಮಿತ ದೇಶದಲ್ಲಿ ಮಠ ಮಾನ್ಯಗಳು ಧರ್ಮದ ಪುನರುತ್ಥಾನಕ್ಕೆ ಬೆಂಬಲಿಸುತ್ತಿರುವುದು ಶ್ಲಾಘನೀಯ ಎಂದರು.

ಈ ವೇಳೆ ಮಠದ ದಿವಾನರಾದ ಶಶಿ ಆಚಾರ್ಯ, ವ್ಯವಸ್ಥಾಪಕ ಪಂಡಿತ ಅನಿರುದ್ಧಾಚಾರ್ಯ ಸೇರಿದಂತೆ ಹಲವು ವಿಪ್ರ ಮುಖಂಡರು ಉಪಸ್ಥಿತರಿದ್ದರು.

ಹೆದ್ದಾರಿಯಲ್ಲಿ ದಿಢೀರ್ ಕಾಡಾನೆ ಪ್ರತ್ಯಕ್ಷ

ಪ್ರಾಣಾಪಾಯದಿಂದ ಇಬ್ಬರು ಸವಾರರು ಪಾರು

ಮಡಿಕೇರಿ, ಮೇ 18–ಕುಶಾಲನಗರ–ಮಡಿಕೇರಿ ರಾಷ್ಟ್ರೀಯ ಹೆದ್ದಾರಿಯ ಆನೆ ಕಾಡು ಹೆದ್ದಾರಿಯಲ್ಲಿ ಕಾಡಾನೆಯೊಂದು ಪ್ರತಿರಾತ್ರಿ ಸಂಚರಿಸುತ್ತಿದ್ದು, ಭಾನುವಾರ ರಾತ್ರಿ ಇಬ್ಬರು ದ್ವಿಚಕ್ರ ವಾಹನ ಸವಾರರು ಪ್ರಾಣಾಪಾಯದಿಂದ ಪಾರಾಗಿದ್ದಾರೆ.



ಆನೆಕಾಡು ಮೆಟ್ನಳ್ಳ ಇಳಿಜಾರಿನ ಹೆದ್ದಾರಿ ಮಧ್ಯದಲ್ಲಿ ರಾತ್ರಿ ಕಾಡಾನೆ ಸಾಗುತ್ತಿದ್ದ ಸಂದರ್ಭ ಮಡಿಕೇರಿ ಕಡೆಯಿಂದ ಕುಶಾಲನಗರದತ್ತ ಬೈಕ್‌ನಲ್ಲಿ ಬಂದ ಸವಾರರು ತಿರುವಿನಲ್ಲಿ ಕಾಡಾನೆ ಕಂಡು ಭಯಭೀತರಾಗಿ ಕಕ್ಕಾಬಿಕ್ಕಿಯಾಗಿದ್ದಾರೆ. ಬೈಕ್ ಮತ್ತು ಕಾಡಾನೆ ನಡುವೆ ಅಂತರ ಕಡಿಮೆಯಿದ್ದ ಕಾರಣ ಬೈಕ್ ವಾಪಸ್ ತಿರುಗಿಸುವ ಸಂದರ್ಭ ಕಾಡಾನೆ ದಾಳಿಗೆ ಮುನ್ನುಗ್ಗಿ ಬಂದಿದೆ. ಕೂಡಲೆ ಬೈಕ್ ಅನ್ನು ನಡು ರಸ್ತೆಯಲ್ಲಿ ಬಿಟ್ಟು ಸವಾರರಿಬ್ಬರು ಓಡಿ ತಪ್ಪಿಸಿಕೊಂಡಿರುವ ದೃಶ್ಯ ವಾಹನ ಸವಾರರ ಮೊಬೈಲ್‌ನಲ್ಲಿ ಸೆರೆಯಾಗಿದೆ. ಕಾಡಾನೆ ದಾಳಿಗೆ ಮುಂದಾಗುತ್ತಿದ್ದಂತೆ ಹಿಂದೆ ಇದ್ದ ವಾಹನದವರು ಹಾರ್ನ್ ಮಾಡಿ ಕಾಡಾನೆಯನ್ನು ಬೆದರಿಸಿದ್ದಾರೆ.

ಹಣಕಾಸಿನ ವಿಚಾರಕ್ಕೆ ಸೋದರ ಮಾವ ಬಲಿ

ಕುಶಾಲನಗರ, ಮೇ 18–ಹಣಕಾಸಿನ ವಿಚಾರದಲ್ಲಿ ಸಂಬಂಧಿಕರ ನಡುವೆ ತಳ್ಳಾಟ ನೂಕಾಟ ನಡೆದು, ಸೋದರ ಮಾವ ಆಯತಪ್ಪಿ ಕೆಳಗೆ ಬಿದ್ದು ತಲೆಗೆ ತೀವ್ರ ಪೆಟ್ಟು ಬಿದ್ದು, ಮೃತಪಟ್ಟ ಘಟನೆ ಕೂಡಿಗೆಯಲ್ಲಿ ನಡೆದಿದೆ.

ಶಿರಂಗಾಲದ ಮೂಡಲಕೊಪ್ಪಲು ನಿವಾಸಿ ಕೂಡಿಗೆ ಡೇರಿ ನಿವೃತ್ತ ನೌಕರ ಶಿವನಂಜಪ್ಪ (63) ಮೃತ ದುರ್ದೈವಿ.

ಶಿವನಂಜಪ್ಪ ಮತ್ತು ಅವರ ಅಕ್ಕನ ಮಗ ನಿವೃತ್ತ ಪೊಲೀಸ್ ಸಿಬ್ಬಂದಿ ಶ್ರೀನಿವಾಸ್ ನಡುವೆ ಹಣಕಾಸಿನ ವಿಚಾರಕ್ಕೆ ಮಾತಿನ ಚಕಮಕಿ ನಡೆದಿದೆ. ಅದು ಪ್ರಕೋಪಕ್ಕೆ ತಿರುಗಿ ಇಬ್ಬರ ನಡುವೆ ಜಟಾಪಟಿಯಾಗಿ ಶ್ರೀನಿವಾಸ್ ತನ್ನ ಸೋದರ ಮಾವನನ್ನೇ ಜೋರಾಗಿ ತಳ್ಳಿದ್ದಾರೆ ತಳ್ಳಿದ ರಭಸಕ್ಕೆ ಶಿವನಂಜಪ್ಪನವರ ತಲೆಗೆ ಜೋರಾಗಿ ಪೆಟ್ಟು ಬಿದ್ದಿದೆ. ಚಿಕಿತ್ಸೆಗಾಗಿ ಪಟ್ಟಣದ ಸಾರ್ವಜನಿಕ ಆಸ್ಪತ್ರೆಗೆ ಕರೆತಂದರಾದರೂ ಮಾರ್ಗ ಮಧ್ಯೆ ಅಸುನೀಗಿದ್ದರು. ಆರೋಪಿ ಶ್ರೀನಿವಾಸ್‌ನನ್ನು ವಶಕ್ಕೆ ಪಡೆದಿರುವ ಗ್ರಾಮಾಂತರ ಪೊಲೀಸರು, ಪ್ರಕರಣ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಅಂತರರಾಷ್ಟ್ರೀಯ ವಸ್ತು ಸಂಗ್ರಹಾಲಯ ದಿನಾಚರಣೆ



ಮಡಿಕೇರಿಯ ಪುರಾತತ್ವ, ಸಂಗ್ರಹಾಲಯ ಮತ್ತು ಪರಂಪರೆ ಇಲಾಖೆ ವತಿಯಿಂದ ಅಂತರರಾಷ್ಟ್ರೀಯ ವಸ್ತುಸಂಗ್ರಹಾಲಯ ದಿನಾಚರಣೆ ಅಂಗವಾಗಿ 'ವಸ್ತು ಸಂಗ್ರಹಾಲಯಗಳು ವಿಭಜಿತ ಜಗತ್ತನ್ನು ಒಂದುಗೂಡಿಸುತ್ತಿವೆ ಎಂಬ ಘೋಷವಾಕ್ಯದಡಿಯಲ್ಲಿ ನಾಡಿನ ಗತ ಇತಿಹಾಸವನ್ನು ಪುಷ್ಠೀಕರಿಸುವ 'ಪ್ರಾಚೀನ ನಾಣ್ಯಗಳ ಪ್ರದರ್ಶನ ನಗರದ ಕೋಟೆಯ ಆವರಣದ ವಸ್ತುಸಂಗ್ರಹಾಲಯದಲ್ಲಿ ಅರ್ಥಪೂರ್ಣವಾಗಿ ನಡೆಯಿತು. ನಾಡಿನ ಖ್ಯಾತ ವೈದ್ಯರು ಹಾಗೂ ನಾಣ್ಯ ಸಂಗ್ರಹಕಾರರೂ ಆಗಿರುವ ಡಾ. ಎಂ.ಜಿ.ಪಾಟ್ಕರ್ ಮತ್ತು ವಿಜಯಲಕ್ಷ್ಮೀ ಪಾಟ್ಕರ್, ಜಿಲ್ಲಾ ಜಾನಪದ ಪರಿಷತ್ತಿನ ಅಧ್ಯಕ್ಷ ಬಿ.ಜಿ. ಅನಂತಶಯನ, ಸರ್ಕಾರಿ ವಸ್ತು ಸಂಗ್ರಹಾಲಯದ ಕ್ಯೂರೇಟರ್ ಬಿ.ಪಿ. ರೇಖಾ ಹಾಗೂ ಸಿಬ್ಬಂದಿ ಉಪಸ್ಥಿತರಿದ್ದರು.

ಬಾಕಿ ಗೌರವಧನಕ್ಕೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರ ಪ್ರತಿಭಟನೆ

ಮಡಿಕೇರಿ, ಮೇ 18–ಆಶಾ ಕಾರ್ಯಕರ್ತೆಯರಿಗೆ ಪಾವತಿಸಲು ಬಾಕಿ ಇರುವ ಗೌರವ ಧನ ಮತ್ತು ಪ್ರೋತ್ಸಾಹ ಧನವನ್ನು ತಕ್ಷಣವೇ ಬಿಡುಗಡೆ ಮಾಡುವುದು ಸೇರಿದಂತೆ ಪ್ರಮುಖ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ರಾಜ್ಯ ಸಂಯುಕ್ತ ಆಶಾ ಕಾರ್ಯಕರ್ತೆಯರ ಸಂಘದ ಜಿಲ್ಲಾ ಸಮಿತಿ ನಗರದ ಜಿಲ್ಲಾಡಳಿತ ಭವನದ ಮುಂಭಾಗ ಪ್ರತಿಭಟನೆ ನಡೆಸಿತು.

ಬೆಳಿಗ್ಗೆ ಜಿಲ್ಲೆಯ ವಿವಿದೆಡೆಯಿಂದ ಆಗಮಿಸಿದ್ದ ನೂರಾರು ಆಶಾ ಕಾರ್ಯಕರ್ತೆಯರು, ಜಿಲ್ಲಾಡಳಿತ ಭವನದ ಮುಂಭಾಗ ಸೇರಿ ಸರ್ಕಾರದ ವಿರುದ್ಧ ಘೋಷಣೆಗಳನ್ನು ಕೂಗಿ ಪ್ರತಿಭಟನೆ ನಡೆಸಿ ತಮ್ಮ ಆಕ್ರೋಶವನ್ನು ವ್ಯಕ್ತಪಡಿಸಿದರು.

ಜಿಲ್ಲಾ ಸಂಘದ ಅಧ್ಯಕ್ಷೆ ತೆಕ್ಕಡೆ ಪೂರ್ಣಿಮಾ ಮಾತನಾಡಿ, ಜಿಲ್ಲಾ ವ್ಯಾಪ್ತಿಯಲ್ಲಿ ಸುಮಾರು 430 ಆಶಾ ಕಾರ್ಯಕರ್ತೆಯರು ಕಾರ್ಯ ನಿರ್ವಹಿಸುತ್ತಿದ್ದಾರೆ. ಇವರಿಗೆ ಮಾರ್ಚ್, ಏಪ್ರಿಲ್ ತಿಂಗಳಿಗೆ ಸಂಬಂಧಿಸಿದ ಗೌರವ ಧನ ಇಲ್ಲಿಯವರೆಗೂ ಬಿಡುಗಡೆಯಾಗಿಲ್ಲ ಮತ್ತು ವಿವಿಧ ತರಬೇತಿಗಳಿಗೆ ಸಂಬಂಧಿಸಿದಂತೆ ನೀಡಬೇಕಾದ ಪ್ರೋತ್ಸಾಹ ಧನವನ್ನೂ ನೀಡಿಲ್ಲ. ಇದರಿಂದ ಆಶಾ ಕಾರ್ಯಕರ್ತೆಯರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ ಎಂದು ಕಳವಳ ವ್ಯಕ್ತಪಡಿಸಿದರು.



ಬಾಕಿ ಇರುವ ಗೌರವ ಧನ ಮತ್ತು ಪ್ರೋತ್ಸಾಹ ಧನಕ್ಕೆ ಆಗ್ರಹಿಸಿ ಆಶಾ ಕಾರ್ಯಕರ್ತೆಯರು ಪ್ರತಿಭಟನೆ ನಡೆಸಿದರು.

ತಾಯಿ–ಮಗು ಸುರಕ್ಷತೆ, ಬಡ ಜನತೆಯ ಆರೋಗ್ಯಕ್ಕೆ ಪೂರಕವಾದ ಸೇವೆಗಳನ್ನು ಆಶಾ ಕಾರ್ಯಕರ್ತೆಯರು ನೀಡುತ್ತಾ ಬರುತ್ತಿದ್ದಾರೆ. ಇದೀಗ ಆಶಾನಿಧಿ ತಂತ್ರಾಂಶದಿಂದ ಇಂತಹ 9 ಸೇವೆಗಳನ್ನು ನಿಷ್ಕ್ರಿಯಗೊಳಿಸಲಾಗಿದೆ. ಇದರಿಂದ ಪ್ರತಿ ಆಶಾ ಕಾರ್ಯಕರ್ತೆಯರಿಗೆ 500 ರೂ.ಗಳಿಂದ ಸಾವಿರ ರೂ.ಗಳವರೆಗೆ ಪ್ರೋತ್ಸಾಹ ಧನ ಕಡಿತವಾಗಲಿದೆ. ಪ್ರಸ್ತುತ ಪ್ರತಿ ಆಶಾ ಕಾರ್ಯಕರ್ತೆಯರು ಮಾಸಿಕ 5ಸಾವಿರ ಗೌರವ ಧನ ಮತ್ತು ವಿವಿಧ ಸೇವೆಗಳಿಗೆ ಸಂಬಂಧಿಸಿದಂತೆ ಸುಮಾರು 2 ಸಾವಿರ ರೂ. ಪ್ರೋತ್ಸಾಹ ಧನ ಸೇರಿದಂತೆ ಒಟ್ಟು 7 ಸಾವಿರ ರೂ. ವೇತನವನ್ನಷ್ಟೆ ಪಡೆಯುತ್ತಿದ್ದಾರೆ. ಈ ವೇತನದಲ್ಲೂ ಇದೀಗ ಕಡಿತ ಮಾಡಲಾಗುತ್ತಿದೆ ಎಂದು ತೀವ್ರ ಅಸಮಾಧಾನ ವ್ಯಕ್ತಪಡಿಸಿದರು.

ಬಿಸಿಯೂಟ ಕಾರ್ಮಿಕರಿಗೆ ಸಂಕಷ್ಟ: ಜಿಲ್ಲಾ ಸಂಚಾಲಕಿ ಉಮಾದೇವಿ ಮಾತನಾಡಿ, ಹಲವು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿರುವ ಅಂಗನವಾಡಿ ನೌಕರರು ಪ್ರಸ್ತುತ 12 ಸಾವಿರ ವೇತನ ಪಡೆಯುತ್ತಿದ್ದಾರೆ. 18ವರ್ಷಗಳಿಂದ ಸರ್ಕಾರದ ಸೇವೆಗಳನ್ನು ಜನರಿಗೆ ಒದಗಿಸುವ ಕಾರ್ಯದಲ್ಲಿ ನಿರತರಾಗಿರುವ ಆಶಾ ಕಾರ್ಯಕರ್ತೆಯರು 7ಸಾವಿರ ರೂ.ಗಳನ್ನು ಮಾಸಿಕವಾಗಿ ಪಡೆಯುತ್ತಿದ್ದಾರೆ. ನಮ್ಮಗಳಿಗೆ ಹೋಲಿಸಿದರೆ ಬಿಸಿಯೂಟ ಕಾರ್ಮಿಕರು ತೀವ್ರ ಸಂಕಷ್ಟಕ್ಕೆ ಸಿಲುಕಿದ್ದಾರೆ. ಪ್ರಸ್ತುತ ಸರ್ಕಾರ ಕೆಪಿಎಸ್ ಮ್ಯಾಗ್ನೆಟ್ ಶಾಲೆಗಳನ್ನು ಆರಂಭಿಸುವುದರೊಂದಿಗೆ ಗ್ರಾಮೀಣ ಭಾಗಗಳ ಸಾಕಷ್ಟು ಸರ್ಕಾರಿ ಶಾಲೆಗಳು ಮುಚ್ಚಲ್ಪಡುತ್ತಿವೆ. ಈ ಹಂತದಲ್ಲಿ ಬಿಸಿಯೂಟ ಕಾರ್ಮಿಕರು ಸಂಕಷ್ಟಕ್ಕೆ ಸಿಲುಕುತ್ತಾರೆ. ಇಂತಹ ಯಾವುದೇ ಸಮಸ್ಯೆಗಳಿಗೆ ಅಗತ್ಯ ಪರಿಹಾರ ಒದಗಿಸಬೇಕಾದ ಸರ್ಕಾರ ಜವಾಬ್ದಾರಿಗಳಿಂದ ನುಣುಚಿಕೊಳ್ಳುತ್ತಿರುವುದಾಗಿ ಆರೋಪಿಸಿದರು.

ಜಿಲ್ಲಾಡಳಿತದ ಮೂಲಕ ಸರ್ಕಾರಕ್ಕೆ ಮನವಿ ಸಲ್ಲಿಸಲಾಯಿತು. ಪ್ರತಿಭಟನೆಯಲ್ಲಿ ಸಂಘದ ಜಿಲ್ಲಾ ಕಾರ್ಯದರ್ಶಿ ಸೋಮವಾರಪೇಟೆಯ ನಾಗಮಣಿ, ವಿರಾಜಪೇಟೆ ತಾಲೂಕಿನ ಪ್ರಮಿತ, ಕುಶಾಲನಗರದ ಮಾಲಾಶ್ರೀ ಸೇರಿದಂತೆ ಸಂಘದ ನೂರಾರು ಸದಸ್ಯರು ಪಾಲ್ಗೊಂಡಿದ್ದರು.

ಯವಕಪಾಡಿ, ಹಾರಂಗಿ ಹಿನ್ನೀರು ಪ್ರದೇಶಗಳಲ್ಲಿ ಪ್ರಾಚ್ಯ ವಸ್ತುಗಳ ಪತ್ತೆ

ಮಡಿಕೇರಿ, ಮೇ 18–ಕೊಡಗಿನ ಗತ ಇತಿಹಾಸ ಪರಂಪರೆ ಮತ್ತು ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲುವ 2 ಮಹತ್ವದ ಪ್ರಾಚ್ಯ ವಸ್ತುಗಳು ಯವಕಪಾಡಿ ಮತ್ತು ಹಾರಂಗಿ ಹಿನ್ನೀರು ಪ್ರದೇಶಗಳಲ್ಲಿ ಪತ್ತೆಯಾಗಿದ್ದು ಕುತೂಹಲ ಮೂಡಿಸಿದೆ.

ತಾಲೂಕಿನ ನಾಪೋಕ್ಲು ಸಮೀಪದ ಯವಕಪಾಡಿ ಗ್ರಾಮದ ಶ್ರೀ ಭಗವತಿ ದೇಗುಲದ ಜೀರ್ಣೋದ್ಧಾರ ಕಾರ್ಯಗಳು ನಡೆಯುತ್ತಿರುವ ಸಂದರ್ಭದಲ್ಲಿ ಗರ್ಭಗುಡಿಯಲ್ಲಿನ ಶ್ರೀ ಭಗವತಿ ದೇವರ ವಿಗ್ರಹವನ್ನು ಹೊರತೆಗೆಯುವಾಗ ಅದರ ತಳ ಭಾಗದಲ್ಲಿ ಅತ್ಯಂತ ಸುಂದರವಾದ 'ಕೂರ್ಮ ಕರಂಡಕ' ಪತ್ತೆಯಾಗಿದೆ. ಈ ಬಗ್ಗೆ ಸರ್ಕಾರಿ ವಸ್ತು ಸಂಗ್ರಹಾಲಯದ ಕ್ಯೂರೇಟರ್ ಬಿ.ಪಿ. ರೇಖಾರನ್ನು ಕೇಳಿದಾಗ ವಾರದ ಹಿಂದಷ್ಟೆ ದೇಗುಲದ ಜೀರ್ಣೋದ್ಧಾರ ಹಂತದಲ್ಲಿ ಕಂಡು ಬಂದ ಕೂರ್ಮ ಕರಂಡಕವನ್ನು ಇದೀಗ ನಗರದ ಪ್ರಾಚ್ಯ ವಸ್ತು ಸಂಗ್ರಹಾಲಯಕ್ಕೆ ಸೇರ್ಪಡೆ ಮಾಡಲಾಗಿದೆ ಎಂದರು.

ಕೂರ್ಮ ಕರಂಡಕ ವಿಗ್ರಹದಲ್ಲಿ ಒಂದು ಕರಂಡಕದ ಮೇಲೆ ಆಮೆಯ ಸುಂದರ ವಿಗ್ರಹವಿದ್ದು, ಅದರ ಮೇಲ್ಭಾಗ ಲಂಭಾಕೃತಿಯ ರಚನೆ ಇದೆ. ಭೂದೇವಿಯನ್ನು ಸೂಚಿಸುವ ಆಮೆಯ ಈ ವಿಗ್ರಹವು ಸಂಪತ್ತಿನ ಸಂಕೇತವಾಗಿದೆ. ಈ ವಿಗ್ರಹ ಸುಮಾರು 16 ಇಲ್ಲವೆ 17ನೇ ಶತಮಾನಕ್ಕೆ ಸೇರಿದವು ಎಂದು ಅಂದಾಜಿಸಲಾಗಿದ್ದು, ವಿಜಯ



ಜಿಲ್ಲೆಯಲ್ಲಿ ಪತ್ತೆಯಾಗಿರುವ ಮಾಸ್ತಿ ಕಲ್ಲು, ಕೂರ್ಮ ಕರಂಡಕ

ನಗರ ಸಾಮ್ರಾಜ್ಯದ ಆಳ್ವಿಕೆಯ ಆ ದಿನಗಳಲ್ಲಿ ಕೊಡಗನ್ನು ಹಾಲೇರಿ ರಾಜವಂಶ ಆಳುತ್ತಿತ್ತು ಎಂದು ರೇಖಾ ಮಾಹಿತಿ ನೀಡಿದ್ದಾರೆ.

ಹಾರಂಗಿಯಲ್ಲಿ ಮಾಸ್ತಿ ವೀರಗಲ್ಲು: ಪ್ರಸಕ್ತ ಸಾಲಿನ ಬೇಸಿಗೆಯ ಅವಧಿಯ ಉರಿಬಿಸಿಲ ಹೊಡೆತಕ್ಕೆ ಹಾರಂಗಿಯ ಹಿನ್ನೀರು ಸಾಕಷ್ಟು ತಳಸೇರಿದೆ. ಈ ಸಂದರ್ಭ ಪ್ರಾಚ್ಯ ವಸ್ತು ಇಲಾಖೆಯಿಂದ ನಡೆಸಿದ ಉತ್ಖನನದ ಸಂದರ್ಭ ಹಾರಂಗಿ ಹಿನ್ನೀರು ಪ್ರದೇಶದಲ್ಲಿ ಸೂಕ್ಷ್ಮ ಕೆತ್ತನೆಗಳನ್ನು ಒಳಗೊಂಡ "ಮಾಸ್ತಿ ವೀರಗಲ್ಲು" ಪತ್ತೆಯಾಗಿದೆ.

ಈ ಮಾಸ್ತಿ ವೀರಗಲ್ಲುವಿನಲ್ಲಿ ಬಿಲ್ಲು ಬಾಣವನ್ನು ಹೂಡಿದ ಯೋಧರು, ಯುದ್ಧದ ಚಿತ್ರಗಳು ಅತ್ಯಂತ ಸೊಗಸಾಗಿ ಮೂಡಿ ಬಂದಿದೆ. ಈ ಮಾಸ್ತಿಗಲ್ಲು ಸುಮಾರು 11 ಇಲ್ಲವೆ 12ನೇ ಶತಮಾನದ ಚೆಂಗಾಳ್ವರ ಕಾಲದ್ದಾಗಿದೆ. ಇಂತಹ ಮಾಸ್ತಿ ವೀರಗಲ್ಲು, ಸತಿಗಲ್ಲು ಮೊದಲಾದವುಗಳನ್ನು ಅದು ದೊರಕಿದ ಪ್ರದೇಶಗಳಲ್ಲೆ ವ್ಯವಸ್ಥಿತವಾಗಿ ಅಳವಡಿಸುವ ಕಾರ್ಯಗಳು ನಡೆಯುತ್ತಿರುವುದಾಗಿ ಹೇಳಿದರು.

ಶಾಸನ–ಪ್ರಾಚ್ಯ ವಸ್ತುಗಳು: ಜಿಲ್ಲೆಯ 5 ತಾಲೂಕು ವ್ಯಾಪ್ತಿಗಳಲ್ಲಿ 701 ದೇವಸ್ಥಾನಗಳಿದ್ದು, 1914ನೇ ಇಸವಿಯಲ್ಲಿ ಬ್ರಿಟೀಷ್ ಪ್ರಾಚ್ಯವಸ್ತು ತಜ್ಞರಾದ ಡಾ. ಬಿ.ಎಲ್.ರೈಸ್ ಅವರು, ಕೊಡಗಿನ ಗ್ರಾಮೀಣ ಭಾಗಗಳಲ್ಲಿನ 106 ಶಾಸನಗಳನ್ನು ಗುರುತು ಮಾಡಿದ್ದರು. ಇವರು ಗುರುತು ಮಾಡಿದ ಶಾಸನಗಳಲ್ಲಿ ಪ್ರಸ್ತುತ 48 ಶಾಸನಗಳನ್ನು ಮಾತ್ರವೇ ಪತ್ತೆ ಮಾಡಲು ಸಾಧ್ಯವಾಗಿದೆ. ರೈಸ್ ಗುರುತು ಮಾಡದ 78 ಇತರೆ ಶಾಸನ, ಪ್ರಾಚ್ಯ ವಸ್ತುಗಳನ್ನು ಪ್ರಾಚ್ಯ ವಸ್ತು ಇಲಾಖೆ ಗುರುತಿಸುವ ಮೂಲಕ ಕೊಡಗಿನ ಇತಿಹಾಸದ ಮೇಲೆ ಬೆಳಕು ಚೆಲ್ಲುವ ಕಾರ್ಯ ಮಾಡಿದೆ.

ಜಿಲ್ಲಾ ವ್ಯಾಪ್ತಿಯ ವಿವಿದೆಡೆಗಳಲ್ಲಿ 200 ವೀರಗಲ್ಲು, 77 ಸತಿಕಲ್ಲು, 284 ಕೋಲೆ ಕಲ್ಲುಗಳನ್ನು ಮತ್ತು 27 ಇತರೆ ಶಿಲ್ಪಗಳನ್ನು ಪತ್ತೆ ಮಾಡಿ ಸಂರಕ್ಷಿಸುವ ಕಾರ್ಯ ನಡೆದಿದೆ. ಇವುಗಳಲ್ಲಿ 'ಕೋಲೆಕಲ್ಲು' ಕೊಡಗಿಗೆ ಮಾತ್ರವೇ ಸೀಮಿತವಾದ ವಿಶಿಷ್ಟವಾದ ಪ್ರಾಚ್ಯ ವಸ್ತುವಾಗಿದೆ. ಈ ಕಲ್ಲು ಕೊಡಗಿನ ಮನೆತನಗಳ ಮುಖ್ಯಸ್ಥರು ನಿಧನರಾದ ಸಂದರ್ಭ ನೆಟ್ಟ ಕಲ್ಲುಗಳಾಗಿದೆ ಎಂದು ರೇಖಾ ತಿಳಿಸಿದರು.

ಬಸವೇಶ್ವರರ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳಬೇಕು



ರಾಜ್ಯ ಮಟ್ಟದ ಅಥ್ಲೇಟಿಕ್ ಕೂಟದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿ ಎ.ಆರ್.ಅಕ್ಷಯ್ ಮತ್ತು ವೀರಶೈವ ಸಮಾಜದ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳನ್ನು ಗೌರವಿಸಲಾಯಿತು.

ವಿರಾಜಪೇಟೆ: ಸಕಲ ಜೀವಾತ್ಮರಿಗೆ ಒಳಿತನ್ನೆ ಬಯಸುವಂತ ಬಸವೇಶ್ವರರ ತತ್ವ ಸಿದ್ಧಾಂತಗಳನ್ನು ಪ್ರತಿಯೊಬ್ಬರು ಅಳವಡಿಸಿಕೊಳ್ಳುವಂತಾಗಬೇಕು ಎಂದು ವೀರಶೈವ ಮಹಾಸಭಾ ಸಮಾಜದ ಗೌರವ ಅಧ್ಯಕ್ಷ ಶಾಂತಮಲ್ಲಿಕಾರ್ಜುನ ಸ್ವಾಮೀಜಿ ಹೇಳಿದ್ದಾರೆ.

ಅಖಿಲ ಭಾರತ ವೀರಶೈವ ಮಹಾಸಭಾ ಪೊನ್ನಂಪೇಟೆ ಹಾಗೂ ವಿರಾಜಪೇಟೆ ತಾಲೂಕು ಘಟಕದ ವತಿಯಿಂದ ಸಮೀಪದ ಅರಮೇರಿ ಕಳಂಚೇರಿ ಮಠದ ಶ್ರೀ ಲಿಂಗ ರಾಜೇಂದ್ರ ಭವನದಲ್ಲಿ ನಡೆದ ವಾರ್ಷಿಕ ಮಹಾಸಭೆ ಹಾಗೂ 'ಬಸವ ಜಯಂತಿ ಆಚರಣೆ ಸಮಾರಂಭ'ದ ಸಾನಿಧ್ಯ ವಹಿಸಿ, ಪ್ರತಿಯೊಬ್ಬರಿಗೂ ಲೇಸನ್ನೆ ಬಯಸಿದಂತೆ ಬಸವಣ್ಣನವರ ತತ್ವಗಳು ಯಾರಿಗೂ ವಿರೋಧವಾಗಿಲ್ಲ ಎಂದರು.

ಮನೆಹಳ್ಳಿ ತಪೋಕ್ಷೇತ್ರ ಮಠದ ಮಹಾಂತ ಶಿವಲಿಂಗಸ್ವಾಮೀಜಿ ಕಾರ್ಯಕ್ರಮ ಉದ್ಘಾಟಿಸಿದರು

ತಾಲೂಕು ಘಟಕದ ಅಧ್ಯಕ್ಷ ಎನ್.ಎಂ. ರಾಜೇಶ್ ಅಧ್ಯಕ್ಷತೆ ವಹಿಸಿದ್ದರು. ಅಖಿಲ ಭಾರತ ವೀರಶೈವ ಮಹಾಸಭಾ ರಾಜ್ಯ ಘಟಕದ ಸದಸ್ಯ ಅನುರಾಧ ಚಂದ್ರಶೇಖರ್, ಮಹಿಳಾ ಜಿಲ್ಲಾಧ್ಯಕ್ಷೆ ದೀಪಿಕ ಕರ್ಣ, ಜಿಲ್ಲಾ ಉಪಾಧ್ಯಕ್ಷೆ ಚಂಪ ಉಮೇಶ್ ಮತ್ತು ಎಸ್.ಎಸ್. ಸುರೇಶ್ ಮಾತನಾಡಿದರು.

ರಾಜ್ಯ ಮಟ್ಟದ ಅಥ್ಲೇಟಿಕ್ ಕೂಟದಲ್ಲಿ ಚಿನ್ನದ ಪದಕ ಪಡೆದ ವಿದ್ಯಾರ್ಥಿ ಎ.ಆರ್. ಅಕ್ಷಯ್ ಮತ್ತು ಪೊನ್ನಂಪೇಟೆ–ವಿರಾಜಪೇಟೆ ವೀರಶೈವ ಸಮಾಜದ ಹೆಚ್ಚು ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಕುಡಿಯುವ ನೀರಿನ ಸಮಸ್ಯೆ ನಿವಾರಣೆಗೆ ನೋಡಲ್ ಅಧಿಕಾರಿಗಳ ನೇಮಕ

ಸಾರ್ವಜನಿಕರಿಂದ ಅಹವಾಲು ಆಲಿಸಿದ ಉಸ್ತುವಾರಿ ಸಚಿವ ವೆಂಕಟೇಶ್

ಹನೂರು: ತಾಲೂಕು ವ್ಯಾಪ್ತಿಯ 46 ಗ್ರಾಮಗಳಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಗಮನಕ್ಕೆ ಬಂದಿದ್ದು, ಕುಡಿಯುವ ನೀರಿನ ಸಮಸ್ಯೆಯಾಗದಂತೆ ಕ್ರಮ ವಹಿಸಲು ನೋಡಲ್ ಅಧಿಕಾರಿಗಳನ್ನು ನೇಮಕ ಮಾಡಲಾಗಿದೆ ಎಂದು ಜಿಲ್ಲಾ ಉಸ್ತುವಾರಿ ಸಚಿವ ಕೆ.ವೆಂಕಟೇಶ್ ತಿಳಿಸಿದರು.

ಹನೂರು ತಾಲೂಕಿನ ವಿವಿಧ ಗ್ರಾಮಗಳಲ್ಲಿ ಇರುವ ಕುಡಿಯುವ ನೀರಿನ ಸಮಸ್ಯೆ ಬಗ್ಗೆ ಸಾರ್ವಜನಿಕರಿಂದ ಮಾಹಿತಿ ಪಡೆದು ನಂತರ ಮಾಧ್ಯಮದವರೊಂದಿಗೆ ಅವರು ಮಾತನಾಡಿದರು.

ಹನೂರು ತಾಲೂಕು ವ್ಯಾಪ್ತಿಯಲ್ಲಿ ಕಳೆದ ಹಲವಾರು ವರ್ಷಗಳಿಂದ ಮಳೆಯಾಗದೆ ಇರುವ ಹಿನ್ನೆಲೆ ಕುಡಿಯುವ ನೀರಿನ ಸಮಸ್ಯೆ ಇರುವ ಬಗ್ಗೆ ಈಗಾಗಲೇ ಸರ್ಕಾರದ ಗಮನಕ್ಕೆ ಬಂದಿದೆ ಕುಡಿಯುವ ನೀರಿನ ಸಮಸ್ಯೆ ಇರುವ ಕಡೆ ಟ್ಯಾಂಕರ್ ಮೂಲಕ ಕುಡಿಯುವ ನೀರು ಪೂರೈಕೆ ಮಾಡಲಾಗುತ್ತಿದೆ ಕೆಲವು ಗ್ರಾಮಗಳಲ್ಲಿ ಸಮರ್ಪಕ ಕುಡಿಯುವ ನೀರು ಪೂರೈಕೆ ಆಗದಿರುವ ಬಗ್ಗೆ ದೂರುಗಳು ಬಂದಿದೆ.

ಈ ನಿಟ್ಟಿನಲ್ಲಿ ಯಾವುದೇ ಗ್ರಾಮಗಳಲ್ಲಿಯೂ ಸಾರ್ವಜನಿಕರು ಹಾಗೂ ಜನ–ಜಾನುವಾರುಗಳಿಗೆ ಯಾವುದೇ ಸಮಸ್ಯೆ ಆಗದಂತೆ ಕಳೆದ ಎರಡು ತಿಂಗಳಿನಿಂದ ನೀರು ಪೂರೈಕೆ ಮಾಡುತ್ತಿದ್ದಾರೆ ಅದೇ ರೀತಿ ನಮ್ಮ ಸರ್ಕಾರವು ಕುಡಿಯುವ ನೀರಿನ ಸಮಸ್ಯೆ ಬಗೆಹರಿಸಲು ಬದ್ಧವಾಗಿದೆ ಎಂದರು.

ಹನೂರು ತಾಲೂಕು ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಸಮಸ್ಯೆ ಇರುವುದು ಗಮನಕ್ಕೆ ಬಂದಿತ್ತು ಆದರೆ ವಾಸ್ತವತೆ ತಿಳಿದುಕೊಳ್ಳಲು ಗ್ರಾಮಗಳಿಗೆ ಭೇಟಿ ನೀಡಿ ಸಾರ್ವಜನಿಕರಿಂದ ಮಾಹಿತಿ ಪಡೆದುಕೊಳ್ಳಲಾಗಿದೆ ಎಂದರು.

ಚಾಮರಾಜನಗರ ಜಿಲ್ಲೆಯಲ್ಲಿ ಕಳೆದ ಹಲವು ವರ್ಷಗಳಿಂದ ಸಮರ್ಪಕ ಮಳೆಯಾಗದೆ ರೈತರು ಸಂಕಷ್ಟಕ್ಕೀಡಾಗಿದ್ದಾರೆ ಈ ಸಂಬಂಧ ಬರಪೀಡಿತ ಜಿಲ್ಲೆ ಎಂದು ಘೋಷಣೆ ಮಾಡುವಂತೆ ರೈತರು ಆಗ್ರಹ ಮಾಡಿದ್ದಾರೆ ಎಂಬ ಪ್ರಶ್ನೆಗೆ ಉತ್ತರಿಸಿದವರು ಈಗಾಗಲೇ ಜಿಲ್ಲಾಡಳಿತ ಸರ್ಕಾರಕ್ಕೆ ಚಾಮರಾಜನಗರ ಜಿಲ್ಲೆಯನ್ನು ಬರಪೀಡಿತ ಜಿಲ್ಲೆ ಎಂದು ಘೋಷಣೆ ಮಾಡಲು ವರದಿ ನೀಡಿದ್ದಾರೆ ಮುಖ್ಯಮಂತ್ರಿಗಳು ಹಾಗೂ ಸಂಬಂಧಪಟ್ಟ ಸಚಿವರ ಜೊತೆ ಚರ್ಚೆ ನಡೆಸಿ ಸೂಕ್ತ ಕ್ರಮ ವಹಿಸುವುದಾಗಿ ತಿಳಿಸಿದರು.

ಹನೂರು ತಾಲೂಕು ವ್ಯಾಪ್ತಿಯಲ್ಲಿ ಕಾಡು ಪ್ರಾಣಿಗಳ ಹಾವಳಿಯಿಂದ ಮಾನವ ಪ್ರಾಣಿ ಸಂಘರ್ಷ ಹೆಚ್ಚಾಗುತ್ತಿದೆ. ಈ ಸಂಬಂಧ ಕಾಡು ಪ್ರಾಣಿಗಳ ಹಾವಳಿಗೆ ತೆಗೆದುಕೊಂಡಿರುವ ಕ್ರಮವೇನು ಎಂಬ ಮಾಧ್ಯಮದವರ ಪ್ರಶ್ನೆಗೆ ಉತ್ತರಿಸಿದವರು ಹನೂರು ತಾಲೂಕು ವ್ಯಾಪ್ತಿಯಲ್ಲಿ ಕಾಡು ಪ್ರಾಣಿಗಳ ಹಾವಳಿ ಹೆಚ್ಚಾಗಿರುವುದು ಗಮನಕ್ಕೆ ಬಂದಿದೆ ಈಗಾಗಲೇ ಅರಣ್ಯ ಇಲಾಖೆ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದ್ದು ಮಾನವ ಪ್ರಾಣಿ ಸಂಘರ್ಷ ತಡೆಯುವಂತೆ ತಿಳಿಸಲಾಗಿದೆ. ಮುಂದಿನ ದಿನಗಳಲ್ಲಿ ಪರಿಣಾಮಕಾರಿಯಾಗಿ ಅಗತ್ಯ ಕ್ರಮ ವಹಿಸಲಾಗುವುದು ಎಂದರು.



ಜಿಲ್ಲಾ ಉಸ್ತುವಾರಿ ಸಚಿವ ಕೆ. ವೆಂಕಟೇಶ್ ಅವರು ಸಾರ್ವಜನಿಕರಿಂದ ಅಹವಾಲು ಆಲಿಸಿದರು.

ಬೇರೆ ಕಡೆ ಉಪಟಳ ನೀಡುವ ಚಿರತೆಯನ್ನು ನಮ್ಮ ಭಾಗದ ಅರಣ್ಯದಲ್ಲಿ ಬಿಡುತ್ತಿದ್ದಾರೆ ಎಂಬ ಪ್ರಶ್ನೆಗೆ ಉತ್ತರಿಸಿ ಅವರು ಬೇರೆ ಕಡೆಯಿಂದ ಚಿರತೆಗಳನ್ನು ಬಿಡುತ್ತಿಲ್ಲ ಒಂದೊಮ್ಮೆ ಬಿಡುತ್ತಿದ್ದರೆ ಅದನ್ನು ತಡೆಯುವ ನಿಟ್ಟಿನಲ್ಲಿ ಕ್ರಮವಹಿಸೋಣ ಎಂದರು.

ಇನ್ನು ನಾಗಮಲೆಗೆ ಹೋಗುವ ಭಕ್ತಾದಿಗಳಿಗೆ ಅರಣ್ಯ ಇಲಾಖೆಯ ವತಿಯಿಂದ ಯಾವುದೇ ರಕ್ಷಣೆ ನೀಡದೇ ಇರುವುದರಿಂದ ಚಿರತೆ ದಾಳಿಗೆ ಬಾಲಕ ಬಲಿಯಾಗಿದ್ದಾನೆ ಎಂಬ ಪ್ರಶ್ನೆಗೆ ಉತ್ತರಿಸಿದವರು ಈ ವಿಚಾರದಲ್ಲಿ ಅರಣ್ಯ ಇಲಾಖೆಯವರು ಲೋಪ ಇರುವ ಬಗ್ಗೆ ಮಾಹಿತಿ ಬಂದಿದೆ ಸಂಬಂಧಪಟ್ಟ ಅರಣ್ಯ ಇಲಾಖೆಯ ಸಚಿವರ ಜೊತೆ ಚರ್ಚೆ ನಡೆಸಿ ಅಗತ್ಯ ಕ್ರಮವಹಿಸಲಾಗುವುದು.

ಚಿರತೆ ಸೆರೆಗೆ ಜಿಲ್ಲಾಡಳಿತದ ವತಿಯಿಂದ ವಿಶೇಷವಾದ ಡ್ರೋನ್ ನೀಡಲಾಗಿದೆ ಅರಣ್ಯ ಇಲಾಖೆಯವರು ಸಹ ಚಿರತೆ ಸೆರೆ ಹಿಡಿಯುವುದರಲ್ಲಿ ಪ್ರಯತ್ನ ಮಾಡುತ್ತಿದ್ದಾರೆ ಕಾದು ನೋಡೋಣ ಎಂದು ಉತ್ತರಿಸಿದರು.

ವಿವಿಧ ಗ್ರಾಮಗಳಿಗೆ ಭೇಟಿ ನೀಡಿದ ವೇಳೆ ಶಾಸಕ ಎಂಆರ್ ಮಂಜುನಾಥ್ ಜಿಲ್ಲಾಧಿಕಾರಿ ಶ್ರೀ ರೂಪ, ಸಿಇಓ ಮೋನಾ ರೋತ್, ಉಪ ವಿಭಾಗಾಧಿಕಾರಿ ದಿನೇಶ್ ಕುಮಾರ್ ಮೀನಾ, ಉಪ ಕಾರ್ಯದರ್ಶಿ ಶೃತಿ, ತಹಸಿಲ್ದಾರ್ ಚೈತ್ರ, ಬಸವರಾಜು ಪೊಲೀಸ್ ಹೆಚ್ಚುವರಿ ವರಿಷ್ಠಾಧಿಕಾರಿ ಶಶಿಧರ್, ಡಿವೈಎಸ್ಪಿ ಮೋಹನ್ ಇನ್‌ಸ್ಪೆಕ್ಟರ್ ಆನಂದ್ ಮೂರ್ತಿ ಇಒ ಉಮೇಶ್, ಗ್ರಾಮೀಣ ಕುಡಿಯುವ ನೀರು ಮತ್ತು ನೈರ್ಮಲ್ಯ ಇಲಾಖೆ ಇಇ ಸಂತೋಷ್ ಕುಮಾರ್ ಹಾಗೂ ಜಿಲ್ಲಾ ಮಟ್ಟದ ಅಧಿಕಾರಿಗಳು ಹಾಜರಿದ್ದರು.

ಮೀಸಲಾತಿ ಕಾಯ್ದೆ 9ನೇ ಪರಿಚ್ಛೇದಕ್ಕೆ ಸೇರಿಸಲು ಆಗ್ರಹ

- ಸರ್ವಪಕ್ಷಗಳ ನಿಯೋಗವನ್ನು ಪ್ರಧಾನಿ ಬಳಿ ಕರೆದೊಯ್ಯಲು ಒತ್ತಾಯ
- ರಾಜ್ಯ, ಕೇಂದ್ರ ಸರ್ಕಾರದ ವಿರುದ್ಧ ಹರಿಹಾಯ್ದ ಮಾಜಿ ಸಂಸದ ಉಗ್ರಪ್ಪ

ಚಾಮರಾಜನಗರ, ಮೇ 18– ರಾಜ್ಯದಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡ ಮತ್ತು ಇತರೆ ಹಿಂದುಳಿದ ವರ್ಗದವರಿಗೆ ಮೀಸಲಾತಿ ಪ್ರಮಾಣವನ್ನು 2022ರಲ್ಲಿ ಶೇ. 56ಕ್ಕೆ ಹೆಚ್ಚಿಸಿದರೂ, ಅದು ಜಾರಿಗೆ ಬಂದಿಲ್ಲ. ಇದನ್ನು ಸಂವಿಧಾನದ 9ನೇ ಪರಿಚ್ಛೇದಕ್ಕೆ ಸೇರಿಸುವ ಮೂಲಕ ಈ ಸಮುದಾಯಗಳಿಗೆ ಶಿಕ್ಷಣ ಮತ್ತು ಉದ್ಯೋಗದಲ್ಲಿ ಅನುಕೂಲ ಮಾಡಿಕೊಡಬೇಕು ಎಂದು ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷ ಹಾಗೂ ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಆಗ್ರಹಿಸಿದರು.

ನಗರದ ಪ್ರವಾಸಿ ಮಂದಿರದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 2023–24 ಹಾಗೂ 2024–25ನೇ ಸಾಲಿನಲ್ಲಿ ಪರಿಶಿಷ್ಟ ಜಾತಿ ಹಾಗೂ ಪಂಗಡ, ಹಿಂದುಳಿದ ಮತ್ತು ಅಲ್ಪಸಂಖ್ಯಾತರು ಶೇ.56ರಷ್ಟು ಮೀಸಲಾತಿಯಡಿ ಉನ್ನತ ವಿದ್ಯಾಭ್ಯಾಸಕ್ಕೆ ಪ್ರವೇಶ ಮತ್ತು ಉದ್ಯೋಗದಲ್ಲಿ ಬಡ್ತಿ ಪಡೆದುಕೊಂಡಿದ್ದಾರೆ. ಈಗ ರಾಜ್ಯ ಹೈಕೋರ್ಟ್ ತಡೆ ನೀಡಿರುವುದರಿಂದ ಈ ಸಮುದಾಯಗಳಿಗೆ ಅನ್ಯಾಯವಾಗಿದೆ. ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸಿದ್ದರೆ, ಬಹುಶಃ ಹೈಕೋರ್ಟ್‌ನಿಂದ ತಡೆಗೆ ಅವಕಾಶವಾಗುತ್ತಿರಲಿಲ್ಲ ಎಂದು ತಿಳಿಸಿದರು.

ಸರ್ವೋಚ್ಚ ನ್ಯಾಯಾಲಯದ ತೀರ್ಪಿನಂತೆ ಒಟ್ಟು ಮೀಸಲಾತಿ ಶೇ.50 ಮೀರುವಂತಿಲ್ಲ. ಆದರೆ, ಮೀಸಲಾತಿ ಹೆಚ್ಚಳಕ್ಕೆ



ರಾಜ್ಯ ವಾಲ್ಮೀಕಿ ಸಮಾಜದ ಸಮಾನ ಮನಸ್ಕರ ವೇದಿಕೆ ಅಧ್ಯಕ್ಷ ಹಾಗೂ ಮಾಜಿ ಸಂಸದ ವಿ.ಎಸ್. ಉಗ್ರಪ್ಪ ಸುದ್ದಿಗೋಷ್ಠಿಯಲ್ಲಿ ಮಾತನಾಡಿದರು.

ಮಾರ್ಗದರ್ಶನಗಳಿಗೆ ಅನುಗುಣವಾಗಿ ಹೆಚ್ಚಿಸಬಹುದು ಎಂದು ತೀರ್ಪಿನಲ್ಲಿದೆ. ಆದರೆ, ಈ ಹೆಚ್ಚಳ ಸಂವಿಧಾನದ 9ನೇ ಪರಿಚ್ಛೇದದಲ್ಲಿ ಸೇರಿಸುವುದು ಅವಶ್ಯಕವಾಗಿದೆ ಎಂದರು.

ಬಸವರಾಜ ಬೊಮ್ಮಾಯಿ ಮುಖ್ಯಮಂತ್ರಿಯಾಗಿದ್ದಾಗ ಎಸ್‌ಟಿ ಸಮುದಾಯಕ್ಕೆ ಶೇ.3ರಿಂದ 7 ಮತ್ತು ಎಸ್‌ಸಿ ಸಮುದಾಯಕ್ಕೆ ಶೇ.15ರಿಂದ 17ಕ್ಕೆ ಮೀಸಲಾತಿ ಹೆಚ್ಚಳ ಮಾಡಿ ಒಟ್ಟಾರೆಯಾಗಿ ಶೇ.50 ರಷ್ಟಿದ್ದ ಮೀಸಲಾತಿಯನ್ನು ಶೇ.56ಕ್ಕೆ ಹೆಚ್ಚಿಸಿದರು. ಆದರೆ, ಸಾಂವಿಧಾನಿಕ ಸಿಂಧುತ್ವ ಕೊಡಿಸುವ ಯಾವ ಮಾರ್ಗಗಳನ್ನು ಅನುಸರಿಸಲಿಲ್ಲ. ಅವರ ಅವಧಿಯಲ್ಲಿ ಕೇಂದ್ರ ಮತ್ತು ರಾಜ್ಯದಲ್ಲಿ ಬಿಜೆಪಿ ಸರ್ಕಾರವೇ ಇದ್ದರೂ ಶೇ. 56 ರಷ್ಟು ಮೀಸಲಾತಿಯನ್ನು 9ನೇ ಪರಿಚ್ಛೇದಕ್ಕೆ ಸೇರಿಸಿ, ಮೀಸಲಾತಿಗೆ ಸಾಂವಿಧಾನಿಕ ಸಿಂಧುತ್ವ ದೊರಕಿಸಲು ಮುತುವರ್ಜಿ ವಹಿಸಲಿಲ್ಲ. 2023ರಲ್ಲಿ ಅಧಿಕಾರಕ್ಕೆ ಬಂದ ಸಿದ್ಧರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರಕ್ಕೂ ಈ ಬಗ್ಗೆ ಅನೇಕ ಬಾರಿ ಮನವಿ ಮಾಡಿದರೂ ಯಾವುದೇ ಪ್ರಯೋಜನವಾಗಲಿಲ್ಲ. ಬರೀ ಮುಂದೂಡುವ ಕೆಲಸವಷ್ಟೇ ಆಯಿತು ಎಂದು ಬೇಸರ ವ್ಯಕ್ತಪಡಿಸಿದರು.

ಕುಲಶಾಸ್ತ್ರ ಅಧ್ಯಯನವಾದರೆ ಎಸ್‌ಟಿಗೆ ಸೇರ್ಪಡೆ: ಕುರುಬ, ಗೊಲ್ಲ, ಕೋಳಿ,

> ಎಸ್‌ಸಿ, ಎಸ್‌ಟಿ, ಒಬಿಸಿ ಮೀಸಲಾತಿ ಹೆಚ್ಚಿಸುವ ಸಂಬಂಧ ರಾಜ್ಯ ಸರ್ಕಾರ ಮುತುವರ್ಜಿವಹಿಸಿ ಸರ್ವ ಪಕ್ಷಗಳ ನಿಯೋಗದೊಂದಿಗೆ ಪ್ರಧಾನಮಂತ್ರಿ ಭೇಟಿ ಮಾಡಿ 9ನೇ ಪರಿಚ್ಛೇದಕ್ಕೆ ಸೇರಿಸಲು ಪ್ರಯತ್ನಿಸಬೇಕು.
>
> –ವಿ.ಎಸ್. ಉಗ್ರಪ್ಪ, ಮಾಜಿ ಸಂಸದರು.

ಕ್ಷೌರಿಕ ಸಮುದಾಯ ಸೇರಿದಂತೆ ಅನೇಕ ಸಮುದಾಯಗಳು ಎಸ್‌ಟಿಗೆ ಸೇರಿಸುವ ಕುರಿತು ಸರ್ಕಾರಕ್ಕೆ ಮನವಿ ಮಾಡಿವೆ. ಅರ್ಹತೆಯಿರುವ ಸಮುದಾಯಗಳನ್ನು ಎಸ್‌ಟಿಗೆ ಸೇರಿಸಲು ನಮ್ಮದು ಯಾವ ಅಭ್ಯಂತರವಿಲ್ಲ. ಆದರೆ, ಆಯಾ ಸಮುದಾಯದ ಕುಲಶಾಸ್ತ್ರ ಅಧ್ಯಯನ ಆಗಬೇಕು ಎಂದು ವಿ.ಎಸ್. ಉಗ್ರಪ್ಪ ತಿಳಿಸಿದರು.

ಸುದ್ದಿಗೋಷ್ಠಿಯಲ್ಲಿ ಕೇಂದ್ರ ಬರ ಪರಿಹಾರ ಸಮಿತಿ ಮಾಜಿ ಅಧ್ಯಕ್ಷ ಎಂ. ರಾಮಚಂದ್ರ, ನಾಯಕ ವಿದ್ಯಾರ್ಥಿ ಸಂಘದ ಉಪಾಧ್ಯಕ್ಷ ಪು.ಶ್ರೀನಿವಾಸ ನಾಯಕ, ಸುರೇಶ್ ನಾಯಕ, ಕಂಡಕ್ಟರ್ ಚಾ.ಸಿ. ಸೋಮನಾಯಕ, ರೇವತಿನಾಯಕ, ರಾಜಪ್ಪ, ಜಯಶ್ರೀ, ಹನುಮಂತರಾಯಪ್ಪ, ಸೈಯದ್ ಎಂ.ಡಿ.ಮುಜಾಯಿದ್ ಪಾಷ, ರಾಜಪ್ಪ ಸೇರಿದಂತೆ ಇತರರು ಇದ್ದರು.

ಹೆಚ್.ಡಿ. ದೇವೇಗೌಡರ ಹುಟ್ಟುಹಬ್ಬ; ಚಾಮರಾಜೇಶ್ವರಸ್ವಾಮಿಗೆ ವಿಶೇಷ ಪೂಜೆ

ಅಖಿಲ ಕರ್ನಾಟಕ ಕನ್ನಡ ಮಹಾಸಭಾದಿಂದ ಸಿಹಿ ಹಂಚಿ ಸಂಭ್ರಮ



ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ ದೇವೇಗೌಡರ ಹುಟ್ಟುಹಬ್ಬ ಆಚರಿಸಲಾಯಿತು.

ಚಾಮರಾಜನಗರ: ಮಾಜಿ ಪ್ರಧಾನಿ ಹೆಚ್. ಡಿ.ದೇವೇಗೌಡ ಅವರ ಹುಟ್ಟುಹಬ್ಬದ ಅಂಗವಾಗಿ ಅಖಿಲ ಕರ್ನಾಟಕ ಕನ್ನಡ ಮಹಾಸಭಾದ ವತಿಯಿಂದ ನಗರದ ಶ್ರೀ ಚಾಮರಾಜೇಶ್ವರ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿ, ಈಡುಗಾಯಿ ಒಡೆದ ಸಿಹಿ ಹಂಚಿ ಸಂಭ್ರಮಿಸಲಾಯಿತು.

ಅಖಿಲ ಕರ್ನಾಟಕ ಕನ್ನಡ ಮಹಾಸಭಾ ಅಧ್ಯಕ್ಷ ಚಾ.ರಂ.ಶ್ರೀ.ನಿವಾಸಗೌಡ ಅವರ ನೇತೃತ್ವದಲ್ಲಿ ಚಾಮರಾಜೇಶ್ವರ ದೇವಸ್ಥಾನದಲ್ಲಿ ಹೆಚ್.ಡಿ.ದೇವೇಗೌಡರ ಹೆಸರಿನಲ್ಲಿ ಅರ್ಚನೆ ವಿಶೇಷ ಪೂಜೆ ಸಲ್ಲಿಸಿ ಈಡುಗಾಯಿ ಒಡೆದು ಸಿಹಿ ಹಂಚಲಾಯಿತು.

ಶ್ರೀನಿವಾಸಗೌಡ ಮಾತನಾಡಿ, ಮಣ್ಣಿನ ಮಗ, ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ದೇಶ, ರಾಜ್ಯಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಶ್ರೀಚಾಮರಾಜೇಶ್ವರಸ್ವಾಮಿ ಅವರಿಗೆ ಹೆಚ್ಚಿನ ಆರೋಗ್ಯ, ಆಯುಸ್ಸು ಕರುಣಿಸಿ ಮತ್ತೊಮ್ಮೆ ರಾಜ್ಯ ಸಭಾ ಸದಸ್ಯರಾಗಿ ಜನಸೇವೆ ಮಾಡುವ ಅವಕಾಶ ದೊರೆಯುವಂತಾಗಲಿ ಎಂದು ಆಶಿಸಿದರು.

ಲಕ್ಷ್ಮೀನರಸಿಂಹ, ನಗರ ಸಭಾ ಮಾಜಿ ಸದಸ್ಯ ಗಣೇಶ ದೀಕ್ಷಿತ್, ಕರಿ ಯನಕಟ್ಟೆ ಚೆನ್ನುಮುತ್ತು, ಅರುಣ್ ಕುಮಾರ್ ಗೌಡ, ಟೌನ್ ಒಕ್ಕಲಿಗರ ಸಂಘದ ಅಧ್ಯಕ್ಷ ಸಿ.ಎನ್.ಮಹೇಶ್, ಪಣ್ಯದ ಹುಂಡಿ ರಾಜು, ಹೊಮ್ಮ ಲೋಕೇಶ್, ಮಹೇಶ್ ಗೌಡ, ಜಗದೀಶ್, ಚಾ.ವೆಂ.ರಾಜಗೋಪಾಲ್, ರವಿಚಂದ್ರ ಪ್ರಸಾದ್ ಕಹಳೆ, ರಾಚಪ್ಪ, ಕಲಾವಿದ ಶಿವಣ್ಣ, ಮುತ್ತುರಾಜು, ರಾಜಣ್ಣ, ಸಿದ್ದಶೆಟ್ಟಿ, ಎಲ್‌ಐಸಿ ರಾಜು, ಮಹದೇವಯ್ಯ ಹಾಜರಿದ್ದರು.

ನಿರಾಶ್ರಿತರ ನೆರವಿಗೆ ಮುಂದಾಗಲು ಮನವಿ

ಕೊಳ್ಳೇಗಾಲ, ಮೇ 18– ಬೆಂಗಳೂರಿನ ಕೋಗಿಲು ಲೇಔಟ್ ಮನೆ ಧ್ವಂಸದಿಂದ ನಿರಾಶ್ರಿತರಾದ ಕುಟುಂಬಗಳಿಗೆ ಪುನರ್ವಸತಿ ಹಾಗೂ ಭೂಹಕ್ಕುಗಳನ್ನು ಒದಗಿಸುವಂತೆ ಒತ್ತಾಯಿಸಿ ಸ್ಲಂ ಜನರ ಸಂಘಟನೆ–ಕರ್ನಾಟಕ ತಾಲೂಕು ಸಮಿತಿಯ ವತಿಯಿಂದ ಸೋಮವಾರ ಮನವಿ ಸಲ್ಲಿಸಿದರು. ಪಟ್ಟಣದ ತಾಲೂಕು ಕಚೇರಿಯಲ್ಲಿ ಇಂದು ಸಮಿತಿಯ ಪದಾಧಿಕಾರಿಗಳು ಆಗಮಿಸಿ ಶಿರಸ್ತೇದಾರ್ ಕೃಪಕಾರ್ ರವರಿಗೆ ಮನವಿಪತ್ರ ಸಲ್ಲಿಸಿ ನಿರಾಶ್ರಿತರ ಪರ ಸರ್ಕಾರ ನಿಲ್ಲಬೇಕು, ಮುಖ್ಯಮಂತ್ರಿಗಳು ಈ ನಿಟ್ಟಿನಲ್ಲಿ ನೊಂದವರ ಪರ ನಿಂತು ಬೆಂಬಲಿಸಬೇಕು ಎಂದು ಆಗ್ರಹಿಸಿದರು.

ಪ್ರಧಾನಿ ಮೋದಿಗೆ ನಾರ್ವೆ ದೇಶದ ಅತ್ಯುನ್ನತ ನಾಗರಿಕ ಗೌರವ



ಓಸ್ಲೋ: ಪ್ರಧಾನಿ ನರೇಂದ್ರ ಮೋದಿ ಅವರಿಗೆ ನಾರ್ವೆ ದೇಶದ ಅತ್ಯುನ್ನತ ನಾಗರಿಕ ಪ್ರಶಸ್ತಿ 'ಗ್ರ್ಯಾಂಡ್ ಕ್ರಾಸ್ ಆಫ್ ದಿ ರಾಯಲ್ ನಾರ್ವೇಜಿಯನ್ ಆರ್ಡರ್ ಆಫ್ ಮೆರಿಟ್' ಅನ್ನು ನೀಡಿ ಗೌರವಿಸಲಾಗಿದೆ. ಇದು ಪ್ರಧಾನಿ ಮೋದಿ ಅವರಿಗೆ ದೊರೆತ 32ನೇ ಅಂತರರಾಷ್ಟ್ರೀಯ ಗೌರವವಾಗಿದೆ.

ನಾರ್ವೆ ದೇಶದ ಹಿತಾಸಕ್ತಿ ಹಾಗೂ ಅಂತರರಾಷ್ಟ್ರೀಯ ಬಾಂಧವ್ಯದಲ್ಲಿ ಅಪಾರವಾದ ಕೊಡುಗೆಗಾಗಿ ಗ್ರ್ಯಾಂಡ್ ಕ್ರಾಸ್ ಆಫ್ ದಿ ರಾಯಲ್ ನಾರ್ವೇಜಿಯನ್ ಆರ್ಡರ್ ಆಫ್ ಮೆರಿಟ್ ಪ್ರಶಸ್ತಿ ನೀಡಿ ಗೌರವಿಸಲಾಗುತ್ತದೆ.

ಕಳೆದ ದಿನವಷ್ಟೇ ಪ್ರಧಾನಿ ಮೋದಿ ಅವರಿಗೆ ಸ್ವೀಡನ್ ಸರ್ಕಾರದ ಪ್ರತಿಷ್ಠಿತ 'ರಾಯಲ್ ಆರ್ಡರ್ ಆಫ್ ದಿ ಪೋಲಾರ್ ಸ್ಟಾರ್' ಪ್ರಶಸ್ತಿ ನೀಡಿ ಗೌರವಿಸಲಾಯಿತು. ಸ್ವೀಡನ್ ಸರ್ಕಾರವು ವಿದೇಶಿ ನಾಯಕರಿಗೆ ನೀಡುವ ಅತ್ಯುನ್ನತ ಗೌರವ ಇದಾಗಿದೆ.

ಸ್ವೀಡನ್ ಬಳಿಕ ಎರಡು ದಿನಗಳ ನಾರ್ವೆ ಪ್ರವಾಸದಲ್ಲಿರುವ ಪ್ರಧಾನಿ ಮೋದಿ ಮೊದಲ ಬಾರಿಗೆ ಆ ದೇಶಕ್ಕೆ ಭೇಟಿ ನೀಡಿದ್ದಾರೆ. ಕಳೆದ 43 ವರ್ಷಗಳಲ್ಲಿ ಭಾರತೀಯ ಪ್ರಧಾನಿಯೊಬ್ಬರ ಮೊದಲ ಭೇಟಿಯೂ ಇದಾಗಿದೆ.

ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹುಟ್ಟುಹಬ್ಬದ ಅಂಗವಾಗಿ

ಆಟೋ ಚಾಲಕರಿಗೆ ಸಮವಸ್ತ್ರ ವಿತರಣೆ

ಡಿಕೆಶಿ ಮುಖ್ಯಮಂತ್ರಿ ಮಾಡಲು ಶ್ರೀನಾಥ್ ಬಾಬು ಮನವಿ



ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅವರ ಅಭಿಮಾನಿ ಬಳಗದ ವತಿಯಿಂದ ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸಲಾಯಿತು.

ಮೈಸೂರು, ಮೇ 18– ಕೆಪಿಸಿಸಿ ಅಧ್ಯಕ್ಷರೂ ಆದ ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅಭಿಮಾನಿ ಬಳಗದ ವತಿಯಿಂದ ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸಲಾಯಿತು.

ನಗರದ ಚಾಮರಾಜ ಜೋಡಿ ರಸ್ತೆಯಲ್ಲಿರುವ ವರ ನಟ ಡಾಕ್ಟರ್ ರಾಜಕುಮಾರ್ ಪುತ್ಥಳಿ ಮುಂಭಾಗ 100ಕ್ಕೂ ಹೆಚ್ಚು ಆಟೋ ಚಾಲಕರಿಗೆ ಸಮವಸ್ತ್ರ ವಿತರಿಸಿದ ಬಳಿಕ ಚಾಮುಂಡಿಬೆಟ್ಟದಲ್ಲಿ ಡಿಕೆಶಿ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಲಾಯಿತು.

ಈ ವೇಳೆ ಮಾತನಾಡಿದ ಕೆಪಿಸಿಸಿ ಸದಸ್ಯ ಜಿ.ಶ್ರೀನಾಥ್ ಬಾಬು, ಡಿ.ಕೆ.ಶಿವಕುಮಾರ್ ಅವರು ಕಾಂಗ್ರೆಸ್ ಕಾರ್ಯಕರ್ತರ ದೊಡ್ಡ ಶಕ್ತಿ. ಅವರ ಪ್ರಭಾವದಿಂದಲೇ ನಾವು ಸೇರಿದಂತೆ ರಾಜ್ಯದೆಲ್ಲೆಡೆ ವಿದ್ಯಾರ್ಥಿಗಳು, ಯುವಕರಿಗೆ ನ್ಯಾಯಪರ ಹೋರಾಟ ಮಾಡುವ ಮನೋಭಾವ ಬಂದಿದೆ. ಡಿಕೆಶಿ ರಾಜಕಾರಣದ ಜೊತೆಗೆ ಅಪಾರ ಸಾಮಾಜಿಕ ಕಾರ್ಯಗಳನ್ನು ಮಾಡಿಕೊಂಡು ಬಂದಿದ್ದಾರೆ. ಅಪಾರ ಅನುಭವಿ ಹಾಗೂ ಟ್ರಬಲ್ ಶೂಟರ್ ಎಂದೇ ಖ್ಯಾತರಾಗಿರುವ ಡಿ.ಕೆ.ಶಿವಕುಮಾರ್ ಅವರು ರಾಜ್ಯದ ಮುಖ್ಯಮಂತ್ರಿಯಾಗಿ ಸೇವೆ ಸಲ್ಲಿಸಲು ವರಿಷ್ಠರು ಅನುವು ಮಾಡಿಕೊಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿ.ರಾಘವೇಂದ್ರ, ಕೃಷ್ಣ, ನಾಗರಾಜ್, ಸುರೇಶ್, ಮಂಜೇಶ್, ಕಿರಣ್, ಯೋಗೇಶ್, ಹರೀಶ್ ನಾಯ್ಡು, ರಮೇಶ್, ಪ್ರಸನ್ನ, ಸಂತೋಷ್ ಕಿರಾಳು, ಕಿಶೋರ್, ಅರುಣ್, ಷಣ್ಮುಖ ಮತ್ತಿತರರು ಉಪಸ್ಥಿತರಿದ್ದರು.


ಅಭಿನಂದನೆ



ನಂಜನಗೂಡು ಡಿವೈಎಸ್‌ಪಿ ಎಂ.ಧರ್ಮೇಂದ್ರ ಅವರನ್ನು ಟಿವಿ9 ರಾಮು, ಮೈಸೂರಿನ ಉದ್ಯಮಿ ದೇವಪ್ರಕಾಶ್ ಇತರರು ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಯದುನಂದನ್, ಪೊಲೀಸ್ ಸಿಬ್ಬಂದಿ, ನಂಜುಂಡೇಶ್ವರಸ್ವಾಮಿ ದೇವಸ್ಥಾನದ ಆಡಳಿತ ಮಂಡಳಿಯವರು ಉಪಸ್ಥಿತರಿದ್ದರು.

ಮೈಸೂರಿನಲ್ಲಿ ಪ್ರವಾಸಿಗರಿಗೆ ಇಲ್ಲ ಭದ್ರತೆ; ದುರಂತ ಸಂಭವಿಸಿದ ಮೇಲೆಯೇ ಎಚ್ಚರಗೊಳ್ಳುವ ಅಧಿಕಾರಿ ವರ್ಗ

● ಮೃಗಾಲಯದ ಬಳಿ ಟಿಕೆಟ್ ಮಾಫಿಯಾ ● ನಕಲಿ ಮೈಸೂರು ರೇಷ್ಮೆ ಸೀರೆ ಮಾರಾಟದ ದಂಧೆ ● ಸಿಎಂ ತವರು ಜಿಲ್ಲೆಯಲ್ಲಿ ವ್ಯವಸ್ಥೆಯ ಅಣಕು



ಮೈಸೂರು, ಮೇ18(ಬಿಎಲ್‌ಯು)– ವಿಶ್ವ ವಿಖ್ಯಾತ ಮೈಸೂರು ಅರಮನೆ ಸೇರಿದಂತೆ ಪ್ರಸಿದ್ಧ ಪ್ರವಾಸಿ ತಾಣಗಳ ತವರೂರಾದ ಸಾಂಸ್ಕೃತಿಕ ನಗರಿ ಮೈಸೂರಿನಲ್ಲಿ ಪ್ರವಾಸಿಗರಿಗೆ ಭದ್ರತೆ ಇಲ್ಲ ಎಂಬ ಮಾತು ವ್ಯಾಪಕವಾಗಿ ಕೇಳಿಬರುತ್ತಿದೆ. ದೇಶ–ವಿದೇಶಗಳಿಂದ ಬರುವ ಪ್ರವಾಸಿಗರನ್ನು ಸುಲಿಗೆ ಮಾಡಲಾಗುತ್ತಿದ್ದು, ಇದಕ್ಕೆ ಕಡಿವಾಣ ಹಾಕುವ ಕಿಂಚಿತ್ತೂ ಪ್ರಯತ್ನ ನಡೆಯುತ್ತಿಲ್ಲ. ಮುಖ್ಯಮಂತ್ರಿ ಸಿದ್ದರಾಮಯ್ಯನವರ ಜಿಲ್ಲೆ ಮೈಸೂರಿನಲ್ಲೇ ಈ ಪರಿಸ್ಥಿತಿ ಎದುರಾಗಿರುವುದು ವ್ಯವಸ್ಥೆಯನ್ನು ಅಣಕಿಸುವಂತಿದೆ.

ದುಬಾರೆ ಆನೆ ಶಿಬಿರದಲ್ಲಿ ಆನೆಗಳ ಕಾದಾಟದಲ್ಲಿ ಮಹಿಳೆಯೊಬ್ಬರು ಮೃತಪಟ್ಟಿದ್ದಾರೆ. ಈ ದುರಂತ ಪ್ರಕರಣದ ನಂತರ ಆನೆಗಳ ಮಜ್ಜನವನ್ನು ವೀಕ್ಷಿಸಲು 100 ಅಡಿ ಅಂತರದ ಲಕ್ಷ್ಮಣ ರೇಖೆಯನ್ನು ಅರಣ್ಯ ಇಲಾಖೆ ಈಗ ಹಾಕಿದೆ. ಇದೇ ಕ್ರಮವನ್ನು ಮೊದಲೇ ಕೈಗೊಂಡಿದ್ದರೆ ಪ್ರಾಯಶಃ ಪ್ರವಾಸಿ ಅಮಾಯಕ ಮಹಿಳೆಯ ಪ್ರಾಣ ಉಳಿಯುತ್ತಿತ್ತು.

ಇಂತಹ ಲೋಪಗಳು ಹೆಸರಾಂತ ಪ್ರವಾಸಿ ತಾಣ ಮೈಸೂರಿನಲ್ಲಿ ಇರುವುದು ಗಂಭೀರ ವಿಚಾರವಾಗಿದೆ. ಮೈಸೂರಿನ ಚಾಮರಾಜೇಂದ್ರ ಮೃಗಾಲಯಕ್ಕೆ ಪ್ರತಿ ದಿನ ಸಾವಿರಾರು ಪ್ರವಾಸಿಗರು ಭೇಟಿ ನೀಡುತ್ತಾರೆ. ಆದರೆ ಪ್ರವಾಸಿಗರಿಗೆ ಮೃಗಾಲಯದಲ್ಲಿ ಭದ್ರತೆ ಖಾತರಿ ಇಲ್ಲ. ಪ್ರಾಣಿಗಳ ಬೋನ್ ಸುತ್ತ ಕಬ್ಬಿಣದ ಗ್ರಿಲ್ ಹಾಕಿದ್ದು, ಯಾವುದೇ ತೊಂದರೆ ಇಲ್ಲ ಎಂದು ಮೃಗಾಲಯ ಪ್ರಾಧಿಕಾರ ಕೈ ತೊಳೆದುಕೊಂಡಿದೆ.

ಆದರೆ ಪ್ರಾಣಿಗಳ ಬೋನ್ ಸೇರಿದಂತೆ ಇತರೆ ಸ್ಥಳಗಳಲ್ಲಿ ಪ್ರವಾಸಿಗರ ಸುರಕ್ಷತೆಗೆ ಸಿಬ್ಬಂದಿಗಳ ನಿಯೋಜಿಸಿಲ್ಲ. ಕೆಲವು ಪ್ರವಾಸಿಗರು ಕ್ರೇಜ್‌ಗಾಗಿ ಕಬ್ಬಿಣದ ಗ್ರಿಲ್ ದಾಟಿ ಬೋನ್ ಬಳಿ ಹೋಗುತ್ತಾರೆ. ಆದರೆ ಇದನ್ನು ತಡೆಯಲು ಅಲ್ಲಿ ಸಿಬ್ಬಂದಿಗಳಿಲ್ಲ.

ಟಿಕೆಟ್ ಮಾಫಿಯಾ: ಮೈಸೂರು ರೈಲ್ವೆ ನಿಲ್ದಾಣ, ಗ್ರಾಮಾಂತರ ಬಸ್ ನಿಲ್ದಾಣ ಸೇರಿದಂತೆ ಇತರೆಡೆಯಿಂದ ಪ್ರವಾಸಿಗರನ್ನು ಕರೆದುಕೊಂಡು ಬರುವ ಕೆಲವು ಆಟೋ ಹಾಗೂ ಕ್ಯಾಬ್ ಚಾಲಕರು ಮೃಗಾಲಯ ಪ್ರವೇಶ ಶುಲ್ಕದ ಹೆಸರಿನಲ್ಲಿ ವಂಚನೆ ಮಾಡುತ್ತಿದ್ದಾರೆ.

ಆಟೋ ಅಥವಾ ಕ್ಯಾಬ್ ಹತ್ತಿಸಿಕೊಂಡ ನಂತರ, ಅಲ್ಲಿ ತುಂಬಾ ಕ್ಯೂ ಇದ್ದು, ನಿಮಗೆ ಸುಲಭವಾಗಿ ಟಿಕೆಟ್ ಕೊಡಿಸುತ್ತೇವೆ ಎಂದು ನಂಬಿಸುತ್ತಾರೆ. ಅಲ್ಲಿಂದ ಹೊರಡುತ್ತಿದ್ದಂತೆ ಮೃಗಾಲಯದ ಬಳಿ ಇರುವ ಮಧ್ಯವರ್ತಿಗಳಿಗೆ ಫೋನ್ ಮಾಡಿ ಟಿಕೆಟ್ ಖರೀದಿಸುವಂತೆ ಹೇಳುತ್ತಾರೆ. ಮೃಗಾಲಯದ ಬಳಿ ಬರುತ್ತಿದ್ದಂತೆ 100 ರೂ. ಟಿಕೆಟ್‌ಗೆ 200 ರಿಂದ 300 ರೂಪಾಯಿ ಸುಲಿಗೆ ಮಾಡಿ, ಅಲ್ಲಿಂದ ಪೇರಿ ಕೀಳುತ್ತಾರೆ. ಪ್ರವೇಶ ದ್ವಾರದ ಶುಲ್ಕದ ಫಲಕ ನೋಡಿದ ಮೇಲೆ ತಾವು ಮೋಸ ಹೋಗಿರುವುದು ಪ್ರವಾಸಿಗರಿಗೆ ಮನವರಿಕೆ ಆಗುತ್ತದೆ.

ಸಿಲ್ಕ್ ಸೀರೆ ಮಾಫಿಯಾ: ರೇಷ್ಮೆ ಸೀರೆಗೆ ಸಾಂಸ್ಕೃತಿಕ ನಗರಿ ಮೈಸೂರು ತುಂಬಾ ಹೆಸರುವಾಸಿ. ಆಟೋ, ಕ್ಯಾಬ್ ಹಾಗೂ ಟೂರಿಸ್ಟ್ ವಾಹನಗಳಲ್ಲಿ ಪ್ರವಾಸಿಗರನ್ನು ಕರೆತರುವವರು ತಮಗೆ ಕಮಿಷನ್ ಸಿಗುವ ಶೋ ರೂಂಗಳಿಗೆ ಕರೆದೊಯ್ಯುತ್ತಾರೆ.

ಇದೇ ವರ್ಜಿನಲ್ ಮೈಸೂರು ರೇಷ್ಮೆ ಸೀರೆ ಎಂದು ನಂಬಿಸಿ ನೂರಾರು ಸೀರೆಗಳನ್ನು ಸಾವಿರಾರು ರೂಪಾಯಿಗಳಿಗೆ ಮಾರಿ ಮೋಸ ಮಾಡುತ್ತಾರೆ.

ಬೆಂಗಳೂರು–ಮೈಸೂರು ಎಕ್ಸ್‌ಪ್ರೆಸ್‌ವೇ, ಹುಣಸೂರು ರಸ್ತೆ ಸೇರಿದಂತೆ ಮೈಸೂರು ನಗರವನ್ನು ಇತರೆಡೆ ಸಂಪರ್ಕಿಸುವ ರಸ್ತೆ ಆರಂಭದಲ್ಲೇ ಮಾಫಿಯಾ ಪ್ರವಾಸಿಗರನ್ನು ಭೇಟಿ ಮಾಡಿ ಮೋಸದ ಬಲೆಗೆ ಬೀಳಿಸಿಕೊಳ್ಳುತ್ತದೆ.

ಮೈಸೂರು ಅರಮನೆ ಬಳಿ ನಿಲ್ಲುವ ಕೆಲವರು ಇಂದು ಮೈಸೂರು ಪ್ಯಾಲೆಸ್‌ಗೆ ರಜಾ ಎಂದು ನಂಬಿಸಿ ತಮಗೆ ಕಮಿಷನ್ ಸಿಗುವ ಸೀರೆ ಶೋ ರೂಂಗಳಿಗೆ ಪ್ರವಾಸಿಗರನ್ನು ಕರೆದೊಯ್ದು ಟೋಪಿ ಹಾಕುತ್ತಾರೆ.

ಮುಖ್ಯಮಂತ್ರಿ ಸಿದ್ದರಾಮಯ್ಯ ಅವರ ತವರು ಜಿಲ್ಲೆ ಮೈಸೂರಿನಲ್ಲೇ ಈ ಪರಿಸ್ಥಿತಿಯಾದರೆ ಉಳಿದ ಜಿಲ್ಲೆಗಳ ಗತಿ ಏನು ಎಂಬ ಪ್ರಶ್ನೆ ಎದುರಾಗಿದೆ. ಸಿದ್ದರಾಮಯ್ಯ ಅವರು ಪ್ರತಿ ವಾರ ಮೈಸೂರಿಗೆ ಬರುತ್ತಾರೆ, ಏನಾದರೂ ಅನಾಹುತವಾದರೆ ನಮ್ಮ ತಲೆದಂಡವಾಗುತ್ತದೆ ಎಂಬ ಚೂರು ಪಾರು ಹೆದರಿಕೆ ಅಧಿಕಾರಿಗಳಿಗೆ ಇಲ್ಲ.

ರಾತ್ರಿ 1 ಗಂಟೆವರೆಗೂ ಮದ್ಯ ಮಾರಾಟ

ಪ್ರವಾಸಿಗರಿಗೆ ಊಟ ಮಾಡಲು ಇಲ್ಲದಂತೆ ರಾತ್ರಿ 11 ಗಂಟೆಗೇ ಹೋಟೆಲ್‌ಗಳ ಬಂದ್ ಮಾಡಿಸಲಾಗುತ್ತಿದೆ. ಆದರೆ, ಮದ್ಯದ ನಶೆಯಲ್ಲಿ ತೇಲಾಡಲು ರಾತ್ರಿ 1 ಗಂಟೆವರೆಗೂ ಬಾರ್ ಅಂಡ್ ರೆಸ್ಟೋರೆಂಟ್‌ಗಳು ಬಾಗಿಲು ತೆರೆದಿರುತ್ತವೆ.

ಮೈಸೂರಿನ ಬಾರ್ ಅಂಡ್ ರೆಸ್ಟೋರೆಂಟ್‌ಗಳು ರಾತ್ರಿ 11 ಗಂಟೆಯೊಳಗೆ ಬಂದ್ ಆಗಬೇಕೆಂದು ಪೊಲೀಸ್ ಇಲಾಖೆ ಕಟ್ಟಾಜ್ಞೆ ವಿಧಿಸಿದೆ. ಆದರೆ ರಾತ್ರಿ 1 ಗಂಟೆಯಾದರೂ ಕೆಲವು ಬಾರ್ ಅಂಡ್ ರೆಸ್ಟೋರೆಂಟ್‌ಗಳಲ್ಲಿ ಕದ್ದು ಮುಚ್ಚಿ ವ್ಯಾಪಾರ ನಡೆಯುತ್ತಿದೆ.

ಇತ್ತೀಚಿಗೆ ಮೈಸೂರಿನ ವಿಜಯನಗರದ ಪಬ್‌ನಲ್ಲಿ ರಾತ್ರಿ 11.45 ಗಂಟೆಗೆ ಕುಡಿದ ಮತ್ತಿನಲ್ಲಿ ವ್ಯಕ್ತಿಯೊಬ್ಬನನ್ನು ರೌಡಿ ಶೀಟರ್‌ಗಳು ಕೊಲೆ ಮಾಡಿದ್ದರು. ಇಷ್ಟಾದರೂ ಪೊಲೀಸರು ರಾತ್ರಿ 11 ಗಂಟೆಗೆ ಬಾರ್ ಅಂಡ್ ರೆಸ್ಟೋರೆಂಟ್‌ಗಳನ್ನು ಮುಚ್ಚಿಸುವ ಗೋಜಿಗೆ ಹೋಗುತ್ತಿಲ್ಲ. ರಾತ್ರಿ 11 ಗಂಟೆ ಆಗುತ್ತಿದ್ದಂತೆ ಹೋಟೆಲ್ ಮುಚ್ಚಿಸುವ ಪೊಲೀಸರು ಬಾರ್ ಅಂಡ್ ರೆಸ್ಟೋರೆಂಟ್, ಪಬ್ ಬಂದ್ ಮಾಡಿಸದೇ ಇರುವ ಬಗ್ಗೆ ಜನ ನಿತ್ಯ ಹಿಡಿಶಾಪ ಹಾಕುತ್ತಿದ್ದಾರೆ.

ಅಧಿಕಾರಿಗಳು ಬುದ್ಧಿ ಕಲಿಯಲು ಹೆಣ ಬೀಳಬೇಕೆ?

ಯಾರದ್ದಾದರೂ ಹೆಣ ಬಿದ್ದಾಗ ಮಾತ್ರ ಪೊಲೀಸ್ ಇಲಾಖೆ ಸೇರಿದಂತೆ ಜಿಲ್ಲಾಡಳಿತ ಸುರಕ್ಷತಾ ಕ್ರಮ ಕೈಗೊಳ್ಳುತ್ತದೆ. ಅಲ್ಲಿಯವರೆಗೆ ಜಾಣ ಮೌನ ವಹಿಸಿರುತ್ತದೆ.

ಮೈಸೂರು ಅರಮನೆ ಮುಂದೆ ಹೀಲಿಯಂ ಗ್ಯಾಸ್ ಸಿಲಿಂಡರ್ ಬ್ಲಾಸ್ಟ್ ಆಗಿ ಬಲೂನು ವ್ಯಾಪಾರಿ ಸಲೀಂ ಸೇರಿದಂತೆ ಅಮಾಯಕ ದಾರಿ ಹೋಕ ನಾಲ್ಕು ಮಂದಿ ಮೃತಪಟ್ಟಿದ್ದರು. ಈ ದುರಂತದ ನಂತರ ಪಾಠ ಕಲಿತ ಪೊಲೀಸ್ ಇಲಾಖೆ ಹಿಲೀಯಂ ಗ್ಯಾಸ್ ಬಲೂನು ನಿಷೇಧಿಸಿತು.

ಹೀಗೆ ಯಾರಾದರೂ ಮೃತಪಟ್ಟು ದುರಂತ ಸಂಭವಿಸಿದಾಗ ಸುರಕ್ಷತಾ ಮಂತ್ರ ಜಪಿಸುವ ಅಧಿಕಾರಿಗಳು ಮೊದಲೇ ಕ್ರಮ ಕೈಗೊಂಡರೆ ಅನಾಹುತ ತಪ್ಪಿಸಬಹುದು.

ಕರ್ನಾಟಕ ಸಂಘಟಕರ ಸಮಾವೇಶದ ಸರ್ವಾಧ್ಯಕ್ಷರಾಗಿ ಮೈಸೂರಿನ ರಂಗಕರ್ಮಿ ರಾಜಶೇಖರ ಕದಂಬ ಆಯ್ಕೆ



ಮೈಸೂರು, ಮೇ 18– ಕರ್ನಾಟಕ ರಂಗ ಪರಿಷತ್ತು ಹಾಗೂ ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಯೋಗದಲ್ಲಿ ಮೇ 25ರಂದು ಬೆಂಗಳೂರಿನಲ್ಲಿ ಆಯೋಜಿಸಿರುವ 'ಕರ್ನಾಟಕ ಸಂಘಟಕರ ಸಮಾವೇಶ'ದ ಸರ್ವಾಧ್ಯಕ್ಷರಾಗಿ ಮೈಸೂರಿನ ಹಿರಿಯ ರಂಗಕರ್ಮಿ ರಾಜಶೇಖರ ಕದಂಬ ಆಯ್ಕೆಯಾಗಿದ್ದಾರೆ.

ಈ ಸಮಾವೇಶದ ಮೂಲಕ ನಾಡಿನೆಲ್ಲೆಡೆ ಇರುವ ರಂಗ ಸಂಘಟಕರು ಒಂದೇ ಸೂರಿನಡಿ ಒಗ್ಗೂಡಿ ರಂಗಭೂಮಿಯ ಸ್ಥಿತಿಗತಿ, ಭವಿಷ್ಯದ ಜ್ವಲಂತ ಸವಾಲು ಹಾಗೂ ಸಮಸ್ಯೆಗಳ ಬಗ್ಗೆ ಚರ್ಚಿಸಿ, ಮಹತ್ವದ ನಿರ್ಣಯ ಕೈಗೊಳ್ಳಲಿದ್ದಾರೆ. ಚರ್ಚೆಗೆ ಸೀಮಿತವಾಗದೆ ಕಲಾಭಿಮಾನಿಗಳ ಹೊಸ ಆಲೋಚನೆಗಳಿಗೂ ಈ ಸಮಾವೇಶ ವೇದಿಕೆಯಾಗಲಿದೆ.

ಬಹುಮುಖ ಪ್ರತಿಭೆ: ರಾಜಶೇಖರ ಕದಂಬ ಅವರ ಹುಟ್ಟೂರು ಬೆಂಗಳೂರು ಬನ್ನೇರುಘಟ್ಟಕ್ಕೆ ಹತ್ತಿರವಿರುವ ಗೊಟ್ಟಿಗೆರೆ. ಆದರೆ, ಇವರ ಸಂತೃಪ್ತ ಜೀವನಕ್ಕೆ ತಂಪೆರೆದ ಕರ್ಮಭೂಮಿ ಮೈಸೂರು. 82ನೇ ವಯಸ್ಸಿನಲ್ಲೂ ರಂಗ ಚಟುವಟಿಕೆಗಳಲ್ಲಿ ಸಕ್ರಿಯರಾಗುವ ಮೂಲಕ ಮೈಸೂರಿನ ಸಾಂಸ್ಕೃತಿಕ ವಲಯದಲ್ಲಿ ತುಂಬಾ ಚಿರಪರಿಚಿತರಾಗಿದ್ದಾರೆ. 'ಕದಂಬ' ಹವ್ಯಾಸಿ ರಂಗಭೂಮಿ ವೇದಿಕೆ ಸ್ಥಾಪಿಸಿ ನಾಟಕ ಸೇರಿದಂತೆ ನೂರಾರು ಕಾರ್ಯಕ್ರಮಗಳನ್ನು ನಡೆಸಿದ್ದಾರೆ. ನಟನೆ, ನಿರ್ದೇಶನ, ಕೃತಿ ರಚನೆ, ಸಂಘಟನೆ, ಸಮಾಜಸೇವೆಯಲ್ಲೂ ಗುರುತಿಸಿಕೊಂಡಿದ್ದಾರೆ. ಇವರಿಗೆ ಬಹುತೇಕ ಎಲ್ಲಾ ವೃತ್ತಿ ಹವ್ಯಾಸಿ ರಂಗಕಲಾವಿದರು ಹಾಗೂ ತಂತ್ರಜ್ಞರು ಅತ್ಯಾಪ್ತರು. ಮೇರು ಕಲಾವಿದ ಏಣಗಿ ಬಾಳಪ್ಪನವರಿಂದ ಹಿಡಿದು ಇತ್ತೀಚಿನ ಕಲಾವಿದರವರೆಗೂ ಒಡನಾಟ ಹೊಂದಿದ್ದಾರೆ.

ಅಪಾರ ರಂಗ ಸೇವೆ: ಕಿರಿಯ ವಯಸ್ಸಿಗೆ ರಂಗಭೂಮಿಗೆ ಕಾಲಿಟ್ಟ ರಾಜಶೇಖರ ಕದಂಬ ಅವರಿಗೆ 'ಸಾಂಸ್ಕೃತಿಕ ನಗರಿ' ಮೈಸೂರು ಕಲೋಪಾಸನೆಗೆ ವೇದಿಕೆ ನಿರ್ಮಿಸಿಕೊಟ್ಟಿತು. 1962ರಲ್ಲಿ ನಾಟಕದಲ್ಲಿ ಅಭಿನಯಿಸುವ ಮೂಲಕ 'ರಂಗಪ್ರವೇಶ' ಮಾಡಿದ ಇವರು ಮೇರು ಕಲಾವಿದರಾದ ಎಂ.ಪಿ.ಶಂಕರ್, ಕಲ್ಯಾಣಕುಮಾರ್, ತೂಗುದೀಪ ಶ್ರೀನಿವಾಸ್, ಸುಂದರಕೃಷ್ಣ ಅರಸ್ ಅವರ ಗರಡಿಯಲ್ಲಿ ಪಳಗಿದರು. ಎಂ.ಪಿ.ನಾಗರಾಜ್ ನಿರ್ದೇಶನದ 'ನವರತ್ನ' ನಾಟಕದಲ್ಲಿ ನಾಯಕಿಯ ತಂದೆ ಪಾತ್ರ ನಿರ್ವಹಿಸಿ ಸೈ ಎನಿಸಿಕೊಂಡರು. 1963ರಲ್ಲಿ 'ಕದಂಬ ಮಿತ್ರ ಕಲಾ ಸಂಘ' ಸಂಸ್ಥೆ ಕಟ್ಟಿದರು. ಪುರೂರವ, ವಿಷಜ್ವಾಲೆ, ರಣದುಂದುಭಿ, ರಣಪ್ರಚಂಡ, ಎಚ್ಚಮನಾಯಕ, ಟಿಪ್ಪುಸುಲ್ತಾನ್, ಸೋಹ್ರಾಬ್ ರುಸ್ತುಂ, ಶಾಂತವೀರ ಕೆಂಪೇಗೌಡ, ಸಂದಿಗ್ಧ, ದುರ್ಗಾಸ್ತಮಾನ, ಬೆಟ್ಟದಜೀವ, ರಕ್ತಾಕ್ಷಿ, ಸೂರ್ಯಶಿಕಾರಿ, ತುಘಲಕ್, ಹೆಜ್ಜಾಲ, ಬೇಡರಕಣ್ಣಪ್ಪ, ಬೆಟ್ಟದ ಅರಸು, ಸಂಧ್ಯಾರಾಗ, ಇದಿಯಮ್ಮ, ಆಷಾಡಭೂತಿ, ಶಾಪ ಮೊದಲಾದ ನಾಟಕಗಳಲ್ಲಿ ಅಭಿನಯಿಸಿದರು. ಈ ನಡುವೆ ಅವರ ರಂಗತಂಡದ ಹೆಸರು 'ಕದಂಬ ರಂಗವೇದಿಕೆ'ಯಾಗಿ ಬದಲಾಯಿತು.

ಸಿನಿಮಾದಲ್ಲಿ ನಟನೆ: ರಂಗಭೂಮಿ ಜೊತೆಗೆ ಕಿರುತೆರೆ ಹಾಗೂ ಬೆಳ್ಳಿತೆರೆಯಲ್ಲೂ ಮಿಂಚಿರುವ ರಾಜಶೇಖರ ಕದಂಬ, ಪೋಸ್ಟ್‌ಮಾಸ್ಟರ್, ಜನುಮದ ಜೋಡಿ, ಚಂದನದ ಗೊಂಬೆ, ಮುನಿಯನ ಮಾದರಿ, ಅಶ್ವಮೇಧ, ಮುತ್ತಿನಹಾರ, ಹೂವುಹಣ್ಣು, ಮೇಘ ಬಂತು ಮೇಘ, ಸಿಂಹದಮರಿ, ಟೋನಿ, ವಂಶಿ, ಯಜಮಾನ ಮುಂತಾದ ಚಲನಚಿತ್ರಗಳಲ್ಲಿ ನಟಿಸಿದ್ದಾರೆ. ಹಾಗೆಯೇ ಕವಿಭಿಕ್ಷೆ, ರೈತನ ಬಂಧು, ಕೂಡಿಬಾಳೋಣ, ನಮ್ ಮೇಷ್ಟ್ರು, ಸರಸಮ್ಮನ ಸಮಾಧಿ ಮುಂತಾದ ಧಾರಾವಾಹಿಗಳಲ್ಲಿಯೂ ನಟಿಸಿದ್ದಾರೆ. ಹತ್ತಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದಾರೆ. ಶ್ರೀಕಂಠದರ್ಶನ, ಆಪ್ತ ಬೆಳ್ಳಿಭಾಗ್ಯ, ವಿರಾಜಮಾನ ಮೊದಲಾದ ಗ್ರಂಥಗಳನ್ನು ಸಂಪಾದಿಸಿದ್ದಾರೆ. ಚಿತ್ರಕಲಾ ಬ್ರಹ್ಮ ಪಿ.ಆರ್.ತಿಪ್ಪೇಸ್ವಾಮಿ ಪ್ರತಿಷ್ಠಾನದ ಅಧ್ಯಕ್ಷರಾಗಿ ಸೇವೆ ಸಲ್ಲಿಸುತ್ತಿದ್ದಾರೆ. ಕರ್ನಾಟಕ ನಾಟಕ ಅಕಾಡೆಮಿ ಪ್ರಶಸ್ತಿ, ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ, ಕೆ.ವಿ.ಶಂಕರೇಗೌಡ ಪ್ರಶಸ್ತಿ ಸೇರಿದಂತೆ ವಿವಿಧ ಸಂಘ ಸಂಸ್ಥೆಗಳ ಅನೇಕ ಪ್ರಶಸ್ತಿ–ಪುರಸ್ಕಾರಗಳಿಗೆ ಭಾಜನರಾಗಿದ್ದಾರೆ.

ಮೈಸೂರು ಜಿಲ್ಲಾ ಬಿಜೆಪಿಯ ವಿವಿಧ ಮೋರ್ಚಾಗಳಿಗೆ ಪದಾಧಿಕಾರಿಗಳ ನೇಮಕ



ರಾಮಕೃಷ್ಣ

ಮೈಸೂರು, ಮೇ 18– ಬಿಜೆಪಿ ಮೈಸೂರು ಜಿಲ್ಲಾ ವಿವಿಧ ಮೋರ್ಚಾಗಳಿಗೆ ನೂತನ ಪದಾಧಿಕಾರಿಗಳನ್ನು ನೇಮಿಸಿ, ನಗರಾಧ್ಯಕ್ಷ ಎಲ್.ನಾಗೇಂದ್ರ, ಆದೇಶಿಸಿದ್ದಾರೆ.

ಯುವ ಮೋರ್ಚಾ ಅಧ್ಯಕ್ಷರಾಗಿ ರಾಕೇಶ್, ಪ್ರಧಾನ ಕಾರ್ಯದರ್ಶಿಗಳಾಗಿ ಸಚಿನ್ ಮತ್ತು ಲೋಹಿತ್, ಮಹಿಳಾ ಮೋರ್ಚಾ ಅಧ್ಯಕ್ಷರಾಗಿ ಮೋನಿಕಾ, ಪ್ರಧಾನ ಕಾರ್ಯದರ್ಶಿಗಳಾಗಿ ಕಾವೇರಿ ಹಾಗೂ ರಶ್ಮಿ, ರೈತ ಮೋರ್ಚಾ ಅಧ್ಯಕ್ಷರಾಗಿ ಸುರೇಶ್ ಬೆಲವತ್ತ ಪ್ರಧಾನ ಕಾರ್ಯದರ್ಶಿಗಳಾಗಿ ವೀರಭದ್ರ ಹಾಗೂ ವಿನಯ್, ಎಸ್‌ಟಿ ಮೋರ್ಚಾ ಅಧ್ಯಕ್ಷರಾಗಿ ಪಡುವಾರಹಳ್ಳಿ ಎಂ.ರಾಮಕೃಷ್ಣ, ಪ್ರಧಾನ ಕಾರ್ಯದರ್ಶಿಗಳಾಗಿ ಕೃಷ್ಣನಾಯಕ್ ಹಾಗೂ ನಾಗೇಶ್ ನಾಯಕ್, ಎಸ್ಸಿ ಮೋರ್ಚಾ ಅಧ್ಯಕ್ಷರಾಗಿ ಕಾರ್ತಿಕ್ ಮರಿಯಪ್ಪ, ಪ್ರಧಾನ ಕಾರ್ಯದರ್ಶಿಗಳಾಗಿ ವಡಿವೇಲು ಹಾಗೂ ಸ್ವಾಮಿ, ಓಬಿಸಿ ಮೋರ್ಚಾ ಅಧ್ಯಕ್ಷರಾಗಿ ಜಗದೀಶ್, ಪ್ರಧಾನ ಕಾರ್ಯದರ್ಶಿಗಳಾಗಿ ಸತೀಶ್ ಹಾಗೂ ನಾಗೇಶ್ ಯಾದವ್, ಅಲ್ಪಸಂಖ್ಯಾತ ಮೋರ್ಚಾ ಅಧ್ಯಕ್ಷರಾಗಿ ವಿನೋದ್ ಜೈನ್, ಪ್ರಧಾನ ಕಾರ್ಯದರ್ಶಿಗಳಾಗಿ ಸಂತೋಷ್ ಕುಮಾರ್ ಪೌಲ್ ಹಾಗೂ ತನ್ವೀರ್ ಅವರನ್ನು ಆಯ್ಕೆ ಮಾಡಲಾಗಿದೆ.

ಬಿಜೆಪಿ ರಾಜ್ಯಾಧ್ಯಕ್ಷ ಬಿ.ವೈ.ವಿಜಯೇಂದ್ರ ಸೂಚನೆ ಮೇರೆಗೆ ಪಕ್ಷದ ಸಂಘಟನಾತ್ಮಕ ದೃಷ್ಟಿಯಿಂದ ವಿವಿಧ ಮೋರ್ಚಾಗಳಿಗೆ ಪದಾಧಿಕಾರಿಗಳನ್ನು ನಿಯೋಜಿಸಿರುವುದಾಗಿ ಎಲ್.ನಾಗೇಂದ್ರ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಹಣ್ಣು–ಹಂಪಲು ವಿತರಣೆ



ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬದ ಪ್ರಯುಕ್ತ ರಾಜ್ಯ ಒಕ್ಕಲಿಗರ ಸಂಘದ ನಿರ್ದೇಶಕ ಡಾ.ಎಂ.ಬಿ.ಮಂಜೇಗೌಡರ ಸ್ನೇಹ ಬಳಗ ವತಿಯಿಂದ ಮೈಸೂರಿನ ಕೆ.ಆರ್.ಆಸ್ಪತ್ರೆಯಲ್ಲಿ ಹಣ್ಣು–ಹಂಪಲು ವಿತರಿಸಲಾಯಿತು.

ಬೋಗಾದಿ ರಸ್ತೆ ವೈಟ್ ಟ್ಯಾಪಿಂಗ್ ಕಾಮಗಾರಿ ಆರಂಭ

ಸುದೀರ್ಘ ಬಾಳಿಕೆ ಬರುವ ನಿಟ್ಟಿನಲ್ಲಿ ಮೈಸೂರಿನ 12 ರಸ್ತೆಗಳ 393.85 ಕೋಟಿ ವೆಚ್ಚದಲ್ಲಿ ಆಧುನೀಕರಣ



ಮೈಸೂರಿನ ಬೋಗಾದಿ ರಸ್ತೆಯಲ್ಲಿ ವೈಟ್ ಟ್ಯಾಪಿಂಗ್ ಕಾಮಗಾರಿ ಆರಂಭಿಸಲಾಗಿದೆ.

ಮೈಸೂರು,ಮೇ.18(ಎಂಟಿವೈ)– ಮೈಸೂರಿನ ಪ್ರಮುಖ 12 ರಸ್ತೆಗಳಲ್ಲಿ ವೈಟ್ ಟ್ಯಾಪಿಂಗ್ ಮಾಡಲು ಮುಂದಾಗಿರುವ ಸರ್ಕಾರ ಮಾನಂದವಾಡಿ ರಸ್ತೆ ಬಳಿಕ ಇದೀಗ ಬೋಗಾದಿ ರಸ್ತೆಯಲ್ಲಿ ವೈಟ್ ಟ್ಯಾಪಿಂಗ್(ಕಾಂಕ್ರೀಟ್) ಕಾಮಗಾರಿ ಆರಂಭಿಸಿದೆ.

ಮೈಸೂರಲ್ಲಿ ಗುಣಮಟ್ಟದ ಹಾಗೂ ದೀರ್ಘಕಾಲ ಬಾಳಿಕೆ ಬರುವ ರಸ್ತೆಯಾಗಿ ಪರಿವರ್ತಿಸಲು ಸರ್ಕಾರ 393.85 ಕೋಟಿ ರೂ. ವೆಚ್ಚದಲ್ಲಿ ಮೈಸೂರಿನ 12 ರಸ್ತೆಗಳನ್ನು 46.08 ಕಿ.ಮಿ ದೂರ ಕಾಂಕ್ರೀಟ್ ರಸ್ತೆಗಳಾಗಿ (ವೈಟ್ ಟ್ಯಾಪಿಂಗ್) ಮಾರ್ಪಡಿಸಲು ಅನುದಾನ ಬಿಡುಗಡೆ ಮಾಡಿದೆ. ಈಗಾಗಲೇ ಟೆಂಡರ್ ಮುಗಿದಿದ್ದು, ಕಾಮಗಾರಿ ಆರಂಭಿಸಲು ಸಿದ್ಧತೆ ಮಾಡಿಕೊಳ್ಳಲಾಗಿದೆ. ಮೊದಲ ಹಂತದಲ್ಲಿ ಎನ್‌ಐಇ ಕಾಲೇಜು ಬಳಿ ಮಾನಂದವಾಡಿ ರಸ್ತೆಯನ್ನು ಕಾಂಕ್ರೀಟ್ ರಸ್ತೆಯಾಗಿಸುವ ಕಾಮಗಾರಿ ಆರಂಭಿಸಲಾಗಿದೆ. ಇದೀಗ ಎರಡನೇ ರಸ್ತೆಯ ಕಾಮಗಾರಿ ಆರಂಭಿಸಲಾಗಿದೆ.

ಬೋಗಾದಿ ರಸ್ತೆಯಲ್ಲಿ ಕಾಮಗಾರಿ ಆರಂಭ: ಮೈಸೂರಿನ ನ್ಯೂ ಸಯ್ಯಾಜಿರಾವ್ ರಸ್ತೆಯ ಡಿ.ಬನುಮಯ್ಯ ಕಾಲೇಜು ಜಂಕ್ಷನ್‌ನಿಂದ ರಮಾ ವಿಲಾಸ ರಸ್ತೆ ಎಂಡಿಎ ಜಂಕ್ಷನ್, ಕುಕ್ಕರಹಳ್ಳಿ ಕೆರೆ ರೈಲ್ವೆ ಗೇಟ್ ಮೂಲಕ ಬೋಗಾದಿ ರಸ್ತೆ ರಿಂಗ್ ರಸ್ತೆ ಜಂಕ್ಷನ್‌ವರೆಗೆ 6 ಕಿ.ಮೀ. ದೂರದ ರಸ್ತೆಯನ್ನು 34.24 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಯನ್ನಾಗಿ ಮಾಡಲು ಕ್ರಮ ಕೈಗೊಳ್ಳಲಾಗಿದ್ದು, ಇದೀಗ ಬೋಗಾದಿ ರಿಂಗ್ ರಸ್ತೆ ಜಂಕ್ಷನ್‌ನಿಂದ ಕಾಮಗಾರಿ ಆರಂಭಿಸಲಾಗಿದೆ.

ಏಕ ಪಥದಲ್ಲಿ ಕಾಮಗಾರಿ ಆರಂಭ: ಬೋಗಾದಿ ರಸ್ತೆಯಲ್ಲಿ ಏಕ ಪಥದಲ್ಲಿ ಕಾಂಕ್ರೀಟ್ ರಸ್ತೆ ಕಾಮಗಾರಿ ಆರಂಭಿಸಲಾಗಿದೆ. ಮೈಸೂರು ಕಡೆಯಿಂದ ಬೋಗಾದಿ ಕಡೆಗೆ ಹೋಗುವ ವಾಹನಗಳು ಮಾತ್ರ ಬೋಗಾದಿ ರಸ್ತೆಯಲ್ಲಿ ಸಂಚರಿಸಲು ಅವಕಾಶ ಕಲ್ಪಿಸಲಾಗಿದೆ. ಆದರೆ, ಬೋಗಾದಿ ಕಡೆಯಿಂದ ಬರುವ ವಾಹನಗಳು ಪರ್ಯಾಯ ರಸ್ತೆಯಾದ ಹುಣಸೂರು ರಸ್ತೆ, ಜನತಾನಗರದ ರಸ್ತೆಯಲ್ಲಿ ಸಂಚರಿಸುವಂತೆ ಸೂಚನೆ ನೀಡಲಾಗಿದೆ.

ಡಾಂಬರ್ ತೆರವು: ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕಾಗಿ ಬೋಗಾದಿ ರಸ್ತೆಯಲ್ಲಿ ಕಾಂಕ್ರೀಟ್ ತೆರವು ಮಾಡುವ ಪ್ರಕ್ರಿಯೆ ಆರಂಭಿಸಲಾಗಿದೆ. ಕಾಂಕ್ರೀಟ್ ತೆರವು ಪ್ರಕ್ರಿಯೆ ಪೂರ್ಣಗೊಂಡ ನಂತರ ಜೆಲ್ಲಿ ಮೆಟ್ಲಿಂಗ್ ಮಾಡಿ, ಕಬ್ಬಿಣ ಕಟ್ಟಿದ ನಂತರ ಯಂತ್ರದ ಮೂಲಕ ಕಾಂಕ್ರೀಟ್ ರಸ್ತೆ ನಿರ್ಮಿಸಲಾಗುತ್ತದೆ. ಒಂದು ಪಥದಲ್ಲಿ 2 ಕಿ.ಮೀ ದೂರ ಕಾಂಕ್ರೀಟ್ ರಸ್ತೆ ನಿರ್ಮಿಸಿ ಕ್ಯೂರಿಂಗ್ ಮಾಡುವ ಅವಧಿಯಲ್ಲಿ ಮುಂದಿನ ರಸ್ತೆ ನಿರ್ಮಾಣ ಕಾರ್ಯ ಮುಂದುವರೆಸಲಾಗುತ್ತದೆ.

ಎನ್‌ಓಸಿ ಪಡೆದ ಬಳಿಕ: ಬೋಗಾದಿ ರಸ್ತೆಯಲ್ಲಿ ವೈಟ್ ಟ್ಯಾಪಿಂಗ್ ಕಾರ್ಯ ಆರಂಭಕ್ಕೂ ಮುನ್ನ ವಿವಿಧ ಇಲಾಖೆಗಳಿಂದ ಸಮ್ಮತಿ ಪಡೆಯಲಾಗಿದೆ. ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕಾಗಿ ರಸ್ತೆ ಅಗೆಯುತ್ತಿರುವ ಪಥದಲ್ಲಿ ಕುಡಿಯುವ ನೀರು, ಒಳಚರಂಡಿ, ವಿದ್ಯುತ್, ದೂರ ಸಂಪರ್ಕ, ಗ್ಯಾಸ್ ಪೈಪ್‌ಲೈನ್ ಸೇರಿದಂತೆ ಯಾವುದೇ ಕೇಬಲ್ ಮತ್ತು ಪೈಪ್‌ಲೈನ್ ಇಲ್ಲದೇ ಇರುವುದನ್ನು ಖಚಿತಪಡಿಸಿಕೊಂಡು ಕಾಮಕಾರಿ ಆರಂಭಿಸಲಾಗಿದೆ.

ತ್ವರಿತಗತಿಯಲ್ಲಿ ಕಾಮಗಾರಿ

"ಯೋಜನೆ ಆಯ್ಕೆಯಾಗಿರುವ ಮೈಸೂರಿನ 12 ರಸ್ತೆಗಳಲ್ಲಿ ಎರಡನೇ ರಸ್ತೆಯಾಗಿ ಬೋಗಾದಿ ರಸ್ತೆಯಲ್ಲಿ ವೈಟ್ ಟ್ಯಾಪಿಂಗ್ ಕಾಮಗಾರಿ ಆರಂಭಿಸಲಾಗಿದೆ. ಬನುಮಯ್ಯ ಕಾಲೇಜು ಜಂಕ್ಷನ್‌ನಿಂದ ಬೋಗಾದಿ ರಿಂಗ್ ರಸ್ತೆ ಜಂಕ್ಷನ್‌ವರೆಗೆ 6 ಕಿಮಿ ದೂರ 34.24 ಕೋಟಿ ರೂ. ವೆಚ್ಚದಲ್ಲಿ ಕಾಂಕ್ರೀಟ್ ರಸ್ತೆಯನ್ನಾಗಿ ಪರಿವರ್ತಿಸಲಾಗುತ್ತಿದೆ. ಕ್ರಾಫರ್ಡ್ ಭವನದಿಂದ ಕುಕ್ಕರಹಳ್ಳಿ ಕೆರೆ ಜಂಕ್ಷನ್‌ನಲ್ಲಿರುವ ಸಿಗ್ನಲ್‌ವರೆಗೆ ಕಾಂಕ್ರೀಟ್ ರಸ್ತೆ ಮಾಡುವುದನ್ನು ಸದ್ಯಕ್ಕೆ ತಡೆ ಹಿಡಿಯಲಾಗಿದೆ. ರೈಲ್ವೆ ಹಳಿಗೆ ಅಂಡರ್ ಪಾಸ್ ನಿರ್ಮಾಣ ಪ್ರಸ್ತಾಪವಿರುವುದರಿಂದ 600 ಮೀಟರ್ ಕಾಂಕ್ರೀಟ್ ರಸ್ತೆ ನಿರ್ಮಾಣಕ್ಕೆ ಗುತ್ತಿಗೆದಾರರಿಗೆ ಅವಕಾಶ ನೀಡಿಲ್ಲ. ಈ ವಿಸ್ತೀರ್ಣದಷ್ಟು ದೂರ ರಿಂಗ್ ರಸ್ತೆಯ ನಂತರ ಬೋಗಾದಿ ರಸ್ತೆಯಲ್ಲಿ ಕಾಂಕ್ರೀಟ್ ರಸ್ತೆ ನಿರ್ಮಿಸುವಂತೆ ಸೂಚಿಸಲಾಗುತ್ತದೆ.

-ಮಹದೇವಸ್ವಾಮಿ, ಎಇಇ, ಲೋಕೋಪಯೋಗಿ ಇಲಾಖೆ

ಸಿಎಸ್‌ಕೆ ವಿರುದ್ಧ ಗೆದ್ದ ಎಸ್‌ಆರ್‌ಹೆಚ್ ಪ್ಲೇಆಫ್‌ಗೆ



ಚೆನ್ನೈ, ಮೇ 18– ಪ್ಯಾಟ್ ಕಮ್ಮಿನ್ಸ್ ಅವರ ಮಾರಕ ಬೌಲಿಂಗ್ ದಾಳಿ ಹಾಗೂ ನಾಯಕ ಇಶಾನ್ ಕಿಶಾನ್ ಅವರ ಅರ್ಧಶತಕದ ನೆರವಿನಿಂದ ಸನ್‌ರೈಸರ್ಸ್ ಹೈದರಾಬಾದ್ ಚೆನ್ನೈ ಸೂಪರ್ ಕಿಂಗ್ಸ್ ವಿರುದ್ಧ 5 ವಿಕೆಟ್‌ಗಳ ಭರ್ಜರಿ ಜಯ ಸಾಧಿಸಿದೆ. ಇದರೊಂದಿಗೆ ಹೈದರಾಬಾದ್ ಪ್ಲೇ ಆಫ್ ಪ್ರವೇಶಿಸಿದರೇ, ಗೆಲ್ಲಲೇಬೇಕಾಗಿದ್ದ ಪಂದ್ಯದಲ್ಲಿ ಸೋತ ಚೆನ್ನೈ ಪ್ಲೇ ಆಫ್ ಹಾದಿಯನ್ನು ಮತ್ತಷ್ಟು ದೂರವಾಗಿಸಿಕೊಂಡಿದೆ.

ಇಲ್ಲಿನ ಎಂ.ಎ.ಚಿದಂಬರಂ ಕ್ರೀಡಾಂಗಣದಲ್ಲಿ ನಡೆದ ಪಂದ್ಯದಲ್ಲಿ ಟಾಸ್ ಗೆದ್ದು ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಸೂಪರ್ ಕಿಂಗ್ಸ್ 20 ಓವರ್‌ಗಳಲ್ಲಿ 7 ವಿಕೆಟ್ ನಷ್ಟಕ್ಕೆ 180 ರನ್ ಗಳಿಸಿತು. ಬಳಿಕ 181 ರನ್‌ಗಳ ಗೆಲುವಿನ ಗುರಿ ಬೆನ್ನತ್ತಿದ ಸನ್‌ರೈಸರ್ಸ್ ಹೈದರಾಬಾದ್ 19 ಓವರ್‌ಗಳಲ್ಲಿ 5 ವಿಕೆಟ್ ನಷ್ಟಕ್ಕೆ ಗೆಲುವಿನ ನಗೆ ಬೀರಿತು.

ತಂಡದ ಪರ ಇನ್ನಿಂಗ್ಸ್ ಆರಂಭಿಸಿದ ಟ್ರಾವಿಸ್ ಹೆಡ್ 6, ಅಭಿಷೇಕ್ ಶರ್ಮಾ 26 ರನ್ ಗಳಿಸಿ ಬಹುಬೇಗ ನಿರ್ಗಮಿಸಿದರು. ಈ ವೇಳೆ 3ನೇ ವಿಕೆಟ್‌ಗೆ ಜೊತೆಯಾದ ನಾಯಕ ಇಶಾನ್ ಕಿಶಾನ್ ಹಾಗೂ ಹೆನ್ರಿಕ್ ಕ್ಲಾಸೇನ್ 75 ರನ್ ಜೊತೆಯಾಟವಾಡುವ ಮೂಲಕ ತಂಡಕ್ಕೆ ಚೇತರಿಕೆ ನೀಡಿದರು. ಈ ವೇಳೆ 47 ರನ್ ಗಳಿಸಿದ್ದ ಕ್ಲಾಸೆನ್ ಔಟಾಗುವ ಮೂಲಕ 3 ರನ್‌ಗಳಿಂದ ಅರ್ಧಶತಕದಿಂದ ವಂಚಿತರಾದರು. ಮತ್ತೊಂದೆಡೆ ಅಬ್ಬರಿಸಿದ ಇಶಾನ್ ಕಿಶನ್ 47 ಎಸೆತಗಳಲ್ಲಿ 3 ಸಿಕ್ಸರ್, 7 ಬೌಂಡರಿ ಒಳಗೊಂಡ 70 ರನ್ ಗಳಿಸಿ ವಿಕೆಟ್ ಒಪ್ಪಿಸಿದರು. ಉಳಿದಂತೆ ನಿತೀಶ್ ಕುಮಾರ್ ರೆಡ್ಡಿ 11, ಸಲೀಲ್ ಅರೋರ 10, ಸ್ಮರಣ್ ರವಿಚಂದ್ರನ್ 5 ರನ್ ಗಳಿಸಿದರು. ಸಿಎಸ್‌ಕೆ ಪರ ಬೌಲಿಂಗ್‌ನಲ್ಲಿ ಮುಖೇಶ್ ಚೌಧರಿ 2, ಅನ್ಶುಲ್ ಕಾಂಬೋಜ್, ನೂರ್ ಅಹಮ್ಮದ್, ಅಕೀಲ್ ಹುಸೇನ್ ತಲಾ ಒಂದೊಂದು ವಿಕೆಟ್ ಉರುಳಿಸಿದರು.

ಇದಕ್ಕೂ ಮುನ್ನಾ ಮೊದಲು ಬ್ಯಾಟಿಂಗ್ ಮಾಡಿದ ಚೆನ್ನೈ ಪರ ಸಂಜು ಸ್ಯಾಮ್ಸನ್ 27, ಋತುರಾಜ್ ಗಾಯಕ್ವಾಡ್ 15, ಊರ್ವಿಲ್ ಪಟೇಲ್ 13, ಕಾರ್ತಿಕ್ ಶರ್ಮಾ 32, ಡೆವಾಲ್ಡ್ ಬ್ರೇವಿಸ್ 44, ಶಿವಂ ದುಬೆ 26, ಪ್ರಶಾಂತ್ ವೀರ್ 11 ಅಕೀಲ್ ಜುಸೇನ್ 3 ರನ್ ಗಳಿಸಿದರು. ಎಸ್‌ಆರ್‌ಹೆಚ್ ಪರ ಬೌಲಿಂಗ್‌ನಲ್ಲಿ ಪ್ಯಾಟ್ ಕಮ್ಮಿನ್ಸ್ 3, ಶಕೀಬ್ ಹುಸೇನ್ 2, ಇಶಾನ್ ಮಲಿಂಗಾ, ಪ್ರಫುಲ್ ಹಿಂಗೆ ತಲಾ ಒಂದೊಂದು ವಿಕೆಟ್ ಕಬಳಿಸಿದರು.

ಜನಸಾಮಾನ್ಯರ ಕೆಲಸ ಕಾರ್ಯಗಳಿಗೆ ತೊಡಕಾಗದಂತೆ

ಕಾರ್ಯ ನಿರ್ವಹಿಸಿ, ಇಲ್ಲ ಜಾಗ ಖಾಲಿ ಮಾಡಿ

ಕೆಡಿಪಿ ಸಭೆಯಲ್ಲಿ ಅಧಿಕಾರಿಗಳಿಗೆ ಶಾಸಕ ದರ್ಶನ್ ಧ್ರುವನಾರಾಯಣ್ ಎಚ್ಚರಿಕೆ

ನಂಜನಗೂಡು, ಮೇ 18– ಜನಸಾಮಾನ್ಯರ ಕೆಲಸ ಕಾರ್ಯಗಳಿಗೆ ತೊಡಕಾಗದಂತೆ ಅಧಿಕಾರಿಗಳು ಎಚ್ಚರಿಕೆಯಿಂದ ಕೆಲಸ ನಿರ್ವಹಿಸಬೇಕು. ಇಲ್ಲವಾದಲ್ಲಿ ಅಸಡ್ಡೆ ತೋರುವ ಅಧಿಕಾರಿಗಳು ಇಲ್ಲಿಂದ ಜಾಗ ಖಾಲಿ ಮಾಡಬೇಕು ಎಂದು ಶಾಸಕ ದರ್ಶನ್ ಧ್ರುವನಾರಾಯಣ್ ಎಚ್ಚರಿಸಿದರು.

ನಗರದ ವಾಲ್ಮೀಕಿ ಭವನದಲ್ಲಿ ಸೋಮವಾರ ಆಯೋಜಿಸಿದ್ದ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆಯಲ್ಲಿ ಮಾತನಾಡಿದ ಅವರು, ನಗರದ ಬಜಾರ್ ರಸ್ತೆಯನ್ನು ಫುಟ್‌ಪಾತ್ ವ್ಯಾಪಾರಿಗಳು ಅತಿಕ್ರಮಿಸಿಕೊಂಡು ವಾಹನ ಸಂಚಾರಕ್ಕೆ ತೊಡಕುಂಟು ಮಾಡುತ್ತಿರುವ ಬಗ್ಗೆ ಹಲವು ಬಾರಿ ಸ್ಥಳೀಯರು ದೂರಿದ್ದಾರೆ. ಜೊತೆಗೆ ಈ ಬಗ್ಗೆ ಕ್ರಮ ಕೈಗೊಳ್ಳುವಂತೆ ನಿರ್ದೇಶನ ನೀಡಿದ್ದರೂ, ನಗರಸಭೆ ಅಧಿಕಾರಿಗಳು ಯಾವುದೇ ಕ್ರಮಕ್ಕೆ ಮುಂದಾಗದಿರುವ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಶಾಸಕರು, ನಗರಸಭೆ ಎಇಇ ಮಹೇಶ್ ಅವರ ಕಾರ್ಯ ವೈಖರಿಗೆ ಆಕ್ಷೇಪ ವ್ಯಕ್ತಪಡಿಸಿ ಸಾರ್ವಜನಿಕರ ಕೆಲಸ ಕಾರ್ಯಗಳನ್ನು ನಿರ್ವಹಿಸಲು ಆಸಕ್ತಿ ಇಲ್ಲದಿದ್ದಲ್ಲಿ ಇಲ್ಲಿಂದ ಜಾಗ ಖಾಲಿ ಮಾಡುವಂತೆ ಎಚ್ಚರಿಸಿದರು.

ತಾಲೂಕಿನ ಗ್ರಾಮೀಣ ಪ್ರದೇಶದಲ್ಲಿ ಕುಡಿಯುವ ನೀರಿನ ಅಸಮರ್ಪಕ ಪೂರೈಕೆ ಬಗ್ಗೆ ಜನರು ದೂರುತ್ತಿದ್ದಾರೆ. ಕೆಲವೆಡೆ ನೀರಿನ ಟ್ಯಾಂಕ್‌ಗಳು ಶಿಥಿಲಾವಸ್ಥೆಗೆ ತಲುಪಿದ್ದು, ಜಲಜೀವನ್ ಮಿಷನ್ ಯೋಜನೆ ಮೂಲಕ ಕುಡಿಯುವ ನೀರು ತಲುಪಿಸುವ ಯೋಜನೆ ಸಮರ್ಪಕವಾಗಿ ಅನುಷ್ಠಾನಗೊಂಡಿಲ್ಲ. ಹೀಗಾಗಿ ಆದ್ಯತೆ ಮೇರೆಗೆ ತ್ವರಿತವಾಗಿ ಕಾಮಗಾರಿ ಪೂರ್ಣಗೊಳಿಸಲು ಮುಂದಾಗುವಂತೆ ಸೂಚಿಸಿದರು.



ನಂಜನಗೂಡಿನ ವಾಲ್ಮೀಕಿ ಭವನದಲ್ಲಿ ಕರ್ನಾಟಕ ತ್ರೈಮಾಸಿಕ ಪ್ರಗತಿ ಪರಿಶೀಲನಾ ಸಭೆ ನಡೆಯಿತು.

ಡ್ರಗ್ಸ್ ಹಾವಳಿ ತಡೆಗಟ್ಟಿ: ತಾಲೂಕಿನಲ್ಲಿ ಅಬಕಾರಿ ಇಲಾಖೆ ಅಧಿಕಾರಿಗಳ ಕಾರ್ಯ ವೈಖರಿ ಬಗ್ಗೆ ಆಕ್ಷೇಪ ವ್ಯಕ್ತಪಡಿಸಿದ ಶಾಸಕ ದರ್ಶನ್ ಧ್ರುವನಾರಾಯಣ್ ಗ್ರಾಮೀಣ ಭಾಗದಲ್ಲಿ ಅಕ್ರಮ ಮದ್ಯ ಮಾರಾಟ ವ್ಯಾಪಕವಾಗಿ ನಡೆಯುತ್ತಿರುವ ಬಗ್ಗೆ ಪ್ರಶ್ನಿಸಿದರು. ಈ ಸಂದರ್ಭ ಅಬಕಾರಿ ಇಲಾಖೆ ಸಿಬ್ಬಂದಿ ಸರ್ಕಾರದಿಂದ ಇಲಾಖೆಗೆ ಮದ್ಯ ಮಾರಾಟದ ಟಾರ್ಗೇಟ್ ನೀಡಲಾಗಿದ್ದು, ಜೊತೆಗೆ ರಾಜಸ್ವ ಸಂಗ್ರಹಣೆಯಲ್ಲಿ ಕೊರತೆಯಾಗಲಿದೆ ಎಂದು ಸಮಜಾಯಿಷಿ ನೀಡಿದರು. ಆದರೆ ಆದಾಯದ ಹೆಸರಿನಲ್ಲಿ ಅನಧಿಕೃತ ಮದ್ಯ ಮಾರಾಟಕ್ಕೆ ಅವಕಾಶ ಕಲ್ಪಿಸುವುದು ಸರಿಯಲ್ಲ. ಅಕ್ರಮ ಮದ್ಯ ಮಾರಾಟ ನಿಯಂತ್ರಣಕ್ಕೆ ಮದ್ಯ ದಂಗಡಿಗಳ ಮಾಲೀಕರ ಮೇಲೆ ದೂರು ದಾಖಲಿಸುವಂತೆ ಸಲಹೆ ನೀಡಿದರು.

ಇನ್ನು ತಾಲೂಕಿನಲ್ಲಿ ಡ್ರಗ್ಸ್ ಹಾವಳಿ ವ್ಯಾಪಕವಾಗಿರುವ ಬಗ್ಗೆ ಆತಂಕ ವ್ಯಕ್ತಪಡಿಸಿದ ಶಾಸಕರು ಡ್ರಗ್ಸ್ ನಿಯಂತ್ರಣಕ್ಕೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಲು ಸೂಚಿಸಿದರು.

ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಮಾತನಾಡಿ, ಎಸ್‌ಐಆರ್ ಜಾರಿಗೊಳಿಸಲು ಕೇಂದ್ರ ಚುನಾವಣಾ ಆಯೋಗ ನೀಡಿರುವ ಮಾನದಂಡಗಳ ಬಗ್ಗೆ ವಿವರಣೆ ನೀಡುವಂತೆ ತಹಸೀಲ್ದಾರ್ ಅವರಿಗೆ ಸೂಚಿಸಿದರು. ಈ ಬಗ್ಗೆ ಪ್ರತಿಕ್ರಿಯಿಸಿದ ತಹಸೀಲ್ದಾರ್ ಸ್ಮಿತಾ ರಾಮು ಶೀಘ್ರ ಈ ಬಗ್ಗೆ ಅಧಿಕೃತ ಆದೇಶ ಹೊರ ಬೀಳಲಿದೆ ಎಂದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಎಸ್‌ಐಆರ್ ಜಾರಿ ಸಂದರ್ಭ ರಾಜಕೀಯ ಪಕ್ಷದವರಿಗೆ ಸಮರ್ಪಕ ಮಾಹಿತಿ ನೀಡುವಂತೆಯೂ ಹಾಗೂ ಪಾರದರ್ಶಕವಾಗಿ ಮತದಾರರ ಪಟ್ಟಿ ಪರಿಷ್ಕರಣೆಗೆ ಮುಂದಾಗುವಂತೆ ತಿಳಿಸಿದರು.

ಸಭೆಯಲ್ಲಿ ತಾಪಂ ಇಓ ಜೆರಾಲ್ಡ್ ರಾಜೇಶ್, ಟಿಎಪಿಸಿಎಂಎಸ್ ಅಧ್ಯಕ್ಷ ಕುರಹಟ್ಟಿ ಮಹೇಶ್, ಪಿಎಲ್‌ಡಿ ಬ್ಯಾಂಕ್ ಅಧ್ಯಕ್ಷ ಚೆನ್ನಪ್ಪ ಸೇರಿದಂತೆ ತಾಲೂಕು ಮಟ್ಟದ ಅಧಿಕಾರಿಗಳು ಭಾಗವಹಿಸಿದ್ದರು.

> "ಅಧಿಕಾರಿಗಳು ತಮ್ಮ ಕಾರ್ಯ ನಿರ್ವಹಣೆಯಲ್ಲಿ ದಕ್ಷತೆ ತೋರಬೇಕು. ಯಾವುದೇ ಕಾರಣಕ್ಕೂ ಜನಸಾಮಾನ್ಯರನ್ನು ಕಚೇರಿಗಳಿಗೆ ಅಲೆಸಬಾರದು. ಈ ಬಗ್ಗೆ ಹಲವು ಬಾರಿ ಸೂಚನೆ ನೀಡಲಾಗಿದ್ದು, ಅಕಸ್ಮಾತ್ ಅಧಿಕಾರಿಗಳ ಬೇಜವಾಬ್ದಾರಿ ವರ್ತನೆ ಮುಂದುವರೆದಲ್ಲಿ ಅಂತಹವರ ವಿರುದ್ಧ ಕ್ರಮಕ್ಕೆ ಶಿಫಾರಸ್ಸು ಮಾಡುತ್ತೇನೆ. – **ಸುನೀಲ್ ಬೋಸ್, ಸಂಸದ.**

ಚಪ್ಪರದಹಳ್ಳಿ ಪಿಎಸಿಎಸ್ ಸೊಸೈಟಿ ಜೆಡಿಎಸ್ ತೆಕ್ಕೆಗೆ



ನೂತನವಾಗಿ ನಿರ್ದೇಶಕರನ್ನು ಗ್ರಾಮಸ್ಥರು ಅಭಿನಂದಿಸಿದರು.

ಬೆಟ್ಟದಪುರ, ಮೇ 18– ಇಲ್ಲಿಗೆ ಸಮೀಪದ ಚಪ್ಪರದಹಳ್ಳಿ ಕೃಷಿ ಪತ್ತಿನ ಸಹಕಾರ ಸಂಘದ ಆಡಳಿತ ಮಂಡಳಿಗೆ ಭಾನುವಾರ ನಡೆದ ಚುನಾವಣೆಯಲ್ಲಿ ಜೆಡಿಎಸ್ ಬೆಂಬಲಿತ 8 ಅಭ್ಯರ್ಥಿಗಳು ಮತ್ತು ಕಾಂಗ್ರೆಸ್ ಬೆಂಬಲಿತ 4 ಅಭ್ಯರ್ಥಿಗಳು ನಿರ್ದೇಶಕರಾಗಿ ಆಯ್ಕೆಯಾಗಿದ್ದಾರೆ.

ಸಾಲಗಾರ ಕ್ಷೇತ್ರದಿಂದ ಜೆಡಿಎಸ್ ಬೆಂಬಲಿತರಾದ ಕುಶಾಲ ಸಿ.ಎಸ್, ಸುರೇಶ್ ಸಿ.ಪಿ, ರವಿ ಸಿ.ಪಿ, ಸಂಗೀತಾ ವೆಂಕಟೇಶ್, ಮುಕುಂದಚಾರಿ, ಪುಟ್ಟಮ್ಮ, ಅಶ್ವಥ್ ಕುಮಾರ್.ಸಿ ಮತ್ತು ಕಾಂಗ್ರೆಸ್ ಬೆಂಬಲಿತರಾದ ರಘು ಸಿ.ಪಿ, ಜಗದೀಶ್, ಗೌರಮ್ಮ ನಂದೀಶ್ ಹಾಗೂ ಸಾಲಗಾರರಲ್ಲದ ಕ್ಷೇತ್ರದಿಂದ ಜೆಡಿಎಸ್ ಬೆಂಬಲಿತ ಶೀಲಾ ನಾಗೇಂದ್ರ, ಪರಿಶಿಷ್ಟ ಪಂಗಡದಿಂದ ಕಾಂಗ್ರೆಸ್ ಬೆಂಬಲಿತ ಚೆಲುವ ನಾಯಕ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಚುನಾವಣಾಧಿಕಾರಿಯಾಗಿ ಸಹಕಾರ ಇಲಾಖೆಯ ಹಿತೇಂದ್ರ ಕಾರ್ಯ ನಿರ್ವಹಿಸಿದರು. ಈ ವೇಳೆ ಪಿಎಸಿಎಸ್ ಆವರಣದಲ್ಲಿ ನೆರೆದಿದ್ದ ಜೆಡಿಎಸ್ ಮುಖಂಡರು ಪಟಾಕಿ ಸಿಡಿಸಿ ಸಿಹಿ ಹಂಚಿ ಸಂಭ್ರಮಾಚರಣೆ ನಡೆಸಿದರು. ಇದೇ ವೇಳೆ ಸಂಘದ ಸಿಇಓ ಹುಚ್ಚಪ್ಪ ಎಲ್ಲಾ ನಿರ್ದೇಶಕರನ್ನು ಅಭಿನಂದಿಸಿದರು. ಸಿಬ್ಬಂದಿ ಸಿ.ಕೆ.ಮಂಜುನಾಥ್, ಎಂ.ಆರ್.ಯೋಗಾನಂದ, ಹೆಚ್.ಜೆ.ಅವಿನಾಶ್, ರವಿಕುಮಾರ್ ಸೇರಿದಂತೆ ಜೆಡಿಎಸ್ ಮತ್ತು ಕಾಂಗ್ರೆಸ್ ಪಕ್ಷದ ಮುಖಂಡರು, ಸದಸ್ಯರು ಇದ್ದರು.

ನಾಳೆ ತಾಪಂ ಸಾಮಾನ್ಯ ಸಭೆ

ಹುಣಸೂರು, ಮೇ 18– ತಾಪಂ ಸಾಮಾನ್ಯ ಸಭೆ ಮೇ 20ರಂದು ಆಡಳಿತಾಧಿಕಾರಿ ಅಧ್ಯಕ್ಷತೆಯಲ್ಲಿ ನಡೆಯಲಿದ್ದು, ಎಲ್ಲಾ ಇಲಾಖೆ ತಾಲೂಕು ಮಟ್ಟದ ಅಧಿಕಾರಿಗಳು ತಪ್ಪದೇ ಹಾಜರಾಗಬೇಕೆಂದು ತಾಪಂ ಇಓ ಹೊಂಗಯ್ಯ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ಧರ್ಮದ ಪುನರುತ್ಥಾನಕ್ಕೆ ಬುನಾದಿ ಹಾಕಿದ ಅಂಬೇಡ್ಕರ್

ಭಾರತೀಯ ಬೌದ್ಧ ಮಹಾಸಭಾ ಅಧ್ಯಕ್ಷ ಸೋಸಲೆ ನಾಗೇಶ್

ತಿ.ನರಸೀಪುರ, ಮೇ 18– ಬೌದ್ಧ ಧರ್ಮ ಸ್ವೀಕರಿಸಿದ ಅಂಬೇಡ್ಕರ್ ಅವರು ಧರ್ಮದ ಪುನರುತ್ಥಾನಕ್ಕೆ ಬುನಾದಿ ಹಾಕಿದರು ಎಂದು ತಾಲೂಕು ಭಾರತೀಯ ಬೌದ್ಧ ಮಹಾಸಭಾ ಅಧ್ಯಕ್ಷ ಸೋಸಲೆ ನಾಗೇಶ್ ತಿಳಿಸಿದರು.

ಪಟ್ಟಣದ ತ್ರಿವೇಣಿ ನಗರದಲ್ಲಿರುವ ಬುದ್ಧ ವಿಹಾರದಲ್ಲಿ ನಡೆದ ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ಶೋಷಿತರು ಮತ್ತು ಹಿಂದುಳಿದ ವರ್ಗಗಳು ಜಾಗೃತರಾಗಿ ದೇಶದ ಮೂಲ ಧರ್ಮವಾದ ಬೌದ್ಧ ಧರ್ಮದ ಪಾಲನೆ ಹಾಗೂ ಬುದ್ಧನ ಕಡೆಗೆ ನಡೆಯಲು ಚಿಂತನೆ ಮಾಡುವಂತೆ ಕರೆ ನೀಡಿದರು.

ಅಂಬೇಡ್ಕರ್ ಅವರನ್ನು ಗೌರವಿಸುವ ಪ್ರತಿಯೊಬ್ಬರೂ ಸಮಾನತೆ ಮತ್ತು ಕರುಣೆ ಸಂದೇಶ ಸಾರುವ ಬೌದ್ಧ ಧರ್ಮವನ್ನು ಅನುಸರಿಸಿ ಬುದ್ಧ ಮಾರ್ಗದಲ್ಲಿ ನಡೆಯಬೇಕು. ಪ್ರಪಂಚದ ಎಲ್ಲಾ ಧರ್ಮಗಳನ್ನು ಅಧ್ಯಯನ ಮಾಡಿ ಭರತ ಖಂಡದ ಮೂಲ ಧರ್ಮ ಬುದ್ಧನ ದಮ್ಮವನ್ನು ಅಂಬೇಡ್ಕರ್ ಸ್ವೀಕರಿಸಿದರು. ಅಂಬೇಡ್ಕರ್ ಅವರನ್ನು ಪ್ರೀತಿಸುವ, ಗೌರವಿಸುವ ನಾವು ಬುದ್ಧನ ಮಾರ್ಗವನ್ನು ಅನುಸರಿಸುವಲ್ಲಿ ಹಾಗೂ ಬೌದ್ಧ ಧರ್ಮ ಆಚರಣೆ ಮಾಡುವಲ್ಲಿ ಭಿನ್ನತೆ ತೋರಿಸುತ್ತೇವೆ. ಉತ್ತಮ ತತ್ವಗಳು, ಸಂದೇಶಗಳನ್ನು ನೀಡಿರುವ ಬುದ್ಧರ ಮಾರ್ಗದಲ್ಲಿ ನಡೆಯಬೇಕು ಎಂದರು.



ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು.

ಅಂಬೇಡ್ಕರ್ ಸಾಹಿತ್ಯ ಅಕಾಡೆಮಿ ಸಂಸ್ಥಾಪಕ ಸಾಹಿತಿ ಮಲ್ಕುಂಡಿ ಮಹದೇವಸ್ವಾಮಿ ಮಾತನಾಡಿ, ಭಾರತದಲ್ಲಿ ಬೌದ್ಧ ಧರ್ಮವನ್ನು ಬೆಳೆಸಿ ನೆಲೆ ನಿಲ್ಲುವಂತೆ ಮಾಡಲು ಸಾಕಷ್ಟು ಸವಾಲು ಮತ್ತು ವೈರುಧ್ಯಗಳಿವೆ. ಹಾಗಾಗಿ ಅಂಬೇಡ್ಕರ್ ಅನುಯಾಯಿಗಳು ಬೌದ್ಧ ಧರ್ಮವನ್ನು ಅನುಸರಿಸುವ ಮುಖೇನ ದಮ್ಮವನ್ನು ಶಾಶ್ವತವಾಗಿ ದೇಶದಲ್ಲಿ ನೆಲೆಯೂರುವಂತೆ ಮಾಡಬೇಕು ಎಂದರು.

ಬುದ್ಧ ವಿಹಾರದ ಭೋಧಿರತ್ನ ಬಂತೇಜಿ ಆಶೀರ್ವಚನ ನೀಡಿದರು. ಇದೇ ವೇಳೆ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ನೀಡಿ ಗೌರವಿಸಲಾಯಿತು. ವಿಶೇಷವಾಗಿ ಡಾಕ್ಟರೇಟ್ ಪದವಿ ಪುರಸ್ಕೃತ ತಲಕಾಡು ಸುರೇಶ್, ಚಿನ್ನದ ಪದಕ ಪುರಸ್ಕೃತ ಹೊಸಹಳ್ಳಿ ಸಿದ್ದರಾಜು, ಪತ್ರಿಕೋದ್ಯಮ ವಿಭಾಗದ ಪುರಸ್ಕೃತ ಶಂಕರಯ್ಯ, ಪ್ರಾಥಮಿಕ ಶಾಲಾ ಶಿಕ್ಷಕರ ಸಂಘದ ನೂತನ ನಿರ್ದೇಶಕರಾದ ಮಹಾದೇವಸ್ವಾಮಿ, ಚಿನ್ನಸ್ವಾಮಿ ರುದ್ರಯ್ಯ ಸೇರಿದಂತೆ ಇನ್ನಿತರರನ್ನು ಸನ್ಮಾನಿಸಲಾಯಿತು.

ವೈದ್ಯಾಧಿಕಾರಿ ಡಾ.ಅಭಿಲಾಷ್, ಸಿಪಿಐ ಧನಂಜಯ, ಪುರಸಭೆ ಸ್ಥಾಯಿ ಸಮಿತಿ ಮಾಜಿ ಅಧ್ಯಕ್ಷ ಸಿ.ಪ್ರಕಾಶ್, ಮಾಜಿ ಸದಸ್ಯ ಬೇಬಿ ಹೇಮಂತ್ ಕುಮಾರ್, ಬಿಎಸ್‌ಐ ಕಾರ್ಯದರ್ಶಿ ಸಿ.ಮಹದೇವಸ್ವಾಮಿ, ಉಪಾಧ್ಯಕ್ಷ ಕುಮಾರಸ್ವಾಮಿ, ಸಂಘಟನಾ ಕಾರ್ಯದರ್ಶಿ ನಾಗರಾಜು, ಖಜಾಂಚಿ ನಾರಾಯಣಮೂರ್ತಿ, ಮುರಳೀಧರ, ಪ್ರಕಾಶ್, ನಾಗೇಂದ್ರ, ಪ್ರಸನ್ನ, ಸಿದ್ದರಾಜು, ನಾಗರಾಜು, ಮಹದೇವಯ್ಯ, ಮೂಗೂರು ಸಿದ್ದರಾಜು, ಹಸುವಟ್ಟಿ ಸಿದ್ದರಾಜು, ಮಂಜುನಾಥ, ಮಹೇಶ ಮೂರ್ತಿ, ರಾಜಪ್ಪ, ಅನಿಲ್ ರಾಜು, ಪುರುಷೋತ್ತಮ ಇತರರಿದ್ದರು.

ಆದಿವಾಸಿ ಕಾಲೋನಿಗಳಲ್ಲಿ ವಿವಿಧೋದ್ದೇಶ ಕೇಂದ್ರ ಉದ್ಘಾಟನೆ

ನಂಜನಗೂಡು/ಮಲ್ಕುಂಡಿ, ಮೇ 18– ತಾಲೂಕಿನ ಡೋರನಹಳ್ಳಿ, ಕೊತ್ತನಹಳ್ಳಿ, ವೆಂಕಟಗಿರಿ, ಚಿಲಕಹಳ್ಳಿ ಆದಿವಾಸಿ ಕಾಲೋನಿಗಳಲ್ಲಿ ಕೇಂದ್ರ ಸರ್ಕಾರದ ಪಿಎಂ ಜನಮಾನ್ ಯೋಜನೆಯಡಿ ತಲಾ 60 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿರುವ ವಿವಿಧೋದ್ದೇಶ ಕೇಂದ್ರಗಳನ್ನು ಸಂಸದ ಸುನೀಲ್ ಬೋಸ್ ಸೋಮವಾರ ಉದ್ಘಾಟಿಸಿದರು.

ನಂತರ ಮಾತನಾಡಿದ ಅವರು, ಆದಿವಾಸಿ ಬುಡಕಟ್ಟು ಜನರ ಆರ್ಥಿಕ ಅಭಿವೃದ್ಧಿ ಮತ್ತು ಮೂಲ ಸೌಕರ್ಯಗಳನ್ನು ಒದಗಿಸುವ ಸಲುವಾಗಿ ಕೇಂದ್ರ ಸರ್ಕಾರ ಪ್ರಧಾನ ಮಂತ್ರಿ ಜನಜಾತಿ ನ್ಯಾಯ ಮಹಾಭಿಯಾನ(ಪಿಎಂ ಜನಮಾನ್) ಯೋಜನೆ ಅನುಷ್ಠಾನಗೊಳಿಸಿದೆ. ಈ ಯೋಜನೆಯಡಿ ಮೂಲ ಸೌಕರ್ಯಗಳಾದ ಮನೆ, ಕುಡಿಯುವ ನೀರು, ರಸ್ತೆ ಸಂಪರ್ಕ, ಶಿಕ್ಷಣ, ಆರೋಗ್ಯ ಮತ್ತು ವಿದ್ಯುತ್ ಸಂಪರ್ಕವನ್ನು ಒದಗಿಸಲಾಗುತ್ತಿದೆ. ತಾಲೂಕಿನ ಕೊತ್ತನಹಳ್ಳಿ ಕಾಲೋನಿ, ಚಿಲಕಹಳ್ಳಿ, ಡೋರನಕಟ್ಟೆ, ವೆಂಕಟಗಿರಿ ಕಾಲೋನಿಗಳಲ್ಲಿ ತಲಾ 60 ಲಕ್ಷ ವೆಚ್ಚದಲ್ಲಿ ವಿವಿಧೋದ್ದೇಶ ಕೇಂದ್ರಗಳನ್ನು ಸ್ಥಾಪಿಸಲಾಗಿದ್ದು, ಆದಿವಾಸಿ ಜನಾಂಗದವರಿಗೆ ಆರೋಗ್ಯ ಸೇವೆ, ಅಂಗನವಾಡಿ, ಶಾಲಾ ಕೊಠಡಿ ಮತ್ತು ಆದಿವಾಸಿ ಜನರ ಕೌಶಲ್ಯಾಭಿವೃದ್ಧಿಗಾಗಿ ತರಬೇತಿ ನೀಡಲಾಗುವುದು. ಈ ಕೇಂದ್ರಗಳನ್ನು ಸದುಪಯೋಗಪಡಿಸಿಕೊಂಡು ಹಾಡಿಗಳಲ್ಲಿ ವಾಸಿಸುವ ಜನರು ಆರ್ಥಿಕವಾಗಿ ಅಭಿವೃದ್ಧಿಗೊಂಡು ಸಮಾಜದ ಮುಖ್ಯವಾಹಿನಿಗೆ ಬರಬೇಕು ಎಂದರು.



ಡೋರನಕಟ್ಟೆ ಗ್ರಾಮದಲ್ಲಿ ವಿವಿಧೋದ್ದೇಶ ಕೇಂದ್ರವನ್ನು ಸಂಸದ ಸುನೀಲ್ ಬೋಸ್ ಉದ್ಘಾಟಿಸಿದರು.

ಮುಂದಿನ ದಿನಗಳಲ್ಲಿ ಆದಿವಾಸಿ ಬುಡಕಟ್ಟು ಜನಾಂಗದವರು ಸಾಮಾನ್ಯ ಜನರಂತೆ ಬದುಕಲು ಸೌಕರ್ಯ ಒದಗಿಸಲು ಕೇಂದ್ರ ಸರ್ಕಾರದ ಪಿಎಂ ಜನಮಾನ್ ಯೋಜನೆಯಡಿ ಮನೆಗಳನ್ನು ನಿರ್ಮಿಸಿ ಕೊಡಲು ಶ್ರಮಿಸುತ್ತೇನೆ ಎಂದರು.

45 ಲಕ್ಷ ವೆಚ್ಚದ ಶಾಲಾ ಕೊಠಡಿ ಕಾಮಗಾರಿಗಳಿಗೆ ಗುದ್ದಲಿ ಪೂಜೆ: ಸರ್ಕಾರಿ ಶಾಲೆಗಳಿಗೆ ಮೂಲ ಸೌಕರ್ಯಗಳನ್ನು ಒದಗಿಸಿ ಗ್ರಾಮೀಣ ಭಾಗದ ಬಡಜನರ ಮಕ್ಕಳಿಗೆ ಗುಣಮಟ್ಟದ ಶಿಕ್ಷಣ ಒದಗಿಸುವ ಸಲುವಾಗಿ ತಾಲೂಕಿನ ರಾಜೂರು, ಚಿಲಕಹಳ್ಳಿ, ಹುರ ಗ್ರಾಮಗಳಲ್ಲಿ ಕೇಂದ್ರ ಸರ್ಕಾರದ ಅನುದಾನದಲ್ಲಿ ತಲಾ 15 ಲಕ್ಷ ವೆಚ್ಚದಲ್ಲಿ ಶಾಲಾ ಕೊಠಡಿಗಳ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಲಾಗಿದೆ. ಕಾಮಗಾರಿ ಶೀಘ್ರ ಮುಕ್ತಾಯಗೊಂಡು ಗ್ರಾಮೀಣ ವಿದ್ಯಾರ್ಥಿಗಳಿಗೆ ಅನುಕೂಲವಾಗಲಿದೆ ಎಂದರು.

ಈ ವೇಳೆ ಶ್ರೀಕಂಠೇಶ್ವರ ವ್ಯವಸ್ಥಾಪನಾ ಸಮಿತಿ ಮಾಜಿ ಅಧ್ಯಕ್ಷ ಇಂಧನ್ ಬಾಬು, ಮುಖಂಡರಾದ ಬುಲೆಟ್ ಮಹದೇವಪ್ಪ, ಕೃಷ್ಣಪ್ಪ, ನಟರಾಜ್, ಎನ್.ಟಿ.ಗಿರೀಶ್, ಕುರಿಹುಂಡಿರಾಜು, ಲಕ್ಷ್ಮಿಕಾಂತ್, ಕೆಂಪಿಸಿದ್ದನಹುಂಡಿ ಕೆಂಪಣ್ಣ, ತುಗನಹಳ್ಳಿ ನಂಜುಂಡಸ್ವಾಮಿ, ಗೋವಿಂದರಾಜು, ನಾಗರಾಜು, ಸಂಜಯ್ ಕುಮಾರ್, ಸುಬ್ರಹ್ಮಣ್ಯ, ಜಿಪಂ ಮಾಜಿ ಸದಸ್ಯರಾದ ಕೆ.ಬಿ.ಸ್ವಾಮಿ, ಚೋಳ ರಾಜು, ಕೂಸಪ್ಪ, ಎಂ.ಶಿವಣ್ಣ, ಮಹೇಶ್, ಕಂದೇ ಗಾಲ ಬಸವರಾಜ್, ಮಹದೇವಪ್ಪ, ನಾಗರಾಜೇಗೌಡ, ಅಶ್ರಫ್ ಅಲಿ, ರೆಹಮತ್, ರುದ್ರಸ್ವಾಮಿ, ಮಲ್ಲಿಕಾರ್ಜುನ, ತಾಪಂ ಮಾಜಿ ಅಧ್ಯಕ್ಷ ನಾಗೇಶ್ ರಾಜ್ ಇದ್ದರು.

ಕೋಟೆಯಲ್ಲಿ ಪಿಎಂ ಜನಮಾನ್ ಯೋಜನೆಗೆ ಚಾಲನೆ



ಪ್ರಧಾನ ಮಂತ್ರಿ ಜನಮಾನ್ ಯೋಜನೆ ಅಭಿಯಾನಕ್ಕೆ ಚಾಲನೆ ನೀಡಲಾಯಿತು.

ಹೆಚ್.ಡಿ.ಕೋಟೆ, ಮೇ 18– ಪ್ರಧಾನ ಮಂತ್ರಿ ಜನಮಾನ್ ಯೋಜನೆಯಡಿ ಜಾನ್ ಭಗಿದರಿ ಶಬ್ಸ್ ದೂರ, ಶಬ್ಸೆ ಪೆಹ್ಲೆ (ಜನ ಭಾಗಿದಾರಿ ಅತ್ಯಂತ ದೂರದೃಷ್ಟಿ) ಅಭಿಯಾನಕ್ಕೆ ತಾಲೂಕು ಪಂಚಾಯಿತಿ ಕಾರ್ಯ ನಿರ್ವಹಣಾಧಿಕಾರಿ ಧರಣೇಶ್ ಚಾಲನೆ ನೀಡಿದರು.

ಪಟ್ಟಣದ ತಾಲೂಕು ಪಂಚಾಯಿತಿ ಆವರಣದಲ್ಲಿ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮೇ 18 ರಿಂದ 25 ರವರೆಗೆ ಪ್ರಧಾನ ಮಂತ್ರಿ ಜನ್ ಮಾನ್ ಕಾರ್ಯಕ್ರಮದಡಿ ಜಾನ್ ಭಗಿದರಿ ಶಬ್ಸ್ ದೂರ, ಶಬ್ಸೆ ಪೆಹ್ಲೆ ಅಭಿಯಾನ ಆಯೋಜಿಸಲಾಗಿದೆ. ಬುಡಕಟ್ಟು ಸಮುದಾಯದವರಿಗೆ ಕೇಂದ್ರ ಹಾಗೂ ರಾಜ್ಯ ಸರ್ಕಾರದ ಯೋಜನೆ ಪಡೆಯಲು ಬೇಕಾಗುವ ದಾಖಲಾತಿಗಳನ್ನು ಒದಗಿಸುವ ಸಂಬಂಧ ಇಲಾಖೆಗಳೊಂದಿಗೆ ಸಮನ್ವಯ ಸಾಧಿಸಿ ಗ್ರಾಮ ಮಟ್ಟದಲ್ಲಿ ಅರಿವು ಮೂಡಿಸುವ ಶಿಬಿರ ಆಯೋಜಿಸಲಾಗಿದೆ ಆದ್ದರಿಂದ ಹಾಡಿ ಜನರು ಈ ಕಾರ್ಯಕ್ರಮ ಯಶಸ್ವಿಗೊಳಿಸಬೇಕು ಎಂದರು.

ಈ ವೇಳೆ ತಾಲೂಕು ಆರೋಗ್ಯಾಧಿಕಾರಿಗಳಾದ ಡಾ.ರವಿಕುಮಾರ್, ಎನ್.ಬೇಗೂರು ಗ್ರಾಪಂ ಅಧ್ಯಕ್ಷ ಶೈಲೇಂದ್ರ, ಪರಿಶಿಷ್ಟ ವರ್ಗಗಳ ಕಲ್ಯಾಣಾಧಿಕಾರಿ ಕಚೇರಿಯ ಮೇಲ್ವಿಚಾರಕ ನಾಗರಾಜು, ತಾಪಂ ಸಿಬ್ಬಂದಿ ವರ್ಗ, ಆರೋಗ್ಯ ಇಲಾಖೆ ಸಿಬ್ಬಂದಿ ವರ್ಗ, ಸಾರ್ವಜನಿಕರು ಹಾಜರಿದ್ದರು.

ದೇಶ ಕಂಡ ಮಹಾನ್ ಚೇತನ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡ

ನವನಗರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ಬಣ್ಣನೆ

ಕೆ.ಆರ್.ನಗರ, ಮೇ 18– ರೈತರ ಸಮಸ್ಯೆಗಳ ಪರಿಹಾರಕ್ಕಾಗಿ ದೊಡ್ಡ ಮಟ್ಟದಲ್ಲಿ ಹೋರಾಡಿದ ಮಣ್ಣಿನ ಮಗ ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ.ದೇವೇಗೌಡ ಎಂದು ನವನಗರ ಅರ್ಬನ್ ಕೋ-ಆಪರೇಟಿವ್ ಬ್ಯಾಂಕ್ ಅಧ್ಯಕ್ಷ ಕೆ.ಎನ್.ಬಸಂತ್ ಬಣ್ಣಿಸಿದರು.

ಪಟ್ಟಣದ ಹೊರ ವಲಯದ ಹಳೇ ಎಡತೊರೆಯ ಕಾವೇರಿ ನದಿ ದಡದಲ್ಲಿರುವ ಮಿನಾಕ್ಷಿ ಸಮೇತ ಶ್ರೀಅರ್ಕೇಶ್ವರ ಸ್ವಾಮಿ ದೇವಾಲಯದಲ್ಲಿ ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅಭಿಮಾನಿಗಳು ಹಾಗೂ ಜೆಡಿಎಸ್ ಕಾರ್ಯಕರ್ತರು ಹಮ್ಮಿಕೊಂಡಿದ್ದ ವಿಶೇಷ ಪೂಜೆ ಹಾಗೂ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿ, ಕೇಕ್ ಕತ್ತರಿಸಿ ಮಾತನಾಡಿದ ಅವರು, ಹೆಚ್.ಡಿ.ದೇವೇಗೌಡರು ದೇಶ ಕಂಡ ಮಹಾನ್ ಚೇತನ. ರೈತರ ಪರವಾಗಿ ನೀರಾವರಿ ಯೋಜನೆಗಳನ್ನು ಜಾರಿಗೆ ತಂದು ಕಾರ್ಯಗತ ಮಾಡಿದವರು ಹಾಗೂ ನೀರಾವರಿಗೋಸ್ಕರ ರಾಜ್ಯದ ಉದ್ದಗಲಕ್ಕೂ ಹೋರಾಟ ಮಾಡಿದವರು ಎಂದು ದೇವೇಗೌಡರನ್ನು ಕೊಂಡಾಡಿದರು.



ಹೆಚ್.ಡಿ.ದೇವೇಗೌಡರ ಹುಟ್ಟುಹಬ್ಬ ಅಂಗವಾಗಿ ಅಭಿಮಾನಿಗಳು ಹಾಗೂ ಜೆಡಿಎಸ್ ಕಾರ್ಯಕರ್ತರು ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು.

ನೀರಾವರಿ ಮಂತ್ರಿಯಾಗಿದ್ದ ವೇಳೆ ಕೆಆರ್.ನಗರ ವಿಧಾನಸಭಾ ಕ್ಷೇತ್ರಕ್ಕೆ ಹಾರಂಗಿ ಮತ್ತು ಹೇಮಾವತಿ ನಾಲೆ ಕಲ್ಪಿಸಿ ರೈತರ ಜಮೀನುಗಳಿಗೆ ನೀರು ಹರಿಸಿ ಈ ಭಾಗದ ರೈತರ ಕೈ ಹಿಡಿದರು. ಪ್ರಧಾನಮಂತ್ರಿ ಆಗಿದ್ದಾಗ ಮೈಸೂರು–ಹಾಸನ ರೈಲ್ವೆ ಮಾರ್ಗವನ್ನು ಬ್ರಾಡ್ ಗೇಜ್ ಮಾಡುವ ವೇಳೆ ಹಳೆಯ ಎಡತೊರೆಯಲ್ಲಿದ್ದ ರೈಲು ನಿಲ್ದಾಣವನ್ನು ಕೆ.ಆರ್.ನಗರ ಪಟ್ಟಣಕ್ಕೆ ಹತ್ತಿರವಾಗುವಂತೆ ಮಾಡಲು ಹೊಸದಾಗಿ ರೈಲು ಮಾರ್ಗ ಯೋಜನೆ ರೂಪಿಸಿ ಪಟ್ಟಣದಲ್ಲಿ ರೈಲು ನಿಲ್ದಾಣ ಕಲ್ಪಿಸಿದ ಕೀರ್ತಿ ಹೆಚ್.ಡಿ.ದೇವೇಗೌಡರಿಗೆ ಸಲ್ಲುತ್ತದೆ ಎಂದರು.

ಇದೇ ವೇಳೆ ಮಾಜಿ ಪ್ರಧಾನ ಮಂತ್ರಿ ಹೆಚ್.ಡಿ.ದೇವೇಗೌಡರ ಅಭಿಮಾನಿಗಳು ಪಟ್ಟಣದಲ್ಲಿರುವ ಹೆಚ್.ಡಿ.ದೇವೇಗೌಡ ಸಮುದಾಯ ಭವನದಲ್ಲಿ ಕೇಕ್ ಕತ್ತರಿಸಿ ಸಂಭ್ರಮಾಚರಣೆ ಮಾಡಿದರು. ಇದಕ್ಕೂ ಮುನ್ನಾ, ಅರ್ಕೇಶ್ವರಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ಸಲ್ಲಿಸಿದ ಬಳಿಕ ಪಟ್ಟಣದ ತಾಲೂಕು ಆಸ್ಪತ್ರೆ ಮತ್ತು ತಾಯಿ ಮತ್ತು ಮಕ್ಕಳ ಆಸ್ಪತ್ರೆ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು.

ಈ ವೇಳೆ ಜೆಡಿಎಸ್ ರಾಜ್ಯ ಪ್ರಧಾನ ಕಾರ್ಯದರ್ಶಿ ಚಂದ್ರಶೇಖರ್, ತಾಲೂಕು ಜೆಡಿಎಸ್ ಅಧ್ಯಕ್ಷ ಹಂಪಾಪುರ ಕುಮಾರ್, ತಾಲೂಕು ಜೆಡಿಎಸ್ ವಕ್ತಾರ ಕೆ.ಎಲ್.ರಮೇಶ್, ತಾಲೂಕು ಯುವ ಜೆಡಿಎಸ್ ಅಧ್ಯಕ್ಷ ಡಿ.ವಿ.ಗುಡಿ ಯೋಗೇಶ್, ಜಿಲ್ಲಾ ಯುವ ಜೆಡಿಎಸ್ ಗ್ರಾಮಾಂತರ ಉಪಾಧ್ಯಕ್ಷ ಕಗ್ಗರೆ ಕುಚೇಲ, ಜೆಡಿಎಸ್ ಮಹಿಳಾ ಘಟಕದ ಜಿಲ್ಲಾಧ್ಯಕ್ಷೆ ದಾಕ್ಷಾಯಿಣಿ, ಜೆಡಿಎಸ್ ಮಹಿಳಾ ಘಟಕದ ತಾಲೂಕು ಅಧ್ಯಕ್ಷೆ ರಾಜಲಕ್ಷ್ಮಿ, ಪುರಸಭೆ ಮಾಜಿ ಸದಸ್ಯರಾದ ಬಾರ್ ಶಿವಕುಮಾರ್, ಸಂತೋಷ್ ಗೌಡ, ಕೆ.ಉಮೇಶ್, ಕೆ.ಎಲ್.ಜಗದೀಶ್, ಜೆಡಿಎಸ್ ಅಲ್ಪಸಂಖ್ಯಾತ ಘಟಕದ ಅಧ್ಯಕ್ಷ ಮುಬಾರಕ್, ಯುವ ಜೆಡಿಎಸ್ ಎಸ್‌ಟಿ ಘಟಕದ ತಾಲೂಕು ಅಧ್ಯಕ್ಷ ಹಂಪಾಪುರ ಸೂರಿ, ಯುವ ಜೆಡಿಎಸ್ ತಾಲೂಕು ಮಾಜಿ ಅಧ್ಯಕ್ಷ ಮಧುಚಂದ್ರ, ಜೆಡಿಎಸ್ ಮುಖಂಡರಾದ ಕೇಶವ್, ರೇವಣ್ಣ, ಗುರುಪ್ರಸಾದ್, ಭಾಗ್ಯಮ್ಮ, ರೀಚಾ, ರೂಪ ಸತೀಶ್, ಮಲ್ಲಪ್ಪ, ಮಹೇಶ್, ವ್ಯಾನ್ ದೇವು, ದೀಪಾ ಹೂೕಶ್, ಚಂದಗಾಲ ರಾಘು, ಡೈರಿ ಆನಂದ್, ಹೊಸೂರು ಕೀರ್ತಿ, ಹೆಚ್.ಜಿ.ಮಂಜು, ಶಂಭು, ಕಂಚಿನಕೆರೆ ಆಶಾದೇವ್, ಕೇಬಲ್ ಮಲ್ಲಿ ಮೊದಲಾದವರಿದ್ದರು.

ಹಿತ್ತಾಳೆ ಕುದುರೆ ವಾಹನ ಕೊಡುಗೆ



ಬೆಟ್ಟದಪುರ ಸಮೀಪದ ಗೊರಹಳ್ಳಿಯಲ್ಲಿ ಮೇ 22 ರಂದು ನಡೆಯುವ ಗ್ರಾಮದೇವತೆ ಶ್ರೀದೊಡ್ಡಮ್ಮತಾಯಿ ಹಾಗೂ ಚಿಕ್ಕಮ್ಮತಾಯಿ ಹಬ್ಬದ ಉತ್ಸವದ ಮೆರವಣಿಗೆಗೆ ಗ್ರಾಮದ ಜಿ.ಜೆ.ಗೋವಿಂದಶೆಟ್ಟಿ ಅವರು ಹಿತ್ತಾಳೆ ಕುದುರೆ ವಾಹನ ಕೊಡುಗೆ ನೀಡಿದ್ದು, ಅವರನ್ನು ಗ್ರಾಮದ ಸರ್ಕಾರಿ ಶಾಲೆ ಎಸ್‌ಡಿಎಂಸಿ ಅಧ್ಯಕ್ಷ ಜಿ.ಆರ್.ವಸಂತ್ ಮತ್ತು ಕುಮಾರ್ ಸೇರಿದಂತೆ ಗ್ರಾಮಸ್ಥರು ಅಭಿನಂದಿಸಿದ್ದಾರೆ.

ಸೇವಾ ಕಾರ್ಯಗಳೊಂದಿಗೆ ದೇವೇಗೌಡರ ಹುಟ್ಟುಹಬ್ಬ ಆಚರಣೆ

ತಿ.ನರಸೀಪುರ, ಮೇ 18– ಮಾಜಿ ಪ್ರಧಾನಿ, ಜೆಡಿಎಸ್ ಪರಮೋಚ್ಚ ನಾಯಕ ಹೆಚ್.ಡಿ.ದೇವೇ ಗೌಡ ಅವರ 94ನೇ ಹುಟ್ಟುಹಬ್ಬವನ್ನು ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳು ಹಾಗೂ ಸಾರ್ವಜನಿಕರ ಸಮ್ಮುಖದಲ್ಲಿ ವಿವಿಧ ಸೇವಾ ಕಾರ್ಯಗಳೊಂದಿಗೆ ಸೋಮವಾರ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಬೆಳಗ್ಗೆ ಪಟ್ಟಣದ ಶ್ರೀಗುಂಜಾ ನರಸಿಂಹಸ್ವಾಮಿ ದೇವಸ್ಥಾನಕ್ಕೆ ತೆರಳಿದ ಜೆಡಿಎಸ್ ಕಾರ್ಯಕರ್ತರು, ಅಭಿಮಾನಿಗಳು ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರ ಹೆಸರಿನಲ್ಲಿ ವಿಶೇಷ ಪೂಜೆ ಸಲ್ಲಿಸಿ, ಆಯಸ್ಸು ವೃದ್ಧಿಗೆ ಪ್ರಾರ್ಥನೆ ಸಲ್ಲಿಸಿದರು. ಬಳಿಕ ಅಲ್ಲಿಂದ ಪಟ್ಟಣದ ಸರ್ಕಾರಿ ಸಾರ್ವಜನಿಕ ಆಸ್ಪತ್ರೆಗೆ ತೆರಳಿ ಆಡಳಿತ ವೈದ್ಯಾಧಿಕಾರಿ ಡಾ.ಅಭಿಲಾಷ್ ಹಾಗೂ ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಅವರ ಸಮ್ಮುಖದಲ್ಲಿ ನೂರಾರು ರೋಗಿಗಳಿಗೆ ಹಣ್ಣು ಹಂಪಲು ವಿತರಿಸಿದರು.

ಕ್ಷೇತ್ರ ಜೆಡಿಎಸ್ ಅಧ್ಯಕ್ಷ ಸಿ.ಬಿ.ಹುಂಡಿ ಚಿನ್ನಸ್ವಾಮಿ ಮಾತನಾಡಿ, ದೇಶದ ರಾಜಕೀಯದ ಇತಿಹಾಸದಲ್ಲಿ ವಿಶಿಷ್ಟ ಸ್ಥಾನ ಹೊಂದಿರುವ ದೇವೇಗೌಡರು ಸರಳತೆ, ಪ್ರಾಮಾಣಿಕತೆ ಹಾಗೂ ರೈತಪರ ಕಾಳಜಿಯಿಂದ ಜನಮನ ಗೆದ್ದ ನಾಯಕರಾಗಿದ್ದು, ಇಂದು ಅವರ 94ನೇ ಹುಟ್ಟುಹಬ್ಬವನ್ನು ಸಂಭ್ರಮದಿಂದ ಆಚರಣೆ ಮಾಡಲಾಗುತ್ತಿದೆ. ಗ್ರಾಮೀಣ ಸಾಮಾನ್ಯ ಕುಟುಂಬದಿಂದ ಬಂದು ದೇಶದ ಅತ್ಯುನ್ನತ ಹುದ್ದೆಯಾದ ಪ್ರಧಾನಮಂತ್ರಿಯಾಗಿ ಸೇವೆ ಸಲ್ಲಿಸಿದ ಅವರ ಬದುಕು ಯುವಜನತೆಗೆ ಪ್ರೇರಣೆಯಾಗಿದೆ. ರೈತರ ಸಮಸ್ಯೆಗಳ ಪರಿಹಾರ, ಗ್ರಾಮೀಣಾಭಿವೃದ್ಧಿ ಹಾಗೂ ಜನಪರ ಆಡಳಿತಕ್ಕಾಗಿ ಅವರು ನೀಡಿದ ಕೊಡುಗೆ ಅಪಾರ ಎಂದರು.



ಮಾಜಿ ಪ್ರಧಾನಿ ದೇವೇಗೌಡರ ಹುಟ್ಟುಹಬ್ಬ ಅಂಗವಾಗಿ ರೋಗಿಗಳಿಗೆ ಹಣ್ಣು ಹಂಪಲು ವಿತರಿಸಲಾಯಿತು.

ದೇವೇಗೌಡರ ಆದರ್ಶ ಹಾಗೂ ಮೌಲ್ಯಗಳು ಸಮಾಜಕ್ಕೆ ದಾರಿದೀಪವಾಗಿದ್ದು, ಅವರ ಸೇವಾ ಮನೋಭಾವ ಎಲ್ಲರೂ ಅಳವಡಿಸಿಕೊಳ್ಳಬೇಕಾಗಿದೆ. ಅವರಿಗೆ ದೇವರು ಆರೋಗ್ಯ, ಆಯುಷ್ಯ ನೀಡಿ ಇನ್ನಷ್ಟು ಕಾಲ ಸಮಾಜ ಸೇವೆ ಮಾಡುವ ಶಕ್ತಿ ನೀಡಲಿ ಎಂದು ಹಾರೈಸಿದರು.

ಜೆಡಿಎಸ್ ಪ್ರಧಾನ ಕಾರ್ಯದರ್ಶಿ ಹೆಮ್ಮಿಗೆ ಹೊನ್ನಯ್ಯ ಮಾತನಾಡಿದರು. ವಿಚಾರವಾದಿ ಪ್ರಭುಸ್ವಾಮಿ, ದೊಡ್ಡೇಬಾಗಿಲು ಪಿಎಸಿಎಸ್ ಅಧ್ಯಕ್ಷ ಕೃಷ್ಣಾಪುರ ಮರಿಸ್ವಾಮಿ, ಹೋಬಳಿ ಅಧ್ಯಕ್ಷ ರಾಜೇಶ್, ತಾಪಂ ಮಾಜಿ ಉಪಾಧ್ಯಕ್ಷ ಎಂ.ಎಸ್.ಬಸವರಾಜು, ಗ್ರಾಪಂ ಮಾಜಿ ಸದಸ್ಯ ಮಾವಿನಹಳ್ಳಿ ರಾಜೇಶ್, ಮುಖಂಡರಾದ ತಿರುಮಕೂಡಲು ಜಯರಾಮು, ಕೆಬ್ಬೇಹುಂಡಿ ಮಹದೇವಸ್ವಾಮಿ, ಮಾದಾಪುರ ಮಹದೇವಪ್ಪ, ಕನ್ನಹಳ್ಳಿ ಮಹದೇವ, ಮೂಗೂರು ರೇವಣ್ಣ, ಟಿ.ಎಸ್.ವೀರಭದ್ರ, ತಲಕಾಡು ರಾಜೇಶ್, ಮೂರ್ತಿ, ಸಿ.ಬಿ.ಹುಂಡಿ ಮಲ್ಲಿಕಾರ್ಜುನ, ಹಿರಿಯೂರು ಸೋಮಣ್ಣ, ತೊಟ್ಟವಾಡಿ ಮಹೇಶ, ತಮ್ಮಯ್ಯ, ಸಿದ್ದರಾಜು, ಎನ್.ಎಂ.ಗೋಪಾಲರಾಜು, ರುದ್ರೇಶ್, ಮಲ್ಲಿಕಾರ್ಜುನ, ಹಲವಾರ ಸಿದ್ದರಾಜು ಹಾಗೂ ಮತ್ತಿತರರಿದ್ದರು.

> "ಮಾಜಿ ಪ್ರಧಾನಿ ಹೆಚ್.ಡಿ.ದೇವೇಗೌಡರು ರಾಜಕೀಯ ಜೀವನದಲ್ಲಿ ಅನೇಕ ಏರುಪೇರುಗಳನ್ನು ಎದುರಿಸಿದರೂ ಅವರು ಸದಾ ರೈತರು, ಬಡವರು ಹಾಗೂ ಗ್ರಾಮೀಣ ಜನರ ಸಮಸ್ಯೆಗಳ ಬಗ್ಗೆ ಕಾಳಜಿ ವಹಿಸಿದವರು. ಅಧಿಕಾರವನ್ನು ವೈಭವಕ್ಕಾಗಿ ಅಲ್ಲ, ಜನಸೇವೆಗೆ ಬಳಸಬೇಕು ಎಂಬ ಸಂದೇಶವನ್ನು ತಮ್ಮ ಬದುಕಿನ ಮೂಲಕ ಸಾರಿದರು. ಸರಳ ಜೀವನ ಶೈಲಿ, ಕನ್ನಡದ ಮೇಲಿನ ಅಭಿಮಾನ ಹಾಗೂ ದೇಶದ ಅಭಿವೃದ್ಧಿಯ ಬಗ್ಗೆ ಅವರಿಗಿದ್ದ ಬದ್ಧತೆ ಎಲ್ಲರಿಗೂ ಮಾದರಿಯಾಗಿದೆ. – **ಶಿವಕುಮಾರ್(ಬಡ್ಡು), ಜೆಡಿಎಸ್ ಮುಖಂಡ.**

ನೂತನ ಇನ್ಸ್‌ಪೆಕ್ಟರ್ ಅಧಿಕಾರ ಸ್ವೀಕಾರ



ಹುಣಸೂರು ನಗರ ಪೊಲೀಸ್ ಠಾಣೆ ನೂತನ ಇನ್ಸ್‌ಪೆಕ್ಟರ್ ಎಂ.ಶಿವಮಾದಯ್ಯ ಅವರು ನಿರ್ಗಮಿತ ಪೊಲೀಸ್ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಅವರಿಂದ ಸೋಮವಾರ ಅಧಿಕಾರ ಸ್ವೀಕರಿಸಿದರು. ಹುಣಸೂರು ಗ್ರಾಮಾಂತರ ಠಾಣೆ ಇನ್ಸ್‌ಪೆಕ್ಟರ್ ಮುನಿಯಪ್ಪ ಅವರು ನಿವೃತ್ತರಾದ ಕಾರಣ ಆ ಜಾಗಕ್ಕೆ ನಗರ ಠಾಣೆಯ ಇನ್ಸ್‌ಪೆಕ್ಟರ್ ಸಂತೋಷ್ ಕಶ್ಯಪ್ ಅವರನ್ನು ನಿಯೋಜಿಸಲಾಗಿದೆ.

ಶತಾಯುಷಿ ಕೆಂಪಮ್ಮ ನಿಧನ



ತಿ.ನರಸೀಪುರ, ಮೇ 18– ತಾಲೂಕಿನ ಚೌಹಳ್ಳಿ ಗ್ರಾಮದ ಛೇರ್ಮನ್ ಲೇ.ಮಾದಯ್ಯ ಅವರ ಪತ್ನಿ ಕೆಂಪಮ್ಮ(100) ಸೋಮವಾರ ಮಧ್ಯಾಹ್ನ ನಿಧನರಾದರು. ಮೃತರು ಹಿರಿಯೂರು ಪಿಎಸಿಎಸ್ ಉಪಾಧ್ಯಕ್ಷ ಎನ್.ಗಿರೀಶ್ ಸೇರಿದಂತೆ ಐವರು ಪುತ್ರರು, ನಾಲ್ವರು ಪುತ್ರಿಯರು ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಮಂಗಳವಾರ ಮಧ್ಯಾಹ್ನ ಸ್ವಗ್ರಾಮದಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಜಗತ್ತಿನ ಅತೀ ಕಿರಿಯ ರಾಜಕೀಯ ಖೈದಿ ಎನಿಸಿರುವ 11ನೇ ಪಂಚೆನ್ ಲಾಮಾ ಬಿಡುಗಡೆಗೆ ಟಿಬೆಟಿಯನರ ಜಾಥ

ಚೀನಾದ ದಮನ ಕಾರಿ ನೀತಿಗೆ ಖಂಡನೆ



ಟಿಬೆಟಿಯನ್‌ನ 11ನೇ ಪಂಚೆನ್ ಲಾಮಾ ಗೆಂದುನ್ ಚೋಕೆರೆ ನಿಮಾ ಸೇರಿದಂತೆ ನಿರಪರಾಧಿ ಟಿಬೆಟಿಯನ್ ಧಾರ್ಮಿಕ ಮತ್ತು ರಾಜಕೀಯ ಮುಖಂಡರ ಬಿಡುಗಡೆಗೆ ಆಗ್ರಹಿಸಿ ಬೈಲಕುಪ್ಪೆ, ಹುಣಸೂರು ಮತ್ತು ಕೊಳ್ಳೇಗಾಲದ ಟಿಬೆಟಿಯನ್ ಸಂಘಟನೆಗಳಿಂದ ಸೋಮವಾರ ಮೈಸೂರಲ್ಲಿ ಕಾಲ್ನಡಿಗೆ ಜಾಥಾ ನಡೆಸಲಾಯಿತು

ಮೈಸೂರು, ಮೇ 18(ಎಂಕೆ)– ಟಿಬೆಟಿಯನ್‌ನ 11ನೇ ಪಂಚೆನ್ ಲಾಮಾ ಗೆಂದುನ್ ಚೋಕೆರೆ ನಿಮಾ ಸೇರಿದಂತೆ ಎಲ್ಲಾ ನಿರಪರಾಧಿ ಟಿಬೆಟಿಯನ್ ಧಾರ್ಮಿಕ ಮತ್ತು ರಾಜಕೀಯ ಮುಖಂಡರ ಬಿಡುಗಡೆಗೆ ಆಗ್ರಹಿಸಿ ಬೈಲಕುಪ್ಪೆ, ಹುಣಸೂರು ಮತ್ತು ಕೊಳ್ಳೇಗಾಲದ ಮಿಡಲ್ ವೇ ಟಿಬೆಟಿಯನ್ ಯೂತ್ ಕಾಂಗ್ರೆಸ್, ಪ್ರಾದೇಶಿಕ ಟಿಬೆಟಿಯನ್ ಮಹಿಳಾ ಸಂಘ, ಮೈಸೂರು ಟಿಬೆಟಿಯನ್ ವಿದ್ಯಾರ್ಥಿ ಸಂಘದ ವತಿಯಿಂದ ಸೋಮವಾರ ಕಾಲ್ನಡಿಗೆ ಜಾಥಾ ನಡೆಸಲಾಯಿತು.

ಮೈಸೂರು ಅರಮನೆ ಉತ್ತರದ್ವಾರದಲ್ಲಿರುವ ಶ್ರೀ ಕೋಟೆ ಆಂಜನೇಯಸ್ವಾಮಿ ದೇವಸ್ಥಾನದ ಎದುರು ಜಮಾವಣೆಗೊಂಡ ನೂರಾರು ಮಂದಿ ಟಿಬೆಟಿಯನ್ನರು, ಚೀನಾ ಸರ್ಕಾರದ ವಿರುದ್ಧ ಧಿಕ್ಕಾರ ಕೂಗುತ್ತಾ ಗಾಂಧಿ ವೃತ್ತದ ಮೂಲಕ ಸಂಯ್ಯಾಜಿರಾವ್ ರಸ್ತೆ, ಚಿಕ್ಕಗಡಿಯಾರ ಮಾರ್ಗವಾಗಿ ಡಿ.ದೇವರಾಜ ಅರಸು ರಸ್ತೆ ಮೂಲಕ ಹಳೆ ಜಿಲ್ಲಾಧಿಕಾರಿ ಕಚೇರಿವರೆಗೆ ಕಾಲ್ನಡಿಗೆ ಜಾಥಾ ನಡೆಸಿ ಟಿಬೆಟಿಯನ್‌ನ 11ನೇ ಪಂಚನ್ ಲಾಮಾ ಅವರ ಇರುವ ಸ್ಥಳ, ಆರೋಗ್ಯ ಮತ್ತು ಧಾರ್ಮಿಕ ಶಿಕ್ಷಣದ ಕುರಿತು ಚೀನಾ ಸರ್ಕಾರ ಉತ್ತರಿಸಬೇಕು ಎಂದು ಒತ್ತಾಯಿಸಿದರು.

ಟಿಬೆಟಿಯನ್‌ನ 11ನೇ ಪಂಚೆನ್ ಲಾಮಾ ಗೆಂದುನ್ ಚೋಕೆರೆ ನಿಮಾ ಅವರ ಅಪಹರಣ ಮತ್ತು ನಾಪತ್ತೆಯಾಗಿ 31 ವರ್ಷಗಳು ಪೂರ್ಣಗೊಳ್ಳುತ್ತಿದೆ. 1995ರ ಇದೇ ದಿನ. ಕೇವಲ ಆರು ವರ್ಷದ ಬಾಲಕರಾಗಿದ್ದ ಅವರನ್ನು ಚೀನಾದ ಆಡಳಿತವು ಅಪಹರಿಸಿತು. ಇದರಿಂದ ಅವರು ಜಗತ್ತಿನ ಅತಿ ಕಿರಿಯ ರಾಜಕೀಯ ಕೈದಿ ಎನಿಸಿದ್ದಾರೆ. ಇಂದಿಗೂ ಅವರ ಬಗ್ಗೆ ಯಾವುದೇ ಮಾಹಿತಿ ಇಲ್ಲ. ದಲೈ ಲಾಮಾ ಅವರು ಅವರನ್ನು 11ನೇ ಪಂಚೆನ್ ಲಾಮಾ ಅವರ ಪುನರ್ಜನ್ಮ ಎಂದು ಗುರುತಿಸಿದ ಮೂರು ದಿನಗಳಲ್ಲೇ ಅವರನ್ನು ಅಪಹರಿಸಲಾಯಿತು. ಟಿಬೆಟಿಯನ್ ಸೆಂಟರ್ ಫಾರ್ ಹ್ಯೂಮನ್ ರೈಟ್ಸ್ ಅಂಡ್ ಡೆಮಾಕ್ರಸಿ ಸಂಸ್ಥೆಯ ಪ್ರಕಾರ, ಟಿಬೆಟಿಯನ್‌ನ 2500ಕ್ಕೂ ಹೆಚ್ಚು ರಾಜಕೀಯ ಮುಖಂಡರನ್ನು ಬಂಧಿಸಲಾಗಿದೆ ಎಂದು ಆತಂಕ ವ್ಯಕ್ತಪಡಿಸಿದರು.

11ನೇ ಪಂಚೆನ್ ಲಾಮಾ ಮತ್ತು ಇತರ ರಾಜಕೀಯ ಮುಖಂಡರನ್ನು ಬಂಧಿಸುವ ಮೂಲಕ ರಾಜಕೀಯವಾಗಿ ಹೋರಾಟ ದಮನ ಮತ್ತು ಧಾರ್ಮಿಕ ಸ್ವಾತಂತ್ರ್ಯದ ಉಲ್ಲಂಘನೆ ಮಾಡಲಾಗಿದೆ. ಚೀನಾದ ಆಕ್ರಮಣದಿಂದಾಗಿ ಟಿಬೆಟಿಯನ್ ಜನರು ದೀರ್ಘಕಾಲದಿಂದ ಸಂಕಷ್ಟ ಅನುಭವಿಸುತ್ತಿದ್ದಾರೆ. ಚೀನಾ ನಡೆ ವಿಶ್ವಸಂಸ್ಥೆಯ ಮಾನವ ಹಕ್ಕುಗಳ ಘೋಷಣೆಯ ಉಲ್ಲಂಘನೆ ಎಂದು ಕಿಡಿಕಾರಿದರು.

ಚೀನಾ ಸರ್ಕಾರ ಕೂಡಲೇ ಟಿಬೆಟಿಯನ್‌ನ 11ನೇ ಪಂಚೆನ್ ಲಾಮಾ ಗಂದುನ್ ಚೋಕೆರೆ ನಿಮಾ ಹಾಗೂ ಎಲ್ಲಾ ನಿರಪರಾಧಿ ಟಿಬೆಟಿಯನ್‌ನ ಧಾರ್ಮಿಕ ಮತ್ತು ರಾಜಕೀಯ ಮುಖಂಡರನ್ನು ಬಿಡುಗಡೆ ಮಾಡಬೇಕು. ಟಿಬೆಟಿಯನ್ ಸಂಸ್ಕೃತಿ ಮತ್ತು ಭಾಷಾ ಸಂಹಾರವನ್ನು ನಿಲ್ಲಿಸಬೇಕು. ಟಿಬೆಟಿಯನ್ ಸೂಕ್ಷ್ಮ ಪರಿಸರವನ್ನು ಗೌರವಿಸಿ, ತಕ್ಷಣವೇ ಹಾನಿಕಾರಕ ಗಣಿಗಾರಿಕೆ ಚಟುವಟಿಕೆಗಳನ್ನು ನಿಲ್ಲಿಸಬೇಕು ಎಂದು ಆಗ್ರಹಿಸಿದರು. ಬೈಲಕುಪ್ಪೆಯ ಮಿಡಲ್ ವೇ ಟಿಬೆಟಿಯನ್ ಯೂತ್ ಕಾಂಗ್ರೆಸ್ ಅಧ್ಯಕ್ಷ ನೈಮಾ ಗಯಾಲ್ಪೋ, ಚುಂಗ್ ತ್ಸೆರಿಂಗ್, ಗೆಂಡುನ್ ಕೈಂಜೊಮ್, ಸೋನಮ್ ಡೋಲ್ಕರ್, ತ್ಸೆರಿಂಗ್ ಚೋಡಾನ್, ಜಂಪಾ ಚೋಡಪ್ ಮತ್ತಿತರರಿದ್ದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಭಗವತಿ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ರೆಬೆಲ್ (ತೆ)	4 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಪೆಟ್ರಿಯೋಟ್ (ಮ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಕೆಡಿ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಲೋ ನವೀನ (ಕ)	4 ಪ್ರದರ್ಶನಗಳು
ರಾಜಕಮಲ್	
ಕರುಪ್ಪು (ತ)	4 ಪ್ರದರ್ಶನಗಳು
ಸಂಗಂ	
ಕೆಡಿ (ಕ)	4 ಪ್ರದರ್ಶನಗಳು
ಲಿಡೋ	
ಶಿಖಂಡಿ(ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಶೇರ್ (ಕ)	4 ಪ್ರದರ್ಶನಗಳು

ವಿಶ್ವಮಟ್ಟದ ಸ್ಪರ್ಧೆಗೆ ತಯಾರು ಮಾಡುವ ಗುಣಾತ್ಮಕ ಶಿಕ್ಷಣ ಇಂದಿನ ಅಗತ್ಯ– ಎಚ್.ವಿ. ರಾಜೀವ್

ಅಶೋಕಪುರಂನಲ್ಲಿ ಅಮ್ಮನ ಮಮತೆ ಮತ್ತು ಹೆಣ್ಣಿನ ಹೆಮ್ಮೆ ವಿಶಿಷ್ಟ ಕಾರ್ಯಕ್ರಮ



ಅಮ್ಮನ ಮಮತೆ ಮತ್ತು ಹೆಣ್ಣಿನ ಹೆಮ್ಮೆ ಕಾರ್ಯಕ್ರಮವನ್ನು ಎಚ್.ವಿ. ರಾಜೀವ್ ಉದ್ಘಾಟಿಸಿದರು

ಮೈಸೂರು, ಮೇ 18– ವಿಶ್ವ ಮಟ್ಟದ ಸ್ಪರ್ಧೆಗೆ ವಿದ್ಯಾರ್ಥಿಗಳನ್ನು ತಯಾರು ಮಾಡುವ ಗುಣಾತ್ಮಕ ಶಿಕ್ಷಣ ಇಂದಿನ ಅಗತ್ಯ ಎಂದು ಮೈಸೂರು ನಗರಾಭಿವೃದ್ಧಿ ಪ್ರಾಧಿಕಾರದ (ಮುಡಾ) ಮಾಜಿ ಅಧ್ಯಕ್ಷ ಎಚ್.ವಿ. ರಾಜೀವ್ ಹೇಳಿದರು.

ಸಾಲಿಗ್ರಾಮದ ಶ್ರೀ ಚನ್ನಕೇಶವಸ್ವಾಮಿ ವಿದ್ಯಾಸಂಸ್ಥೆಯು ನಗರದ ಅಶೋಕಪುರಂನ ಅಶೋಕ ಪ್ರೌಢಶಾಲೆಯಲ್ಲಿ ಏರ್ಪಡಿಸಿದ್ದ ಅಮ್ಮನ ಮಮತೆ ಮತ್ತು ಹೆಣ್ಣಿನ ಹೆಮ್ಮೆ ವಿಶಿಷ್ಟ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಗುಣಾತ್ಮಕ ಶಿಕ್ಷಣ ನೀಡುವಲ್ಲಿ ಯಾವುದೇ ರಾಜಿ ಮಾಡಿಕೊಳ್ಳಬಾರದು. ಆಗ ಮಾತ್ರ ಪೋಷಕರು ಮಕ್ಕಳನ್ನು ದಾಖಲು ಮಾಡುತ್ತಾರೆ ಎಂದರು.

ಇವತ್ತು ವಿಶ್ವದಾದ್ಯಂತ ಉದ್ಯೋಗಾವಕಾಶಗಳು ಸಿಗುತ್ತಿರುವುದರಿಂದ ವಿದ್ಯಾರ್ಥಿಗಳನ್ನು ಅದಕ್ಕೆ ಸಜ್ಜುಗೊಳಿಸುವ ಹೊಣೆಗಾರಿಕೆ ಶಿಕ್ಷಕರ ಮೇಲಿದೆ. ಇದಕ್ಕೆ ಆಡಳಿತ ಮಂಡಳಿಯೂ ಪೂರಕ ವಾತಾವರಣ ನಿರ್ಮಿಸಿಕೊಡಬೇಕು ಎಂದು ಹೇಳಿದರು.

ಸಾಲಿಗ್ರಾಮದ ಕಾಳಯ್ಯ ಅವರು ಸಂವಿಧಾನ ಶಿಲ್ಪಿ ಡಾ.ಬಿ.ಆರ್. ಅಂಬೇಡ್ಕರ್ ಅವರಿಂದ ಸ್ಫೂರ್ತಿ ಪಡೆದು ಬಡವರ್ಗದವರಿಗೆ ಶಿಕ್ಷಣ ನೀಡುವ ಸಲುವಾಗಿ 52 ವರ್ಷಗಳ ಹಿಂದೆಯೇ ಶ್ರೀ ಚನ್ನಕೇಶ್ವರ ವಿದ್ಯಾಸಂಸ್ಥೆಯನ್ನು ಆರಂಭಿಸಿ, ಸಾಲಿಗ್ರಾಮ, ಮೈಸೂರಿನ ಅಶೋಕಪುರಂ, ಶ್ರೀರಾಂಪುರ, ಕೊರಟಿಕೆರೆ ಮೊದಲಾದ ಕಡೆ ಶಿಕ್ಷಣ ಸಂಸ್ಥೆಗಳನ್ನು ಆರಂಭಿಸಿದವರು ಎಂದು ಶ್ಲಾಘಿಸಿದರು.

ಈಗ ಅನುದಾನಿತ ಸಂಸ್ಥೆಗಳಲ್ಲಿರುವವರು ನಿವೃತ್ತರಾದರೆ ಸರ್ಕಾರ ನೇಮಕಾತಿಗೆ ತಕ್ಷಣ ಅನುಮತಿ ನೀಡುವುದಿಲ್ಲ. ಇಂತಹ ಸಂದರ್ಭದಲ್ಲಿ ಉತ್ತಮ ಶಿಕ್ಷಕರನ್ನು ನೇಮಕ ಮಾಡಿಕೊಂಡು ಶಿಕ್ಷಣ ನೀಡಬೇಕಿರುವುದು ಆಡಳಿತ ಮಂಡಳಿಗೆ ಸವಾಲಿನ ಕೆಲಸ ಎಂದು ಅವರು ಅಭಿಪ್ರಾಯಪಟ್ಟರು.

ಶ್ರೀ ಚನ್ನಕೇಶವ ವಿದ್ಯಾಸಂಸ್ಥೆಯ ಅಧ್ಯಕ್ಷ ಯಶಸ್ವಿನಿ ಲೋಕೇಶ್ವರ ಅಧ್ಯಕ್ಷತೆ ವಹಿಸಿದ್ದರು. ಮಾಜಿ ಮೇಯರ್ ಪುರುಷೋತ್ತಮ್ ಬಹುಮಾನ ವಿತರಿಸಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್, ಡಾ.ರೇಖಾ ಮನಃಶಾಂತಿ, ಅಶೋಕಪುರಂ ಠಾಣೆಯ ಎಎಸ್‌ಐ ಎಂ.ಬಿ. ಗೀತಾ ಮುಖ್ಯ ಅತಿಥಿಗಳಾಗಿದ್ದರು. ಚಲನಚಿತ್ರ ನಟ ಡಿಂಗ್ರಿ ನಾಗರಾಜ್ ವಿಶೇಷ ಆಹ್ವಾನಿತರಾಗಿದ್ದರು. ಸಂಸ್ಥೆಯ ಗೌರವ ಕಾರ್ಯದರ್ಶಿ ಚನ್ನಮಲ್ಲಯ್ಯ, ನಿರ್ದೇಶಕರಾದ ಕೆ.ಆರ್. ಬಸವರಾಜು, ಪ್ರಾಂಶುಪಾಲರಾದ ಮಂಜೇಗೌಡ, ಮುಖ್ಯ ಶಿಕ್ಷಕರಾದ ಎಂ.ಪಿ. ಮಹೇಶ್, ಶಂಕರಯ್ಯ, ಎಂ. ರಾಜೀವ್, ಎಸ್.ಸಿ. ಗೋವಿಂದ ರಾಜು, ಆಡಳಿತಾಧಿಕಾರಿಗಳಾದ ವಿ. ಸುಶ್ಮಿತಾ ಪವಾರ್, ಎಂ. ಪೂಜಾ, ರಮ್ಯಾ ಮೊದಲಾದವರು ಇದ್ದರು. ವಿಜಯಶ್ರೀ ಸಪ್ತಸ್ವರ ತಂಡದವರು ಚಲನಚಿತ್ರಗೀತೆಗಳು, ಶ್ಯಾಮ್ ಅವರಿಂದ ಮಿಮಿಕ್ರಿ, ಲಾವಣ್ಯ ಅವರಿಂದ ನೃತ್ಯ, ಶಿಕ್ಷಕಿಯರು ಹಾಗೂ ವಿದ್ಯಾರ್ಥಿಗಳಿಂದ ನೃತ್ಯ ಪ್ರದರ್ಶನ ಇತ್ತು.

ನಾಳೆ ಸಾರಿಗೆ ನೌಕರರ ಮುಷ್ಕರ ಪ್ರಸ್ತಾಪ

ಸಾರ್ವಜನಿಕರಿಗೆ ತೊಂದರೆ ಆಗದಂತೆ ಕ್ರಮಕ್ಕೆ ಜಿಲ್ಲಾಧಿಕಾರಿಗಳ ಸೂಚನೆ



ಕೆಎಸ್‌ಆರ್‌ಟಿಸಿ ನೌಕರರು ಅನಿರ್ದಿಷ್ಟಾವಧಿ ಮುಷ್ಕರ ಹಿನ್ನೆಲೆಯಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ, ಜಿಲ್ಲಾ ಮಟ್ಟದ ಅಧಿಕಾರಿಗಳು ಮತ್ತು ಖಾಸಗಿ ವಾಹನಗಳ ಮಾಲೀಕರ ಸಂಘದ ಪದಾಧಿಕಾರಿಗಳೊಂದಿಗೆ ಸೋಮವಾರ ಸಭೆ ನಡೆಸಿದರು.

ಮೈಸೂರು, ಮೇ 18(ಎಂಕೆ)– ಕೆಎಸ್‌ಆರ್‌ಟಿಸಿ ನೌಕರರು ಮೇ 20ರಿಂದ ಅನಿರ್ದಿಷ್ಟಾವಧಿ ಮುಷ್ಕರಕ್ಕೆ ಕರೆ ನೀಡಿರುವ ಹಿನ್ನೆಲೆಯಲ್ಲಿ ಸಾರ್ವಜನಿಕರಿಗೆ ತೊಂದರೆಯಾಗದಂತೆ ಪರ್ಯಾಯ ವ್ಯವಸ್ಥೆ ಮಾಡಿಕೊಳ್ಳುವಂತೆ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ್ ರೆಡ್ಡಿ ತಿಳಿಸಿದರು.

ಮೈಸೂರು ಜಿಪಂ ಸಭಾಂಗಣದಲ್ಲಿ ಜಿಲ್ಲಾ ಮಟ್ಟದ ಅಧಿಕಾರಿಗಳು, ಖಾಸಗಿ ವಾಹನ ಮಾಲೀಕರ ಸಂಘದ ಪದಾಧಿಕಾರಿಗಳೊಂದಿಗೆ ಸಭೆ ನಡೆಸಿದ ಅವರು, ಮೈಸೂರು ನಗರದಲ್ಲಿ 517 ಶೆಡ್ಯೂಲ್‌ಗಳಲ್ಲಿ 534 ಸಾರಿಗೆ ಬಸ್‌ಗಳು ಹಾಗೂ ಮೈಸೂರು ಗ್ರಾಮಾಂತರದಲ್ಲಿ 691 ಶೆಡ್ಯೂಲ್‌ಗಳಲ್ಲಿ 720 ಬಸ್‌ಗಳು ಕಾರ್ಯ ನಿರ್ವಹಿಸುತ್ತಿವೆ. ಸಾರಿಗೆ ನೌಕರರು ಮುಷ್ಕರ ಹಮ್ಮಿಕೊಂಡಲ್ಲಿ ರೂಟ್‌ಮ್ಯಾಪ್ ಸಿದ್ಧಪಡಿಸಿಕೊಳ್ಳಬೇಕು ಎಂದರು.

ಕೆಎಸ್‌ಆರ್‌ಟಿಸಿ ಪ್ರಾದೇಶಿಕ ಸಾರಿಗೆ, ಪೊಲೀಸ್ ಇಲಾಖೆ ಅಧಿಕಾರಿಗಳು ಒಟ್ಟಾಗಿ ಸೇರಿ ಸಾರ್ವಜನಿಕರ ಪ್ರಯಾಣಕ್ಕೆ ತೊಂದರೆಯಾಗದಂತೆ ಕಾರ್ಯ ನಿರ್ವಹಿಸಬೇಕು. ಖಾಸಗಿ ಬಸ್, ಮ್ಯಾಕ್ಸಿಕ್ಯಾಬ್ ಮತ್ತು ಮಿನಿ ಬಸ್‌ಗಳ ಮಾಹಿತಿ ಪಡೆದು ಗ್ರಾಮಾಂತರ ಮತ್ತು ನಗರ ಬಸ್ ನಿಲ್ದಾಣದಲ್ಲಿನ ಕಂಟ್ರೋಲ್ ರೂಂಗಳಲ್ಲಿ ಮಾಹಿತಿ ನೀಡಬೇಕು. ಕಳೆದ ಬಾರಿಯಂತೆ ಈ ಬಾರಿಯೂ ಪೂರ್ವ ಯೋಜನೆ ಸಿದ್ಧಪಡಿಸಿಕೊಂಡು ಯಶಸ್ವಿಯಾಗಿ ಕಾರ್ಯನಿರ್ವಹಿಸಿ ಎಂದು ಸೂಚಿಸಿದರು.

ಸಾರಿಗೆ ನೌಕರರ ಮುಷ್ಕರ ಮುಂದಿಟ್ಟುಕೊಂಡು ಸಾರ್ವಜನಿಕರಿಂದ ನಿಗದಿತ ದರಕ್ಕಿಂತ ಹೆಚ್ಚುವರಿ ಹಣ ವಸೂಲಿ ಮಾಡಬಾರದು. ಬಸ್ ನಿಲ್ದಾಣಗಳಲ್ಲಿ ಅಗತ್ಯ ಪೊಲೀಸ್ ಸಿಬ್ಬಂದಿಗಳನ್ನು ನಿಯೋಜನೆ ಮಾಡಬೇಕು. ಮುಷ್ಕರದ ಸಂದರ್ಭದಲ್ಲಿ ಕಲ್ಲು ತೂರಾಟ ಹಾಗೂ ಅಹಿತಕರ ಘಟನೆ ಸಂಭವಿಸುವ ರೀತಿ ಸನ್ನಿವೇಶ ಸೃಷ್ಟಿಸಿದಲ್ಲಿ ನಿರ್ದಾಕ್ಷಿಣ್ಯವಾಗಿ ಕ್ರಮ ಕೈಗೊಳ್ಳುವುದಾಗಿ ಎಚ್ಚರಿಕೆ ನೀಡಿದರು.

ಸಭೆಯಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಮಲ್ಲಿಕಾರ್ಜುನ ಬಾಲದಂಡಿ, ಡಿಸಿಪಿ ಸುಂದರ್ ರಾಜ್, ಪ್ರಾದೇಶಿಕ ಸಾರಿಗೆ ಆಯುಕ್ತರಾದ ಚೌಹಾನ್, ಮಾಧುರಿ, ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ (ನಗರ) ವೀರೇಶ್, ಗ್ರಾಮೀಣ ವಿಭಾಗದ ಶ್ರೀನಿವಾಸ್ ಹಾಗೂ ಖಾಸಗಿ ವಾಹನ ಮಾಲೀಕರ ಸಂಘದ ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸುಂದರ ಬದುಕಿಗಿಂತ ಜಾತಿ–ಹಣವೇ ಪ್ರಧಾನವಾಗಿದೆ

ಮೈಸೂರು ಜಿಲ್ಲೆಯ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ ಕೃತಿ ಬಿಡುಗಡೆ



ಡಾ.ಎಸ್.ಅರುಣಕುಮಾರಿ ರಚಿತ 'ಮೈಸೂರು ಜಿಲ್ಲೆಯ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ' ಕೃತಿಯನ್ನು ಕರ್ನಾಟಕ ರಾಜ್ಯ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ಬಿಡುಗಡೆಗೊಳಿಸಿದರು.

ಮೈಸೂರು, ಮೇ 18(ಎಸ್‌ಪಿಎನ್)– ಪ್ರಸ್ತುತ ಸಮಾಜದಲ್ಲಿ ಜನರಿಗೆ ಸುಂದರ ಬದುಕಿಗಿಂತ ಜಾತಿ–ಹಣವೇ ಪ್ರಧಾನವಾಗಿದೆ ಎಂದು ಕರ್ನಾಟಕ ರಾಜ್ಯ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಪ್ರೊ.ಪದ್ಮಾಶೇಖರ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಸಯ್ಯಾಜಿರಾವ್ ರಸ್ತೆಯಲ್ಲಿರುವ ಶ್ರೀ ಶಾಂತಿನಾಥ ಸ್ವಾಮಿ ಬಸದಿ (ಕೋಟೆ ಬಸದಿ) ಆವರಣದಲ್ಲಿ ತಾರಾ ಪ್ರಕಾಶನ ಮತ್ತು ಮೈಸೂರಿನ ಗಂಗೋತ್ರಿ ಜೈನ್ ಮಿಲನ್ ಸಹಯೋಗದೊಂದಿಗೆ ಏರ್ಪಡಿಸಿದ್ದ ಲೇಖಕಿ ಡಾ.ಎಸ್. ಅರುಣಕುಮಾರಿ ರಚಿತ 'ಮೈಸೂರು ಜಿಲ್ಲೆಯ ಜೈನಧರ್ಮ ಒಂದು ಸಾಂಸ್ಕೃತಿಕ ಅಧ್ಯಯನ' ಕೃತಿಯನ್ನು ಬಿಡುಗಡೆಗೊಳಿಸಿ ಮಾತನಾಡಿದ ಅವರು, ಜನರಲ್ಲಿ ಸಮಾಜಮುಖಿ ಕಾರ್ಯಗಳಿಗಿಂತ ಸ್ವಾರ್ಥ ಬದುಕಿಗೆ ಮಾರುಹೋಗುತ್ತಿದ್ದಾರೆ. ಯಾರಿಗೂ ಲೋಕದ ಹಿತ, ಜನಹಿತ, ಬೇಕಾಗಿಲ್ಲ. ಮತೀಯ ಚೌಕಟ್ಟು ವಿಧಿಸಿಕೊಂಡು ಬದುಕು ರೂಪಿಸಿಕೊಂಡಿದ್ದಾರೆ. ಇದಕ್ಕೆ ಜಾತಿ–ಹಣ ಎರಡೂ ಕಾರಣವಾಗಿದೆ.

ಲೇಖಕಿ ಡಾ.ಎಸ್.ಅರುಣಕುಮಾರಿ ಅವರು, ಅವಿಭಜಿತ ಮೈಸೂರು ಜಿಲ್ಲೆಯಲ್ಲಿ ಜೈನಧರ್ಮದ ಅಸ್ತಿತ್ವ, ಬೆಳವಣಿಗೆ ಮತ್ತು ಪ್ರಭಾವವನ್ನು ಗಂಭೀರವಾಗಿ ಪರಿಗಣಿಸಿ ಅಭ್ಯಸಿಸಿದ್ದಾರೆ. ಹೀಗಾಗಿ ಕೃತಿಯು ಅತ್ಯಂತ ಸಮಯೋಚಿತ ಹಾಗೂ ಮೌಲ್ಯಯುತ ಕೃತಿಯಾಗಿ ಮೂಡಿ ಬಂದಿದೆ. ಅಲ್ಲದೆ, 'ಭಾರತೀಯ ಪ್ರಮುಖ ಧರ್ಮಗಳಲ್ಲಿ ಜೈನ ಧರ್ಮವೂ ಒಂದಾಗಿದೆ ಎಂದರು.

ಕರ್ನಾಟಕದ ಇತಿಹಾಸ ಪ್ರಾರಂಭ ಜೈನ ಧರ್ಮದ ಇತಿಹಾಸದಿಂದ. ಈ ಸಂಗತಿಯನ್ನು ಯಾರೂ ಅಲ್ಲಗೆಳೆಯುತ್ತಿಲ್ಲ. ಧರ್ಮದ ಕಲ್ಪನೆ, ವ್ಯಾಖ್ಯಾನ ಕೊಡುವಲ್ಲಿ ಈ ಕೃತಿ ಪ್ರಮುಖವಾಗಿದೆ. ಅಹಿಂಸೆ ಮತ್ತು ಆಧ್ಯಾತ್ಮಿಕ ಶುದ್ಧತೆಯನ್ನು ಜೈನ ಧರ್ಮ ಬೋಧಿಸುತ್ತದೆ. ಈ ನಿಟ್ಟಿನಲ್ಲಿ ಜೈನಧರ್ಮದಲ್ಲಿ ಜಾತ್ಯಾತೀತ ತತ್ವ ಹಾಸುಹೊಕ್ಕಾಗಿದೆ. ಜೈನಧರ್ಮದ ಸ್ವಾಮೀಜಿಗಳಾದ ಭುವನಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಅವರ ಆಚಾರ–ವಿಚಾರ ಗಳೆಲ್ಲವೂ ಜಾತ್ಯಾತೀತ ನೆಲೆಗಟ್ಟಿನಲ್ಲಿ ಸಾಗುತ್ತಿರುವುದು ಸಂತೋಷದ ಸಂಗತಿ ಎಂದರು.

ಪುಸ್ತಕ ಬಿಡುಗಡೆ ಸಮಾರಂಭದಲ್ಲಿ ಭುವನಕೀರ್ತಿ ಭಟ್ಟಾರಕ ಪಟ್ಟಾಚಾರ್ಯವರ್ಯ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಪ್ರಾಂಶುಪಾಲ ಪಿ.ಬೆಟ್ಟೇಗೌಡ, ಮೈಸೂರು ವಿ.ವಿ ಜೈನ ಶಾಸ್ತ್ರ ಮತ್ತು ಪ್ರಾಕೃತ ಅಧ್ಯಯನ ವಿಭಾಗದ ಅಧ್ಯಕ್ಷೆ ಎಸ್.ಡಿ.ಶಶಿಕಲಾ ಅಧ್ಯಕ್ಷತೆ ವಹಿಸಿದ್ದರು. ಭಾರತೀಯ ಜೈನ್ ಮಿಲನ್ ಮೈಸೂರು ವಿಭಾಗದ ಗೌರವ ಅಧ್ಯಕ್ಷೆ ಶೀಲಾ ಅನಂತ ರಾಜು, ಉಪಾಧ್ಯಕ್ಷ ಎನ್.ಪ್ರಸನ್ನ ಕುಮಾರ್, ಗಂಗೋತ್ರಿ ಜೈನ್ ಮಿಲನ್ ಅಧ್ಯಕ್ಷ ಎಚ್.ಎನ್.ಅನಿಲ್ ಕುಮಾರ್, ದಿಗಂಬರ ಜೈನ ಸಮಾಜ ಅಧ್ಯಕ್ಷ ಸುನಿಲ್ ಕುಮಾರ್ ಜೈನ್, ಪದ್ಮಶ್ರೀ ಜೈನ ಮಹಿಳಾ ಸಮಾಜ ಅಧ್ಯಕ್ಷೆ ನಂದಿನಿ, ಶಾಂತಿನಾಥ ಸೇವಾ ಸಮಿತಿ ಅಧ್ಯಕ್ಷ ಎಸ್.ಬಿ.ಸುರೇಶ್ ಜೈನ್, ಹಿರಿಯ ಪತ್ರಕರ್ತ ಮಹಾವೀರ್ ಪ್ರಸಾದ್, ತಾರಾ ಪ್ರಕಾಶನದ ಎಂ.ಎನ್.ಶಶಿಕುಮಾರ್ ಇದ್ದರು.

ಇಂದು ಬಿಳಿಗಿರಿರಂಗನಬೆಟ್ಟದಲ್ಲಿ ಜೀವನೋತ್ಸಾಹ ಶಿಬಿರದ ಸಮಾರೋಪ

ಮೈಸೂರು, ಮೇ 18 – ಶ್ರೀ ಸುತ್ತೂರು ಮಠ, ಜೆಎಸ್‌ಎಸ್ ಮಹಾವಿದ್ಯಾಪೀಠ ಹಾಗೂ ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿಗಳ ಸಂಯುಕ್ತಾಶ್ರಯದಲ್ಲಿ ಬಿಳಿರಂಗನಬೆಟ್ಟದ ಶ್ರೀ ಸುತ್ತೂರು ಶಾಖಾಮಠದಲ್ಲಿ ಮೇ 13ರಿಂದ ನಡೆಯುತ್ತಿರುವ ಜೀವನೋತ್ಸಾಹ ಶಿಬಿರದ ಸಮಾರೋಪವನ್ನು ಮೇ 19ರಂದು ಬೆಳಗ್ಗೆ 10 ಗಂಟೆಗೆ ಏರ್ಪಡಿಸಲಾಗಿದೆ.

ರಾಜ್ಯ ಚುನಾವಣಾ ಆಯುಕ್ತ ಜಿ.ಎಸ್. ಸಂಗ್ರೇಶಿಯವರು ಅಧ್ಯಕ್ಷತೆ ವಹಿಸಲಿದ್ದು, ಬೆಂಗಳೂರು ದಕ್ಷಿಣದ ಜಿಲ್ಲಾಧಿಕಾರಿ ಯಶವಂತ್ ವಿ. ಗುರುಕಾರ್ ಸಮಾರೋಪ ಭಾಷಣ ಮಾಡಲಿದ್ದಾರೆ. ಚಾಮರಾಜನಗರ ಜಿಪಂ ಸಿಇಒ ಮೋನಾ ರೋತ್ ಮುಖ್ಯ ಅತಿಥಿಗಳಾಗಿ ಆಗಮಿಸಲಿದ್ದಾರೆ.

ವಿದ್ಯಾವರ್ಧಕ ಕಾನೂನು ಕಾಲೇಜಿನ ಸುವರ್ಣ ಮಹೋತ್ಸವದ 'ವಿದ್ಯೋತ್ಸವ' ಸಂಪನ್ನ



ವಿವಿಧ ಸರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಗಣ್ಯರಿಂದ ಪ್ರಮಾಣಪತ್ರ ಮತ್ತು ಸ್ಮರಣಿಕೆ ವಿತರಿಸಲಾಯಿತು.

ಮೈಸೂರು, ಮೇ 18 –ವಿದ್ಯಾವರ್ಧಕ ಕಾನೂನು ಕಾಲೇಜಿನ ಸುವರ್ಣ ಮಹೋತ್ಸವದ ವಿದ್ಯೋತ್ಸವ ಸಮಾರೋಪ ಕಾರ್ಯಕ್ರಮ ನಡೆಯಿತು.

ಬೆಂಗಳೂರು ಸಿಟಿ ಸಿವಿಲ್ ಕೋರ್ಟ್ ಹೆಚ್ಚುವರಿ ಸಿಟಿ ಸಿವಿಲ್ ಮತ್ತು ಸೆಷನ್ಸ್ ನ್ಯಾಯಾಧೀಶರಾದ ಶ್ರೀಮತಿ ಅನಿತಾ ಎನ್.ಪಿ, ಸಮಾರೋಪ ಭಾಷಣ ಮಾಡಿದರು.

ಕಾನೂನು ಕ್ಷೇತ್ರದಲ್ಲಿ ಕೆಲಸಮಾಡಲು ಕಾನೂನು ಅಧ್ಯಯನ ಬಹಳ ಮಹತ್ವಯುತವಾದ್ದು. ಇಂದಿನ ಯುವ ಪೀಳಿಗೆಯ ಹೆಚ್ಚಿನವರು ಇಂಜಿನೀಯರ್ ಹಾಗೂ ಡಾಕ್ಟರ್‌ಗಳೇ ಅಗಬೇಕು ಎನ್ನುತ್ತಿರುವಾಗಲು ಕಾನೂನು ಅಧ್ಯಯನಕ್ಕೂ ಹೆಚ್ಚಿನ ಆದ್ಯತೆಯನ್ನು ನೀಡುತ್ತಿದ್ದಾರೆ.

ಅಧುನಿಕ ಸಮಾಜದ ಹಲವಾರು ಸಮಸ್ಯೆಗಳಿಗೆ ಕಾನೂನು ಅಧ್ಯಯನವು ಪರಿಹಾರ ಒದಗಿಸುತ್ತದೆ ಹಾಗೂ ಪರಿಸರ ಆಡಳಿತ, ವ್ಯವಹಾರಿಕ ಹಾಗೂ ವ್ಯಕ್ತಿಗತವಾಗಿಯು ಅನುಕೂಲವಾಗುತ್ತದೆ. ಹಕ್ಕು ಮತ್ತು ಕರ್ತವ್ಯಗಳು, ಪ್ರಜಾಪ್ರಭುತ್ವ ಹಾಗೂ ರೂಲ್ ಆಫ್ ಲಾ ತಿಳಿಯ ಬೇಕಾದರೆ ಕಾನೂನು ಅಧ್ಯಯನ ಅಗತ್ಯ.

ಇವತ್ತಿನ ತಂತ್ರಜ್ಞಾನದಿಂದ ಎಲ್ಲಿಂದ ಎಲ್ಲಿಗಾದರು ತಲುಪಬಹುದಾಗಿದೆ. ಹಾಗೆಯೇ ಜಾಗತಿಕ ಪ್ರಪಂಚದ ಪ್ರಚಲಿತ ಸಮಸ್ಯೆಗಳು ಸವಾಲುಗಳಾಗಿವೆ. ಸೈಬರ್ ಕ್ರೈಂಮ್‌ಗಳಿಂದ ವೈಯಕ್ತಿಕ ದತ್ತಾಂಶಗಳನ್ನು ಕಾಪಾಡಿಕೊಳ್ಳುವುದು ಕಷ್ಟವಾಗಿದೆ. ವೈಯಕ್ತಿಕ ದತ್ತಾಂಶಗಳು ಕೂಡ ವ್ಯಕ್ತಿಗತ ಆಸ್ತಿಯಾಗಿದೆ. ಮತ್ತೊಂದು ಕಡೆ ಕೃತಕ ಬುದ್ಧಿಮತ್ತೆ ಸಹ ಜಾಗತಿಕ ಚರ್ಚೆಯಲ್ಲಿರುವ ವಿಷಯವಾಗಿದೆ. ಡಾಕ್ಟರ್‌ಗಳಿಗೆ ಹಾಗೂ ಇಂಜಿನಿಯರ್‌ಗಳಿಗೂ ಕೃತಕ ಬುದ್ಧಿಮತ್ತೆ ಸರ್ಧೆ ಮಾಡುತ್ತಿದೆ. ಮುಂದಿನ ದಿನಗಳಲ್ಲಿ ನ್ಯಾಯಾಧೀಶರುಗಳಿಲ್ಲದ ನ್ಯಾಯಾಲಯಗಳನ್ನು (ಕೃತಕ ಬುದ್ಧಿಮತ್ತೆ ಪ್ರತಿನಿಧಿತ) ನಿರೀಕ್ಷಿಸಬಹುದು. ನಮ್ಮೆಲ್ಲರ ಭೌಧಿಕ ಆಸ್ತಿಗಳನ್ನು ಕಾಪಾಡಿಕೊಳ್ಳಲು ಕಾನೂನು ಅಧ್ಯಯನ ಮುಖ್ಯವಾಗಿದೆ. ಕಾನೂನು ಶಿಕ್ಷಣ ಪಡೆದವರಿಗೆ ಕಾನೂನು ಕ್ಷೇತ್ರದಲ್ಲಿ ಹೆಚ್ಚು ಉದ್ಯೋಗಾವಕಾಶಗಳು ದೊರೆಯುತ್ತವೆ.

ವಕೀಲಿ ವೃತ್ತಿ ಅಷ್ಟೆಯಲ್ಲದೆ ಕಾರ್ಪೋರೇಟ್ ವಲಯ, ಕಾನೂನು ಪತ್ರಿಕೋದ್ಯಮ, ಮಾನವ ಹಕ್ಕು ಪ್ರತಿನಿಧಿತ ವಕೀಲಿ ವೃತ್ತಿ, ಆರ್ಬಿಟ್ರೇಷನ್ ಅಂಡ್ ಮೆಡಿಯೇಷನ್ ತಾಲೂಕು, ಜಿಲ್ಲಾ ಹಾಗೂ ರಾಜ್ಯ ಕಾನೂನು ಸೇವಾ ಪ್ರಾಧಿಕಾರ, ಲೊಕ ಅದಾಲತ್‌ನಲ್ಲಿ ಸಾಮಾಜಿಕ ನ್ಯಾಯವಿಭಾಗ ಹಾಗೂ ನ್ಯಾಯಾಂಗ ಸೇವೆಯಲ್ಲಿ ಹೆಚ್ಚಿನ ಅವಕಾಶಗಳಿವೆ. ಸಾಮಾಜಿಕ ಪಿಡುಗುಗಳಾದ ಭ್ರಷ್ಟಾಚಾರ, ಮಕ್ಕಳ ದುರುಪಯೋಗ ಮುಂತಾದ ಸಮಸ್ಯೆಗಳಿಗೆ ಕಾನೂನು ಅಧ್ಯಯನ ಪರಿಹಾರ ನೀಡುತ್ತದೆ. ಇತರ ಸಾಂಪ್ರದಾಯಕ ಪದವಿಗಳ ಅಧ್ಯಯನಕ್ಕಿಂತ ಕಾನೂನು ಅಧ್ಯಯನದ ವಿಷಯದಲ್ಲಿ ವಿಶೇಷತೆ ಇದೆ ಎಂದರು.

ಕಾಲೇಜಿನ ಸಿಎಂಸಿ ಚೇರ್ಮನ್, ಶಿವಲಿಂಗಯ್ಯ, ಅಸಹಾಯಕರಾಗಿ ಬಂದ ಕಕ್ಷೀದಾರರುಗಳ ಹಿತರಕ್ಷಣೆ ಭವಿಷ್ಯದ ವಕೀಲರಾದ ನಿಮ್ಮೆಲ್ಲರ ಆದ್ಯ ಕರ್ತವ್ಯವಾಗಬೇಕೆಂದು ಹೇಳಿದರು. ಅಧ್ಯಕ್ಷತೆ ವಹಿಸಿದ್ದ ವಿದ್ಯಾವರ್ಧಕ ಸಂಘದ ಕಾರ್ಯದರ್ಶಿ ಪಿ.ವಿಶ್ವನಾಥ್ ಮಾತನಾಡಿ, ಇತ್ತೀಚಿನ ದಿನಗಳಲ್ಲಿ ಕಾನೂನು ಅಧ್ಯಯಕ್ಕೆ ಹೆಚ್ಚಿನ ಆದ್ಯತೆ ಇದೆ. ವಕೀಲಿ ವೃತ್ತಿಯು ಸಮಾಜದಲ್ಲಿ ನೋಬೆಲ್ ವೃತ್ತಿಯಾಗಿದೆ. ಈ ವೃತ್ತಿಯಲ್ಲಿ ಯಶಸ್ವಿಯಾಗಬೇಕಾದರೆ ಪ್ರಾಮಾಣಿಕತೆ, ನಿಷ್ಠೆ, ಪರಿಶ್ರಮ ಹಾಗೂ ನಿರಂತರ ಅಧ್ಯಯನ ಇರಬೇಕು ಮತ್ತು ಇತ್ತೀಚಿನ ಜಾಗತಿಕ ತಂತ್ರಜ್ಞಾನದ ಭಾಗವಾಗಿರುವ ಕೃತಕ ಬುದ್ಧಿಮತ್ತೆ ಬಗ್ಗೆ ಬಹಳ ಎಚ್ಚರಿಕೆಯಿಂದ ಇರಬೇಕೆಂದು ವಿದ್ಯಾರ್ಥಿಗಳನ್ನು ಉದ್ದೇಶಿಸಿ ಮಾತನಾಡಿದರು.

ವಿವಿಧ ಸರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಗಣ್ಯರಿಂದ ಪ್ರಮಾಣ ಪತ್ರ ಮತ್ತು ಸ್ಮರಣಿಕೆ ವಿತರಿಸಲಾಯಿತು.

ಪ್ರಾಂಶುಪಾಲರಾದ ಡಾ. ದೀಪು ಪಿ., ಕಾರ್ಯಕ್ರಮದ ಸಂಯೋಜಕರಾದ ಎನ್, ಡಾ. ಪ್ರೀತಿ ಎ.ಆರ್., ಡಾ. ಪ್ರಶಾಂತ್ ಟಿ.ಎಂ., ಲಲಿತಾ, ಕಾಲೇಜಿನ ಬೋಧಕ ಹಾಗೂ ಬೋಧಕೇತರ ಸಿಬ್ಬಂದಿ ಉಪಸ್ಥಿತರಿದ್ದರು.

ಓದುವಿಕೆ, ಕೇಳುವಿಕೆಯಿಂದ ಮನಃ ಪರಿವರ್ತನೆ ಸಾಧ್ಯ

ನಿಡಸೋಸಿ ಜಗದ್ಗುರು ಶ್ರೀ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಅಭಿಮತ



ಬಿಳಿಗಿರಿರಂಗನಬೆಟ್ಟದ ಜೆಎಸ್‌ಎಸ್ ಆಶ್ರಮದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿರುವ ಜೀವನೋತ್ಸಾಹ ಶಿಬಿರದಲ್ಲಿ ಮೇ ನಿಡಸೋಸಿ ಜಗದ್ಗುರು ಶ್ರೀ ಪಂಚಮ ಶಿವಲಿಂಗೇಶ್ವರ ಮಹಾಸ್ವಾಮಿಗಳು ಶುಭಸಂದೇಶ ನೀಡುತ್ತಿರುವುದು. ಉಪ್ಪಿನ ಬೆಟಗೇರಿ ಶ್ರೀಗಳು ಹಾಗೂ ಶಿಬಿರಾರ್ಥಿಗಳಿದ್ದಾರೆ.

ಮೈಸೂರು, ಮೇ 18– ಉತ್ತಮ ಓದುವಿಕೆ ಮತ್ತು ಕೇಳುವಿಕೆಯಿಂದ ಮನಸ್ಸು ಪರಿವರ್ತನೆಗೊಳ್ಳುತ್ತದೆ ಎಂದು ನಿಡಸೋಸಿ ಜಗದ್ಗುರು ಶ್ರೀ ಪಂಚಮ ಶಿವಲಿಂಗೇಶ್ವರ ಸ್ವಾಮೀಜಿ ಹೇಳಿದರು.

ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ, ಶ್ರೀ ಶಿವರಾತ್ರೀಶ್ವರ ಧಾರ್ಮಿಕ ದತ್ತಿ ಹಾಗೂ ಜೆಎಸ್‌ಎಸ್ ಮಹಾವಿದ್ಯಾಪೀಠಗಳ ಸಂಯುಕ್ತಾಶ್ರಯದಲ್ಲಿ ಬಿಳಿಗಿರಿರಂಗನಬೆಟ್ಟದ ಜೆಎಸ್‌ಎಸ್ ಆಶ್ರಮದ ಆವರಣದಲ್ಲಿ ಸಾರ್ವಜನಿಕರಿಗಾಗಿ ಆಯೋಜಿಸಿರುವ ಜೀವನೋತ್ಸಾಹ ಶಿಬಿರದಲ್ಲಿ ಶುಭಸಂದೇಶ ನೀಡುತ್ತ ತಿಳಿಸಿದರು.

ಇಂದು ಮನಸ್ಸು ಸಮಾಧಾನವನ್ನು ಕಳೆದುಕೊಳ್ಳುತ್ತಿದೆ. ಧ್ಯಾನದಿಂದ ಮನಸ್ಸು ಹಿಡಿತಕ್ಕೆ ಬರುತ್ತದೆ. ಮನ, ಚಿತ್ತ, ಬುದ್ಧಿ ಮತ್ತು ಅಹಂಕಾರ ಈ ನಾಲ್ಕು ಅಂಶಗಳನ್ನು ಶುದ್ಧವಾಗಿ ಇಟ್ಟುಕೊಳ್ಳಬೇಕು. ಇವು ನಮ್ಮ ಆಲೋಚನೆಗಳು, ನಿರ್ಧಾರಗಳು ಮತ್ತು ಇಂದ್ರಿಯಗಳನ್ನು ನಿಯಂತ್ರಿಸುತ್ತವೆ. ಹಿಂದೆ ಜೀವನದಲ್ಲಿ ಸಾಕಷ್ಟು ಉತ್ಸಾಹ ಇರುತ್ತಿತ್ತು, ಇಂದು ಎಲ್ಲವೂ ಹಣದ ಮೇಲೆ ನಿಂತಿದೆ. ನಮ್ಮ ಸುತ್ತಲಿನ ಪರಿಸರದಲ್ಲಿಯೇ ಸಾಕಷ್ಟು ಜೀವನೋತ್ಸಾಹದ ಅಂಶಗಳಿವೆ. ಅವುಗಳನ್ನು ಗುರುತಿಸಿ ರೂಢಿಸಿಕೊಳ್ಳಬೇಕು. ಎಲ್ಲರೊಂದಿಗೂ ಉತ್ತಮವಾದ ಬಾಂಧವ್ಯವನ್ನು ಬೆಳೆಸಿಕೊಳ್ಳಬೇಕು ಎಂದು ಹೇಳಿದರು.

ಉಪ್ಪಿನ ಬೆಟಗೇರಿಯ ಶ್ರೀ ಕುಮಾರ ವಿರೂಪಾಕ್ಷ ಸ್ವಾಮಿಗಳು ಜೀವನ ಎಂಬುದೇ ಒಂದು ಉತ್ಸವವಿದ್ದಂತೆ. ಅದನ್ನು ಸಂತೋಷದಿಂದ ನಡೆಸಿಕೊಂಡು ಸಾರ್ಥಕತೆಯನ್ನು ಪಡೆದುಕೊಳ್ಳಬೇಕು. ಜೀವನ ಸುಖ ದುಃಖಗಳ ಮಿಶ್ರಣ. ಕಷ್ಟಗಳು ಹೆಚ್ಚಾದಾಗ ಉತ್ಸಾಹ ಕಳೆದುಕೊಳ್ಳದೆ, ಪ್ರತಿಕ್ಷಣಗಳನ್ನು ಉತ್ಸಾಹದಿಂದ ಅನುಭವಿಸಬೇಕು ಎಂದು ತಿಳಿಸಿದರು.

ವಿದುಷಿ ಮತ್ತು ವಾಗ್ಮಿಗಳಾದ ಡಾ. ಅಮೃತವರ್ಷಿಣಿ ಉಮೇಶರವರು ವೇದಗಳು ಜೀವನ ಮಾರ್ಗದರ್ಶನದ ಕೈಪಿಡಿಗಳು. ವೇದಗಳು ಮಾನವೀಯತೆಯ ಆಧಾರದ ಮೇಲೆ ನಿಂತಿವೆ. ವೇದಗಳ ಹಿನ್ನಲೆಯಲ್ಲಿ ಮನುಷ್ಯನ ಜೀವನವನ್ನು ಅವಲೋಕಿಸಿದಾಗ ಅನೇಕ ವಿಚಾರಗಳು ಗೋಚರಿಸುತ್ತವೆ. ವೇದಗಳ ತತ್ತ್ವಗಳ ಹಿನ್ನೆಲೆಯಲ್ಲಿ ಉತ್ತಮ ಶಾಂತಿಯುತ ಸಮಾಜವನ್ನು ನಿರ್ಮಾಣ ಮಾಡಲು ಸಾಧ್ಯ ವೇದಗಳು ಮಾನವನ ಜೀವನೋತ್ಸಾಹಕ್ಕೆ ದಾರಿದೀಪಗಳಾಗಿವೆ ಎಂದು ತಿಳಿಸಿದರು.

ರಾಷ್ಟ್ರೀಯ ಸ್ವಯಂ ಸೇವಕ ಸಂಘದ ಕಜಂಪಾಡಿ ಸುಬ್ರಹ್ಮಣ್ಯ ಭಟ್ ಅವರು ಮನೆಯೇ ಮೊದಲ ದೇವಾಲಯ ಹಾಗೂ ವಿದ್ಯಾಲಯ. ಅದು ಅತಿಥಿಗಳಿಗೆ ಆದರಾಲಯವಾದರೆ ನೆಮ್ಮದಿ ಮತ್ತು ಆರೋಗ್ಯ ಸಿಗುತ್ತವೆ. ಕುಟುಂಬದಲ್ಲಿ ಎಲ್ಲರೂ ಸೇರಿ ಮಾಡುವ ಭಜನೆಯಿಂದ ಮನಸ್ಸಿಗೆ ನೆಮ್ಮದಿ ದೊರೆಯುತ್ತದೆ. ಸಹಭೋಜನದಿಂದ ರುಚಿ ಹೆಚ್ಚುತ್ತದೆ. ನಮ್ಮ ನಾಡಿನ ಭಾಷೆ ಮತ್ತು ಭೂಷಣಗಳು ಜೀವನಕ್ಕೆ ಬೇರುಗಳಾಗಿವೆ. ಉತ್ತಮವಾದ ಭಾವನೆಗಳನ್ನು ಹೊಂದಿದ್ದರೆ ಜೀವನ ಸಮತೋಲನವಾಗಿರುತ್ತದೆ ಎಂದು ತಿಳಿಸಿದರು. ಸಿಸಿಬಿ ಡಿವೈಎಸ್‌ಪಿ ಎಚ್.ಕೆ. ಮಹಾನಂದ ಮಾತನಾಡಿದರು.



ಶ್ರೀ ಗೋವಿಂದೇಗೌಡ ರವರಿಗೆ
ಹುಟ್ಟು ಹಬ್ಬದ ಶುಭಾಶಯಗಳು



ಪ್ರಥಮ ದರ್ಜೆ ಗುತ್ತಿಗೆದಾರರು ಮತ್ತು ಮೈಸೂರಿನ
ಹೆಸರಾಂತ ವೈಶಾಖ್ ಗ್ರೂಪ್ ಆಫ್ ಹೋಟೆಲ್ಸ್‌ನ
ಮಾಲೀಕರು
(ಹೋಟೆಲ್ ವೈಶಾಖ್ ಇಂಟರ್‌ನಾಷನಲ್,
ಹೋಟೆಲ್ ವೈಶಾಖ್ ರೆಸಿಡೆನ್ಸಿ,
ಹೋಟೆಲ್ ವೈಶಾಖ್ ಕಂಫರ್ಟ್,
ಹೋಟೆಲ್ ರಿಯೋ ಮೆರಿಡಿಯನ್)
ಹಾಗೂ ನೂರಾರು ಕುಟುಂಬದ
ಅನ್ನದಾತರಾದ

ಶ್ರೀ ಗೋವಿಂದೇಗೌಡರಿಗೆ

ಹುಟ್ಟುಹಬ್ಬದ ಶುಭಾಷಯಗಳು.
ತಾಯಿ ಚಾಮುಂಡೇಶ್ವರಿ ನಿಮಗೆ
ಆಯುರಾರೋಗ್ಯ ಕರುಣಿಸಲೆಂದು ಪ್ರಾರ್ಥಿಸುವ
ಆಡಳಿತ ಮಂಡಳಿ ಮತ್ತು ಸಿಬ್ಬಂದಿ ವರ್ಗದವರು

Suprabha Shades Mysuru - 98452 18266



ಶುಭ ಕೋರುವವರು :



ಸಿ. ಪ್ರವೀಣ್ ಕುಮಾರ್
ಶ್ರೀ ಓಂಶಕ್ತಿ ಟೂರ್ಸ್ & ಟ್ರಾವೆಲ್ಸ್ ಮಾಲೀಕರು



ಓಂ **ಶಕ್ತಿ**